
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 28 | ಜುಲೈ 6–12, 2020 | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com



ಪೊಲೀಸ್ ದಮನದ ಆಳ್ವಿಕೆ

ಸರ್ವಾಧಿಕಾರಿಶಾಹಿ ಸಂರಚನೆಯ ಕ್ರೋಢೀಕರಣ





ಕೇರಳದ 'ಫಸ್ಟ್ ಬೆಲ್'

ಡಿಜಿಟಲ್ ಶಿಕ್ಷಣವನು ಪ್ರಜಾಪ್ರಭುತ್ವೀಕರಿಸುವ ಸಾಮೂಹಿಕ ಆಂದೋಲನ

ಖಾಸಗಿ ಆಸ್ಪತ್ರೆಗಳಿಗೆ ಬೇಕು ಕಡಿವಾಣ

ನಮೋ ವೈಫಲ್ಯಕ್ಕೆ ಕಾರ್ಮಿಕ ವರ್ಗದ ಆಕ್ರೋಶ ಜುಲೈ 3, 2020 ದೇಶವ್ಯಾಪಿ ಹೋರಾಟ





ಇಸ್ರೇಲಿ ಅಕ್ರಮ ಭೂಸ್ವಾಧೀನದ ವಿರುದ್ಧ ವ್ಯಾಪಕ ಪ್ರತಿಭಟನೆ

ಪ್ರಧಾನ ಮಂತ್ರಿಗಳ ಪ್ರಕಟಣೆಗಳು ಏನೇನೂ ಸಾಲವು- ಸಿಪಿಐ(ಎಂ) ಪೊಲಿಟ್‌ಬ್ಯುರೊ

ಜನಗಳ ನೋವುಗಳ ಅಪಹಾಸ್ಯ, 8 ಕೋಟಿ ವಲಸೆ ಕಾರ್ಮಿಕರಿಗೆ, 5 ಕೋಟಿ ರೈತರಿಗೆ ವಂಚನೆ

ಪ್ರಧಾನ ಮಂತ್ರಿಗಳು ಜೂನ್ 30ರಂದು ಮಾಡಿರುವ ಪ್ರಕಟಣೆಗಳು ನಮ್ಮ ಕೋಟ್ಯಂತರ ಜನಗಳು ಅನುಭವಿಸುತ್ತಿರುವ ಬದುಕುಳಿಯುವ ಮತ್ತು ಜೀವನೋಪಾಯದ ಬಿಕ್ಕಟ್ಟನ್ನು ಎದುರಿಸಲು ಏನೇನೂ ಸಾಲದಾಗಿದೆ. ಕಳೆದ ಮೂರು ತಿಂಗಳಿಂದ ಜೀವನೋಪಾಯ ಅಥವ ಆಹಾರದಿಂದಲೂ ವಂಚಿತರಾಗಿರುವ ಜನಗಳು ಬದುಕುಳಿಯಲು 5 ಕೆ.ಜಿ. ಆಹಾರಧಾನ್ಯಗಳು ಮತ್ತು ಒಂದು ಕೆ.ಜಿ. ಬೇಳೆಕಾಳುಗಳನ್ನು ಒದಗಿಸಿದರಷ್ಟೇ ಸಾಲದು. ಮುಂದಿನ ಆರುತಿಂಗಳು ಕನಿಷ್ಟ ಪ್ರತಿವ್ಯಕ್ತಿಗೆ ಪ್ರತಿ ತಿಂಗಳು 10 ಕೆ.ಜಿ. ಆಹಾರಧಾನ್ಯಗಳನ್ನು ಖಾತ್ರಿ ಪಡಿಸಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಕನಿಷ್ಟ 14 ಕೋಟಿ ಜನಗಳು ಉದ್ಯೋಗ ಕಳಕೊಂಡಿದ್ದಾರೆ. ಕಳೆದ ಎರಡು ತಿಂಗಳಲ್ಲಿ ಎಂಟು ಕೋಟಿ ವಲಸೆ ಕಾರ್ಮಿಕರು ರಸ್ತೆಗಳ ಮೇಲಿದ್ದರು ಎಂದು ಸರಕಾರವೇ ಒಪ್ಪಿಕೊಂಡಿದೆ. ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಪ್ರತಿ ಕುಟುಂಬಕ್ಕೆ ಮುಂದಿನ ಆರು ತಿಂಗಳು ಕನಿಷ್ಟ ತಿಂಗಳಿಗೆ 7500 ರೂ. ನಗದು ವರ್ಗಾವಣೆ ಅಗತ್ಯವಿದೆ. ಜನಧನ ಖಾತೆಗಳಿಗೆ 500ರೂ. ಪ್ರಕಟಿಸಿರುವುದು ಅತ್ಯಲ್ಪ, ಅದು ಜನಗಳ ನೋವುಗಳ ಅಪಹಾಸ್ಯವಷ್ಟೇ.

ಮರಳಿ ಬಂದ ಎಲ್ಲ ಕಾರ್ಮಿಕರಿಗೆ ಮನರೇಗದ ಅಡಿಯಲ್ಲಿ ಉದ್ಯೋಗ ಒದಗಿಸುವ ದಾವೆ ಒಂದು ಕುತರ್ಕವಷ್ಟೆ, ಹೆಚ್ಚುವರಿ ಒಂದು ಕೋಟಿ ಜನರಿಗೆ ವರ್ಷದಲ್ಲಿ 100 ದಿನಗಳ ಕೆಲಸ ಒದಗಿಸಲು 2.46 ಲಕ್ಷ ಕೋಟಿ ರೂ.ಗಳನ್ನು ಕೊಡಬೇಕಾಗುತ್ತದೆ. ಆದರೆ ಬಜೆಟಿನಲ್ಲಿ ಒದಗಿಸಿರುವ ಮತ್ತು ಲಾಕ್‌ಡೌನಿನಲ್ಲಿ ಪ್ರಕಟಿಸಿರುವ ಕ್ರಮಗಳ ಮೊತ್ತಗಳು ಎಲ್ಲವನ್ನೂ ಸೇರಿಸಿದರೂ 1.5 ಲಕ್ಷ ಕೋಟಿ ರೂ. ಗಿಂತಲೂ ಕಡಿಮೆ. ಆದಾಯ ತರುವ ಉದ್ಯೋಗ ಒದಗಿಸುವುದು ಸಾಧ್ಯವಾಗುವ ವರೆಗೆ ದೇಶಾದ್ಯಂತ ನಿರುದ್ಯೋಗ ಭತ್ಯೆಯನ್ನು ಕೊಡಲೇ ಬೇಕು.

ಪ್ರಧಾನ ಮಂತ್ರಿಗಳು 9 ಕೋಟಿ ರೈತರಿಗೆ 2000 ರೂ. ನಗದು ವರ್ಗಾವಣೆಯಿಂದ ಪ್ರಯೋಜನವಾಗಿದೆ ಎಂದು ಹೇಳಿಕೊಂಡಿದ್ದಾರೆ. 2019ರ ಸಾರ್ವತ್ರಿಕ ಚುನಾವಣೆಗಳ ಮೊದಲು 'ಪ್ರಧಾನ ಮಂತ್ರಿ ಕಿಸಾನ್ ಯೋಜನಾ' ಪ್ರಕಟಿಸಲಾಯಿತು. ಅದು 14 ಕೋಟಿ ರೈತರಿಗೆ ಮೂರು ವಾರ್ಷಿಕ ಕಂತುಗಳಲ್ಲಿ 2000ರೂ. ಒದಗಿಸುವ ಯೋಜನೆ. ಈಗ ಪ್ರಕಟಿಸಿರುವ 2000 ರೂ. ವಾಸ್ತವವಾಗಿ ಈ ಯೋಜನೆಯ ವಿಳಂಬ ಮಾಡಿ ಕೊಡುತ್ತಿರುವ ಎರಡನೇ ಕಂತು. ಇದು ಹೆಚ್ಚುವರಿ ಪರಿಹಾರವೇನೂ ಅಲ್ಲ, ಈ ಮೊದಲೇ ಪ್ರಕಟಿಸಿರುವುದನ್ನು ಹೊಸ ಪೊಟ್ಟಣ ಕಟ್ಟಿ ಕೊಡಲಾಗುತ್ತಿದೆ. ಅಲ್ಲದೆ ಆ ಯೋಜನೆಯಲ್ಲಿ 14 ಕೋಟಿ ರೈತರಿಗೆ ಕೊಡುವುದಾಗಿ ಹೇಳಲಾಗಿತ್ತು. ಅದೀಗ 9 ಕೋಟಿಗೆ ಇಳಿದಿದೆ. ಅಂದರೆ 5 ಕೋಟಿ ರೈತರಿಗೆ ಈ ಅಲ್ಪ ಮೊತ್ತವನ್ನು ಕೂಡ ವಂಚಿಸಲಾಗಿದೆ.

ತನ್ನ ಸರಕಾರದ ಅಡಿಯಲ್ಲಿ ಭಾರತ ಕೊವಿಡ್ ಮಹಾಮಾರಿಯನ್ನು ಪ್ರಶಂಸಾರ್ಹ ರೀತಿಯಲ್ಲಿ ಎದುರಿಸಿದೆ ಎಂದು ಪ್ರಧಾನ ಮಂತ್ರಿ ಮೋದಿ ಹೇಳಿಕೊಂಡಿದ್ದಾರೆ. ಜಗತ್ತಿನಲ್ಲೇ ಅತಿ ಕಡಿಮೆ ತಪಾಸಣೆ ದರ ಹೊಂದಿರುವ ದೇಶಗಳಲ್ಲಿ ಒಂದಾಗಿದ್ದರೂ ಭಾರತ ಈಗ ಅಮೆರಿಕ ಮತ್ತು ಬ್ರೆಝಿಲ್ ನಂತರ ಅತಿ ಹೆಚ್ಚು ಸೋಂಕಿತರ ಸಂಖ್ಯೆಯನ್ನು ಹೊಂದಿದೆ. ಅಲ್ಲದೆ ಸೋಂಕು ಖಾತ್ರಿಯಾಗಿರುವವರ ಮತ್ತು ಸಾವುಗಳ ಸಂಖ್ಯೆ ವಿಪತ್ಕಾರೀ ರೀತಿಯಲ್ಲಿ ಏರುತ್ತಲೇ ಇದೆ. ಈಗಲಾದರೂ ಕೇಂದ್ರ ಸರಕಾರ ಯುದ್ಧೋಪಾದಿಯಲ್ಲಿ ಆರೋಗ್ಯ ಸೌಕರ್ಯಗಳನ್ನು ಹೆಚ್ಚಿಸಬೇಕಾಗಿದೆ, ಎಲ್ಲ ಆರೋಗ್ಯ ಕಾರ್ಯಕರ್ತರಿಗೆ ವೈಯಕ್ತಿಕ ಸುರಕ್ಷತಾ ಸಾಧನ(ಪಿಪಿಇ)ಗಳನ್ನು ಒದಗಿಸಬೇಕಾಗಿದೆ ಮತ್ತು ಸಾರ್ವತ್ರಿಕ ಆರೋಗ್ಯ ರಕ್ಷಣೆ ಒದಗಿಸಬೇಕಾಗಿದೆ.

ಮಹಾಮಾರಿಯನ್ನು ಎದುರಿಸಲೆಂದು ಪ್ರಧಾನ ಮಂತ್ರಿಗಳ ಹೆಸರಲ್ಲಿ ಇರುವ ಖಾಸಗಿ ಟ್ರಸ್ಟ್ ಸಂಗ್ರಹಿಸಿರುವ ಸಾವಿರಾರು ಕೋಟಿ ರೂ.ಗಳನ್ನು ತಕ್ಷಣವೇ ಬಿಡುಗಡೆ ಮಾಡಿ ಈ ಕೆಳಗಿನವುಗಳನ್ನು ಖಾತ್ರಿಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ:

- ಸಾರ್ವಜನಿಕ ಆರೋಗ್ಯ ಸೌಕರ್ಯಗಳನ್ನು ಹೆಚ್ಚಿಸಬೇಕು.
- ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಎಲ್ಲ ಕುಟುಂಬಗಳಿಗೆ ಆರು ತಿಂಗಳು 7500ರೂ. ತಿಂಗಳಿಗೆ ನಗದು ವರ್ಗಾವಣೆ ಮಾಡಬೇಕು
- ಮುಂದಿನ ಆರು ತಿಂಗಳು ಆಹಾರದ ಅಗತ್ಯವಿರುವ ಪ್ರತಿ ವ್ಯಕ್ತಿಗೆ ತಿಂಗಳಿಗೆ 10 ಕೆ.ಜಿ. ಆಹಾರಧಾನ್ಯಗಳನ್ನು ಉಚಿತವಾಗಿ ಒದಗಿಸಬೇಕು.

ಭಾರತೀಯ ರೈಲ್ವೆಯ ಖಾಸಗೀಕರಣ : ಸ್ವಯಂ-ದಾಸ್ಯವೇ ಹೊರತು ಸ್ವಾವಲಂಬನೆಯಲ್ಲ

“ಸಾರ್ವಜನಿಕ ಸೇವೆಗಳನ್ನು ಖಾಸಗೀಕರಣ ದುರ್ಬಲಗೊಳಿಸುತ್ತದೆ- ಇದು ಕೊವಿಡ್ ಪಾಠ”

ಭಾರತೀಯ ರೈಲ್ವೆಯ ಖಾಸಗೀಕರಣದ, ನಿರ್ದಿಷ್ಟವಾಗಿ ಭಾರತೀಯ ರೈಲ್ವೆಯ ಜಾಲವನ್ನು ಬಳಸಿಕೊಂಡು ಖಾಸಗಿ ಹೂಡಿಕೆದಾರರು ಪ್ರಯಾಣಿಕ ರೈಲುಗಳನ್ನು ಓಡಿಸಲು ಅವಕಾಶ ನೀಡುವ ನಿರ್ಧಾರವನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ವಿರೋಧಿಸಿದೆ. ಇದು ಸ್ವತಂತ್ರ ಭಾರತದಲ್ಲಿ ಮೊದಲ ಬಾರಿ ಸಂಭವಿಸುತ್ತಿದೆ. ಶತಮಾನಗಳಿಂದ ಕಟ್ಟಿದ ಮೂಲರಚನೆಗಳನ್ನು ಹೊಂದಿರುವ ಒಂದು ಜಾಲವನ್ನು ಬಳಸಿಕೊಂಡು ಖಾಸಗಿಯವರು ಪ್ರಯಾಣಿಕ ರೈಲುಗಳನ್ನು ಓಡಿಸಿ ಸೂಪರ್ ಲಾಭಗಳನ್ನು ಗಳಿಸಲು ಅವಕಾಶ ಕಲ್ಪಿಸಲಾಗುತ್ತಿದೆ.

ಭಾರತೀಯ ರೈಲ್ವೆ ನಮ್ಮ ದೇಶವನ್ನು ಒಂದುಗೂಡಿಸುವ ಮತ್ತು ನಮ್ಮ ಕೋಟ್ಯಂತರ ಜನಗಳಿಗೆ ಸಾರ್ವಜನಿಕ ಸಾರಿಗೆಯನ್ನು ಒದಗಿಸುವ ಅತ್ಯಂತ ಮಹತ್ವದ ಜಾಲವಾಗಿದೆ. ನಮ್ಮ ಕೋಟ್ಯಂತರ ಜನಗಳ ಜೀವನೋಪಾಯ ರೈಲ್ವೆಯನ್ನು ಅವಲಂಬಿಸಿದೆ. ಇಂತಹ ಖಾಸಗೀಕರಣ ಭಾರತದ ಸ್ವಾವಲಂಬನೆಯ ಆಧಾರವನ್ನೇ ಶಿಥಿಲಗೊಳಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದು ಉದ್ಯೋಗಾವಕಾಶಗಳನ್ನು ನಿರ್ಮಿಸುತ್ತದೆ ಎಂಬ ಸರಕಾರದ ತರ್ಕವನ್ನು ಪ್ರಶ್ನಿಸಿದೆ. ಇಂತಹ ಖಾಸಗೀಕರಣದ ಅನುಭವಗಳು ತದ್ವಿರುದ್ಧವಾಗಿವೆ. ವಾಸ್ತವವಾಗಿ ಖಾಸಗೀಕರಣ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ನಷ್ಟಗಳನ್ನು ಉಂಟು ಮಾಡುತ್ತದೆ, ಮತ್ತು ಕೋಟ್ಯಂತರ ನೌಕರರಲ್ಲಿ ಅಭದ್ರತೆಯನ್ನು ಉಂಟು ಮಾಡುತ್ತದೆ ಎಂದು ಅದು ಹೇಳಿದೆ.

ಕೇಂದ್ರ ಸರಕಾರ ಮತ್ತು ಪ್ರಧಾನ ಮಂತ್ರಿಗಳು ಈ ರೀತಿಯಲ್ಲಿ ಸಾರ್ವಜನಿಕ ಸಾರಿಗೆಯ ಖಾಸಗೀಕರಣ ಜನಗಳ ಮೇಲೆ ಅಭೂತಪೂರ್ವ ಕಷ್ಟಗಳನ್ನು ಮತ್ತು ಹೊರೆಗಳನ್ನು ಹಾಕಿದೆ ಎಂಬ ಅಂತರ್ರಾಷ್ಟ್ರೀಯ ಅನುಭವಗಳಿಂದ ಪಾಠ ಕಲಿಯಲು ನಿರಾಕರಿಸುತ್ತಿದ್ದಾರೆ. ಭಾರತೀಯ ರೈಲ್ವೆ ಒಂದು ಸಾರ್ವಜನಿಕ ಸೇವೆ. ಅದು ಲಾಭ ಉತ್ಪತ್ತಿ ಮಾಡುವ ಉದ್ದಿಮೆ ಅಲ್ಲ. ಅದರ ಸ್ವರೂಪವನ್ನು ಹೀಗೆ ಶಿಥಿಲಗೊಳಿಸಲು ಸಾಧ್ಯವಿಲ್ಲ.

ಈ ನಿರ್ಧಾರ ದೇಶ ಮತ್ತು ಜನತೆ ವೇಗವಾಗಿ ಹೆಚ್ಚುತ್ತಿರುವ ಕೊವಿಡ್ ಮಹಾಮಾರಿಯನ್ನು ಎದುರಿಸುವ ಗಂಭೀರ ಪ್ರಯತ್ನಗಳನ್ನು ನಡೆಸುತ್ತಿರುವಾಗ ಬಂದಿದೆ. ಜಾಗತಿಕವಾಗಿಯೂ, ಮತ್ತು ನಮ್ಮ ದೇಶದಲ್ಲೂ ಆರೋಗ್ಯ ಸೌಲಭ್ಯಗಳ ಲಂಗುಲಗಾಮಿಲ್ಲದ ಖಾಸಗೀಕರಣ ಹೇಗೆ ಈ ವೈರಸ್ ಮೇಲಿನ ಹೋರಾಟಕ್ಕೆ ಅಡಚಣೆಗಳನ್ನು ಉಂಟು ಮಾಡಿದೆ, ಪ್ರತಿಕೂಲ ಪರಿಣಾಮಗಳನ್ನು ಬೀರಿದೆ ಎಂಬುದನ್ನು ನಾವೀಗ ನೋಡುತ್ತಿದ್ದೇವೆ. ಆರೋಗ್ಯ, ಶಿಕ್ಷಣ, ಸಾರ್ವಜನಿಕ ಸಾರಿಗೆ ಸಾರ್ವಜನಿಕ ಸೇವೆಗಳು, ಅವನ್ನು ಗಟ್ಟಿಗೊಳಿಸಬೇಕು, ಖಾಸಗೀಕರಣದ ಮೂಲಕ ದುರ್ಬಲಗೊಳಿಸಬಾರದು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕೇಂದ್ರ ಸರಕಾರ ಈ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಭಾರತೀಯ ರೈಲ್ವೆ ದೇಶದ ಬಹುಮೂಲ್ಯ ಸಂಪತ್ತು – ಇದನ್ನು ಮೋದಿ ಸರಕಾರ ಮಾರಾಟಕ್ಕಿಟ್ಟಿದೆ–ಸಿಐಟಿಯು

ಮೋದಿ ಸರಕಾರ ಕೊವಿಡ್ ಕಾಲವನ್ನು ಮತ್ತೊಂದು ಖಾಸಗೀಕರಣ ಕ್ರಿಯೆಯನ್ನು ಹರಿಯಬಿಡಲು ದುರುಪಯೋಗ ಪಡಿಸಿಕೊಳ್ಳುತ್ತಿದೆ. 109 ಜೊತೆ ಪ್ರಯಾಣಿಕ ರೈಲುಗಳನ್ನು ಓಡಿಸಲು ದೇಶೀ ಮತ್ತು ವಿದೇಶಿ ಖಾಸಗಿ ಕಾರ್ಪೊರೇಟ್‌ಗಳಿಂದ “ಅರ್ಹತೆಯ ಕೋರಿಕೆ(ಆರ್‌ಎಫ್‌ಕ್ಯು)ಗಳನ್ನು ಆಹ್ವಾನಿಸಲಾಗಿದೆ ಎಂದು ವರದಿಯಾಗಿದೆ. ಭಾರತೀಯ ರೈಲ್ವೆಯ ಜಾಲದಲ್ಲಿ ಈ 109 ಅತಿವೇಗದ ರೈಲುಗಳನ್ನು ಓಡಿಸಲಾಗುವುದು, ಇದನ್ನು 12 ಗೊಂಚಲುಗಳಾಗಿ ಮಾಡಲಾಗಿದೆ. ಇವುಗಳ ಡ್ರೈವರುಗಳು ಮತ್ತು ಗಾರ್ಡ್‌ಗಳು ಭಾರತೀಯ ರೈಲ್ವೆಯವರಾಗಿರುತ್ತಾರೆ ಮತ್ತು ಉಳಿದ ನೌಕರರು ಖಾಸಗಿ ನಿರ್ವಾಹಕರದ್ದು ಆಗಿರುತ್ತಾರೆ ಎನ್ನಲಾಗಿದೆ. ರೈಲುಗಳ ಖರೀದಿ, ನಿರ್ವಹಣೆ, ಉಸ್ತುವಾರಿ ಮತ್ತು ಪ್ರಯಾಣಿಕರ ಸುರಕ್ಷತೆಯ ಹೊಣೆ ಈ ಖಾಸಗಿ ನಿರ್ವಾಹಕರದ್ದು.

ಇದು ಮೋದಿ ಸರಕಾರದ ಒಂದು ರಾಷ್ಟ್ರ-ವಿರೋಧಿ ನಡೆ ಎಂದು ಸಿಐಟಿಯು ಈ ನಿರ್ಧಾರವನ್ನು ಬಲವಾಗಿ ಖಂಡಿಸಿದೆ. ಭಾರತೀಯ ರೈಲ್ವೆ ದೇಶದ ಹೆಮ್ಮೆ, ಮತ್ತು ಅದರ ಬಹುಮೂಲ್ಯ ಸಂಪತ್ತು. ಇದನ್ನು ಮೋದಿ ಸರಕಾರ ಮಾರಾಟಕ್ಕಿಟ್ಟಿದೆ. ತನ್ನ ಈ ರಾಷ್ಟ್ರ-ವಿರೋಧಿ ಧೋರಣೆಯನ್ನು ತ್ವರಿತವಾಗಿ ಈಡೇರಿಸಿಕೊಳ್ಳಲು ಸರಕಾರ ಲಾಕ್‌ಡೌನ್ ಅವಧಿಯನ್ನು ಆಯ್ದುಕೊಂಡಿರುವುದು ಭಯಭೀತಗೊಳಿಸುವ ಸಂಗತಿ ಎಂದು ಸಿಐಟಿಯು ಹೇಳಿದೆ.

ರೈಲ್ವೆಯ ಹಳಿ ಮುಂತಾದ ಸರಂಜಾಮುಗಳು, ಸಿಗ್ನಲ್ ಮತ್ತು ವಿದ್ಯುತ್ ವ್ಯವಸ್ಥೆಗಳ ಉತ್ಪಾದನೆ ಮತ್ತು ನಿರ್ವಹಣೆ ಹಾಗೂ ಸಮರ್ಪಿತ ಸರಕು ಸಾಗಾಣಿಕೆಯಲ್ಲಿ 100ಶೇ. ಎಫ್‌ಡಿಐಗೆ ಬಿಜೆಪಿ ಸರಕಾರ ಈಗಾಗಲೇ ಅನುಮತಿ ನೀಡಿದೆ. ರೈಲ್ವೆ ನಿಲ್ದಾಣಗಳ ಮರು-ಅಭಿವೃದ್ಧಿ ಹೆಸರಲ್ಲಿ ಅದು ರೈಲ್ವೆ ನಿಲ್ದಾಣಗಳನ್ನು, ಅವುಗಳ ಅಪಾರ ಆಸ್ತಿ-ಪಾಸ್ತಿಗಳೊಂದಿಗೆ ಖಾಸಗಿ ಕಾರ್ಪೊರೇಟ್‌ಗಳಿಗೆ ವಹಿಸಿ ಕೊಟ್ಟಿದೆ. ಖಾಸಗಿ ನಿರ್ವಾಹಕರ ಉದ್ದೇಶ ಖಂಡಿತಾ ಜನಗಳಿಗೆ ಅಗ್ಗದ ಸಾರಿಗೆ ಸೌಕರ್ಯವನ್ನು ಒದಗಿಸುವುದಲ್ಲ, ಬದಲಿಗೆ ತಮ್ಮ ಲಾಭಗಳನ್ನು ಗರಿಷ್ಟ ಮಟ್ಟಕ್ಕೆ ಏರಿಸುವುದೇ ಆಗಿದೆ. ಇದರಿಂದಾಗಿ ರೈಲ್ವೆ ಸಾರಿಗೆಯನ್ನು ಬಳಸಬೇಕಾದ ಜನಗಳು ವಿಪರೀತ ರೈಲ್ವೆ ದರಗಳ ಹೊರಲಾಗದ ಹೊರೆಗೆ ಒಳಗಾಗುತ್ತಾರೆ.

ಈ ಕ್ರಮದಿಂದ 30,000 ಕೋಟಿ ರೂ.ಗಳ ಹೂಡಿಕೆ ಬರುತ್ತದೆ, ಮತ್ತು ಉದ್ಯೋಗಾವಕಾಶ ನಿರ್ಮಾಣವಾಗುತ್ತದೆ ಎಂದು ಸರಕಾರ ಹೇಳಿಕೊಳ್ಳುತ್ತಿದೆ.

ಪುಟ 13 ನೋಡಿ

ಪಾರದರ್ಶಕ ಸಮಾಲೋಚನೆ ನಡೆಸದೆ ಚುನಾವಣಾ ವಿಧಾನಗಳಲ್ಲಿ ಬದಲಾವಣೆ

ಅಂಚೆ ಮತದಾನ ಕ್ರಮಕ್ಕೆ ಏಕೆ ಈ ತರಾತುರಿ?- ಚುನಾವಣಾ ಆಯುಕ್ತರಿಗೆ ಯೆಚುರಿ ಪತ್ರ

ಚುನಾವಣಾ ಆಯೋಗ ರಾಜಕೀಯ ಪಕ್ಷಗಳೊಡನೆ ಯಾವುದೇ ಸಮಾಲೋಚನೆ ನಡೆಸದೆ ಏಕಪಕ್ಷೀಯವಾಗಿ ಚುನಾವಣಾ ವಿಧಾನಗಳಲ್ಲಿ ಬದಲಾವಣೆಗಳನ್ನು ತರುತ್ತಿದೆ. ಇದು ಸರಿಯಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮುಖ್ಯ ಚುನಾವಣಾ ಆಯುಕ್ತ ಸುನಿಲ್ ಅರೋರಾ ರವರಿಗೆ ಜೂನ್ 29ರಂದು ಬರೆದಿರುವ ಪತ್ರದಲ್ಲಿ ಆಕ್ಷೇಪಿಸಿದ್ದಾರೆ. ಮಾಧ್ಯಮಗಳ ವರದಿಗಳ ಪ್ರಕಾರ ಭಾರತದ ಚುನಾವಣಾ ಆಯೋಗ 64 ವರ್ಷಕ್ಕೆ ಮೇಲ್ಪಟ್ಟ ಮತದಾರರಿಗೆ ಅಂಚೆ ಮತದಾನವನ್ನು ಬಳಸಲು ಅವಕಾಶ ನೀಡುವ ಕ್ರಮವನ್ನು ಕೈಗೊಳ್ಳುತ್ತಿದೆ. ನವಂಬರ್2020ರಲ್ಲಿ ನಡೆಯಲಿರುವ ಬಿಹಾರ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ತರಾತುರಿಯಿಂದ ಈ ಕ್ರಮವನ್ನು ಆಯೋಗ ಕೈಗೊಂಡಿದೆ ಎನ್ನಲಾಗುತ್ತಿದೆ. ಇದು ಆತಂಕಕಾರಿ ಸುದ್ದಿ ಎಂದು ಯೆಚುರಿ ಹೇಳಿದ್ದಾರೆ.

ಚುನಾವಣಾ ಆಯೋಗ ಯಾವುದೇ ಕ್ರಮವನ್ನು ಕೈಗೊಳ್ಳುವ ಮೊದಲು ರಾಜಕೀಯ ಪಕ್ಷಗಳೊಡನೆ ಸಮಾಲೋಚನೆಗಳನ್ನು ನಡೆಸುವ ಪದ್ಧತಿಯನ್ನು ಈ ಹಿಂದೆ ಅನುಸರಿಸಿಕೊಂಡು ಬರುತ್ತಿತ್ತು. ಆದರೆ ಈಗ ಅದಕ್ಕೆ ವ್ಯತಿರಿಕ್ತವಾಗಿ ಏಕಪಕ್ಷೀಯವಾಗಿ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಚುನಾವಣಾ ಆಯೋಗದ ಕೋರಿಕೆಯ ಮೇರೆಗೆ ಕಾನೂನು ಮಂತ್ರಾಲಯ ಈ ಮೊದಲು 80 ವರ್ಷಕ್ಕೆ ಮೇಲ್ಪಟ್ಟ ವಿಕಲಾಂಗತೆ ಇರುವ ವ್ಯಕ್ತಿಗಳು ಸಾರ್ವತ್ರಿಕ ಚುನಾವಣೆಗಳು ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಅಂಚೆ ಮತದಾನ(ಪೋಸ್ಟಲ್ ಬ್ಯಾಲೆಟ್)ವನ್ನು ಆಯ್ದುಕೊಳ್ಳಲು ಅವಕಾಶವಾಗುವಂತೆ ಚುನಾವಣಾ ನಡಾವಳಿ ನಿಯಮಗಳಲ್ಲಿ ತಿದ್ದುಪಡಿ ತಂದಿತ್ತು. ಆನಂತರ ಕೊವಿಡ್-19 ಮಹಾಮಾರಿಯ ಸಂದರ್ಭದಲ್ಲಿ ಈ ನಿಯಮದಲ್ಲಿ ಇನ್ನಷ್ಟು ತಿದ್ದುಪಡಿ ತರಬೇಕು ಎಂದು ಸರಕಾರವನ್ನು ಕೇಳಿತ್ತು. ಜೂನ್ 19ರಂದು ಕಾನೂನು ಮಂತ್ರಾಲಯ 65 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾದವರು ಅಂಚೆ ಮತದಾನವನ್ನು ಆಯ್ದುಕೊಳ್ಳಲು ಅನುವು ಮಾಡಿಕೊಡುವ ಹೊಸ ಬದಲಾವಣೆಯ ಅಧಿಸೂಚನೆ ಹೊರಡಿಸಿದೆ ಎಂದು ವರದಿಯಾಗಿದೆ. ಈ ತಿದ್ದುಪಡಿಯಾದ ನಿಯಮಗಳು “ಕೊವಿಡ್ ಶಂಕಿತ ಅಥವ ಬಾಧಿತ ವ್ಯಕ್ತಿಗಳು” ಕೂಡ ಈ ಆಯ್ಕೆಯನ್ನು ಮಾಡಿಕೊಳ್ಳಲು ಅನುವು ಮಾಡಿ ಕೊಟ್ಟಿವೆ.

ಭಾರತದ ಚುನಾವಣಾ ಆಯೋಗಕ್ಕೆ ಸಂವಿಧಾನ 324ನೇ ಕಲಮಿನ ಅಡಿಯಲ್ಲಿ ಚುನಾವಣೆಗಳ “ಹತೋಟಿ ಮತ್ತು ಉಸ್ತುವಾರಿ”ಗೆ ವ್ಯಾಪಕ ಮತ್ತು ಸಮಗ್ರ ಅಧಿಕಾರಗಳನ್ನು ಕೊಟ್ಟಿದ್ದರೂ ಈ ಅಧಿಕಾರವನ್ನು ತಾವು ಏಕಪಕ್ಷೀಯವಾಗಿ ಚಲಾಯಿಸುವುದಿಲ್ಲ ಎಂದು ಆಯುಕ್ತರುಗಳು ಒತ್ತಿ ಹೇಳುತ್ತ ಬಂದಿದ್ದರು. ಇದು ಜನತೆಯನ್ನು ಪ್ರತಿನಿಧಿಸುವ ರಾಜಕೀಯ ಪಕ್ಷಗಳು ಪ್ರಮುಖ ಭಾಗೀದಾರರು ಎಂದು ಮಾನ್ಯ ಮಾಡುವ ಒಂದು ಅತ್ಯಂತ ಆರೋಗ್ಯಕರ ಪದ್ಧತಿಯನ್ನು ನಿರ್ಮಿಸಿದೆ. ಚುನಾವಣೆಗಳನ್ನು ನಡೆಸುವ ವಿಧಾನಗಳಲ್ಲಿ ಬದಲಾವಣೆಗಳನ್ನು

ಪುಟ 14 ನೋಡಿ

ಸಂಪಾದಕೀಯ

ಖಾಸಗಿ ಆಸ್ಪತ್ರೆಗಳಿಗೆ ಬೇಕು ಕಡಿವಾಣ

ದೇಶದಲ್ಲಿಂದು ಖಾಸಗಿ ಆಸ್ಪತ್ರೆಗಳು ಕೋವಿಡ್–19 ಸೋಂಕಿತರಿಂದ ಭಾರೀ ಮೊತ್ತದ ಹಣ ಪಡೆಯುತ್ತಿದ್ದಾರೆ ಎಂಬ ಆತಂಕದ ಚರ್ಚೆ ಎಲ್ಲೆಡೆ ಕೇಳಿಬರುತ್ತಿದೆ. ಆತಂಕಕ್ಕೆ ಒಳಗಾಗಿರುವವರು ಕೇವಲ ಬಡ ವರ್ಗದ ಶ್ರಮಜೀವಿಗಳು ಮಾತ್ರವಲ್ಲ, ನಿಗದಿತ ಆದಾಯ ಸಂಪಾದಿಸುತ್ತಿರುವ ಮಧ್ಯಮ ಹಾಗೂ ಮೇಲ್ವರ್ಗದ ಜನಗಳು ಸಹ ಖಾಸಗಿ ಆಸ್ಪತ್ರೆಗಳ ಭಾರವಾದ ಬಿಲ್‌ಗಳಿಗೆ ಭಯ ಬೀಳುತ್ತಿದ್ದಾರೆ. “ಯಾಕ್ರೀ ನೀವು ಸಾವನ್ನೇ ಎದುರು ನೋಡುತ್ತಿರುವ ಕೋವಿಡ್–19 ರೋಗಿಗಳಿಂದ ಲಕ್ಷಗಟ್ಟಲೆ ರೂಪಾಯಿ ವಸೂಲಿ ಮಾಡುತ್ತೀರಾ”? ಎಂದು ಯಾರಾದರೂ ವೈದ್ಯ ಮಿತ್ರರನ್ನು ಕೇಳಿದರೆ ಅವರು ಕೊಡುವ ಉತ್ತರ; “ಕಳೆದ ಎರಡು ತಿಂಗಳಿಂದ ನಮ್ಮ ಆಸ್ಪತ್ರೆ ಬಂದ್‌ಇಟ್ಟು ನಾವು ಯಾವುದೇ ಆದಾಯವಿಲ್ಲದೆ ಬರಿಗೈಯಲ್ಲಿ ಕೂತಿರಲಿಲ್ವಾ ?” ಎಂದು ಮುಲಾಜ್ ಇಲ್ಲದೆ ಹೇಳುತ್ತಾರೆ.

ದೇಶದ ದೊಡ್ಡ ದೊಡ್ಡ ಸುಸಜ್ಜಿತ ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೇವೆ ಪಡೆಯಲು ಭಾರೀ ದೊಡ್ಡ ಮೊತ್ತದ ಹಣವನ್ನು ತೆರಬೇಕಾಗುತ್ತದೆ ಎಂಬುದು ಗುಟ್ಟಿನ ವಿಷಯವಲ್ಲ. ಆದರೆ ಕೋವಿಡ್–19 ದಂತಹ ಸಾಂಕ್ರಾಮಿಕ ರೋಗಕ್ಕೆ ತುತ್ತಾದ ಜನಸಾಮಾನ್ಯರಿಂದಲೂ ಇಷ್ಟೊಂದು ದೊಡ್ಡ ಮೊತ್ತವನ್ನು ವಸೂಲಿ ಮಾಡುವುದು ನ್ಯಾಯವೇ? ಇತ್ತೀಚೆಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಕೊರೊನಾ ರೋಗಿಗಳು ವೈದ್ಯಕೀಯ ಆರೈಕೆ ಪಡೆಯಲು ವಿಪರಿತವಾದ ಕನಿಷ್ಟ ದರಗಳನ್ನು ನಿಗದಿಪಡಿಸಿದೆ. ದಿನಕ್ಕೆ ರೂ. ಹತ್ತು ಸಾವಿರವರೆಗೂ ಶುಲ್ಕವನ್ನು ನಿಗದಿಪಡಿಸಲಾದ್ದು ಖಾಸಗಿ ವೈದ್ಯರು ಅದಕ್ಕಿಂತ ದೊಡ್ಡ ಮೊತ್ತವನ್ನೇ ಕಿತ್ತುಕೊಳ್ಳುತ್ತಾರೆ.

ಇಷ್ಟೊಂದು ದುಬಾರಿ ಖಾಸಗಿ ಆಸ್ಪತ್ರೆಗಳು ನಮಗೆ ಬೇಕಾ? ನಮ್ಮ ದೇಶದಲ್ಲಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಇರುವ ಹಾಸಿಗೆಗಳಿಗಿಂತ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚು ಹಾಸಿಗೆಗಳಿವೆ. ಒಂದು ಲೆಕ್ಕಾಚಾರದ ಪ್ರಕಾರ ಭಾರತದಲ್ಲಿ 19 ಲಕ್ಷ ಆಸ್ಪತ್ರೆ ಹಾಸಿಗೆಗಳು, 95,000 ತೀವ್ರ ನಿಗಾ ಘಟಕದ ಹಾಸಿಗೆಗಳು, ಮತ್ತು 48,000 ವೆಂಟಿಲೇಟರ್ ಗಳು ಇವೆ. ಇವುಗಳಲ್ಲಿ ಬಹಳಷ್ಟು ಇರುವುದು ಉತ್ತರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕೇರಳ, ಕರ್ನಾಟಕ, ತೆಲಂಗಾಣ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ. ತಮಿಳುನಾಡು, ದೆಹಲಿ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳನ್ನು ಬಿಟ್ಟು ಉಳಿದ ರಾಜ್ಯಗಳಲ್ಲಿನ ಸರ್ಕಾರಿ ಆಸ್ಪತ್ರೆಗಳಿಲ್ಲಿ ಇರುವ ಹಾಸಿಗೆ ಮತ್ತು ವೆಂಟಿಲೇಟ್‌ರ್‌ಗಳಿಗಿಂತ ಹೆಚ್ಚು ಖಾಸಗಿ ಆಸ್ಪತ್ರೆಗಳಲ್ಲಿವೆ.

ಖಾಸಗಿ ಆಸ್ಪತ್ರೆಗಳಲ್ಲಿ ಇಷ್ಟೊಂದು ಸೌಕರ್ಯಗಳು ಇದ್ದು ರೋಗಿಗಳನ್ನು ಅವುಗಳು ಕೈ ಬೀಸಿ ಕರೆಯುತ್ತಿರಲು ಒಂದು ಪ್ರಮುಖ ಕಾರಣ, ಸಾರ್ವಜನಿಕ ಆಸ್ಪತ್ರೆಗಳಲ್ಲಿನ ಅನೇಕ ಕೊರತೆಗಳು. ಲಾಕ್‌ಡೌನ್ ಅವಧಿಯಲ್ಲಂತೂ ಬೆಂಗಳೂರಿನ ಕೆಲವು ಸರ್ಕಾರಿ ಆಸ್ಪತ್ರೆಗಳಲ್ಲಿನ ಕೋವಿಡ್–19 ಸೋಕಿತರಿಗೆ ನರಕ ದರ್ಶನವಾಯಿತು ಎಂದು ಮಾಧ್ಯಮಗಳಲ್ಲಿ ಬಣ್ಣಿಸಲಾಯಿತು. ಹಾಸಿಗೆಗಳಿಲ್ಲ, ವೆಂಟಿಲೇಟರ್ಗಳು ಇಲ್ಲ. ಔಷಧಿ ಕಿಟ್‌ಗಳಿಲ್ಲ. ಕನಿಷ್ಟ ಮಾನವೀಯತೆಯ ಆರೈಕೆ ಇಲ್ಲ. ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದರೂ ಚಿಕಿತ್ಸೆ ಸಿಗದೆ ಜೀವ ಬಿಟ್ಟ ಹೃದಯ ವಿದ್ರಾವಕ ಘಟನೆಗಳು ವರದಿಯಾಗಿವೆ.

ಸ್ವಾತಂತ್ರ್ಯ ನಂತರ ಮೊದಲಿನ ಕೆಲವು ದಶಕಗಳಲ್ಲಿ ಸಾರ್ವಜನಿಕ ಆರೋಗ್ಯ ಸೇವೆಗೆ ಸ್ವಲ್ಪವಾದರೂ ಆಧ್ಯತೆ ದೊರಕಿತ್ತು. ರೋಗಗಳನ್ನು ತಡೆಗಟ್ಟುವುದು, ರೋಗ ನಿರೋಧಕ ಶಕ್ತಿಯನ್ನು ಬೆಳೆಸುವುದು, ಗರ್ಭಿಣಿಯರ ಮತ್ತು ಬಾಣಂತಿಯರಿಗೆ ಉತ್ತಮ ಆರೈಕೆಯನ್ನು ಒದಗಿಸುವುದು ಮುಂತಾದ ಕ್ರಮಗಳಿಗೆ ಪ್ರಾಮುಖ್ಯತೆ ದೊರೆಯಿತು. ಆದರೆ, ಮುಂದೆ ನವ ಉದಾರೀಕರಣದ ಪ್ರವೇಶದೊಂದಿಗೆ ಮೇಲ್ ಮಧ್ಯಮ ವರ್ಗವೊಂದು ಬೆಳೆದು ಬರುವಂತಾಯಿತು. ಅವರ ಆದಾಯ ಹೆಚ್ಚಾಯಿತು. ಒಳ್ಳೆಯ ಗುಣಮಟ್ಟದ ಆರೋಗ್ಯ ಸೇವೆಗಾಗಿ ಅವರ ಬೇಡಿಕೆ ಹಿಗ್ಗುವಂತಾಯಿತು. ಖಾಸಗೀ ವೈಧ್ಯಕೀಯ ಕ್ಷೇತ್ರವು ಇದರ ಲಾಭ ಪಡೆಯಿತು. ಹೀಗಾಗಿ ಖಾಸಗಿ ಆರೋಗ್ಯ ಕ್ಷೇತ್ರ ಒಂದು ಲಾಭದಾಯಕ ಕ್ಷೇತ್ರವಾಗಿ ಬೆಳೆದು ಬಂತು.

ಇದರ ಜೊತೆ ಜೊತೆಯಲ್ಲಿ ಸಾರ್ವಜನಿಕ ಆರೋಗ್ಯ ಸೇವೆಗೆ ಸರಕಾರದಿಂದ ದೊರೆಯುತ್ತಿದ್ದ ಆಧ್ಯತೆ ಕುಸಿಯುತ್ತಾ ಹೋಯಿತು. ಭಾರತ ಸರ್ಕಾರ ಜಿ.ಡಿ.ಪಿ. ಯ ಕೇವಲ ಶೇಕಡಾ 1.3 ರಷ್ಟನ್ನು ಮಾತ್ರ ಸಾರ್ವಜನಿಕ ಆರೋಗ್ಯಕ್ಕೆ ಖರ್ಚುಮಾಡತೊಡಗಿತು. ಕನಿಷ್ಠ ಇದರ ಎರಡು ಪಟ್ಟಾದರೂ ಹಣವನ್ನು ಸರ್ಕಾರ ಆರೋಗ್ಯ ಕ್ಷೇತ್ರಕ್ಕೆ ಒದಗಿಸಬೇಕು. ಸಾರ್ವಜನಿಕ ಆರೋಗ್ಯವನ್ನು ಖಾಸಗೀ ಕ್ಷೇತ್ರಕ್ಕೇ ಬಿಟ್ಟುಬಿಡಬಾರದು. ಸರ್ಕಾರಿ ಆಸ್ಪತ್ರೆಗಳ ಖರ್ಚುವೆಚ್ಚಗಳಲ್ಲಿ ಪಾರದರ್ಶಕತೆ ಇರಬೇಕು. ಅಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರು, ದಾದಿಯರು, ಆರೋಗ್ಯ ಕಾರ್ಯಕರ್ತರಿಗೆ ನ್ಯಾಯಬದ್ಧವಾದ ವೇತನ ಮತ್ತು ಇತರ ಸೌಲಭ್ಯಗಳನ್ನು ನೀಡಬೇಕು. ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ವೈದ್ಯರು, ಇತರ ನೌಕರರು, ಆಶಾ ಅಂಗನವಾಡಿ ಮೊದಲಾದ ಕಾರ್ಯಕರ್ತರ ಸೇವೆಯನ್ನು ಕಾಯಂಗೊಳಿಸಬೇಕು. ಅಷ್ಟೇ ಮುಖ್ಯವಾಗಿ ಖಾಸಗಿ ಆಸ್ಪತ್ರೆಗಳು ಲಾಭಗಳಿಕೆಗಾಗಿ ರೋಗಿಗಳ ಶೋಷಣೆ ಮಾಡುವುದನ್ನು ತಡೆಯಬೇಕು. ಖಾಸಗಿ ಆಸ್ಪತ್ರೆಗಳನ್ನು ಸಮರ್ಪಕವಾಗಿ ನಿಯಂತ್ರಿಸಬೇಕು. ಇಂತಹ ರಾಷ್ಟ್ರೀಯ ಆಪತ್ತಿನ ವಿಷಯದಲ್ಲಿ ಲಾಭಗಳಿಸುವ ಪ್ರವೃತ್ತಿಗೆ ಕಡಿವಾಣ ಹಾಕಬೇಕು. ಅಂತಿಮವಾಗಿ, ಆರೋಗ್ಯ ಮೂಲಭೂತ ಹಕ್ಕಾಗಬೇಕು.

ಕೃಷಿ ಕೂಲಿಕಾರರ ಪ್ರತಿಭಟನೆ–ಗಜೇಂದ್ರಗಡ

ಎಪಿಎಂಸಿ, ಭೂ ಸುಧಾರಣೆ, ವಿದ್ಯುತ್, ಬೀಜ ಕಾಯ್ದೆಗಳನ್ನು ತಿದ್ದುಪಡಿಗಳನ್ನು ರಾಜ್ಯ ಮತ್ತು ಕೇಂದ್ರ ಸರಕಾರಗಳು ಹಿಂಪಡೆಯಬೇಕು– ಬಾಲು ರಾಠೋಡ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲೂಕಾ ಸಮೀತಿ ನೇತೃತ್ವದಲ್ಲಿ ಕುಂಟೋಜಿ ಗ್ರಾಮ ಪಂಚಾಯತಿ ಎದುರಿಗೆ ಪ್ರತಿಭಟನಾ ಧರಣಿ ಮಾಡಿ ಪಿಡಿಓ ಎಸ್. ಎಸ್. ವ್ಯಾಪಾರಿ ಮೂಲಕ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ತಾಲೂಕ ಅಧ್ಯಕ್ಷ ಬಾಲು ರಾಠೋಡ ಮಾತನಾಡಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಎಪಿಎಂಸಿ ಕಾಯ್ದೆ, ಭೂ ಸುಧಾರಣೆ, ವಿದ್ಯುತ್, ಅಗತ್ಯ ವಸ್ತುಗಳ ಕಾಯ್ದೆ ಮತ್ತು ಬೀಜ ಕಾಯ್ದೆಗಳಿಗೆ ತಿದ್ದುಪಡಿಗಳನ್ನು ಮಾಡಿ ಸುಗ್ರೀವಾಜ್ಞೆಯ ಮೂಲಕ ಜಾರಿಮಾಡಲು ಹೊರಟಿರುವದನ್ನು ಕೇಂದ್ರ ಹಾಗು ರಾಜ್ಯ ಸರಕಾರಗಳು ಕೈ ಬಿಡಬೇಕೆಂದು ಒತ್ತಾಯಿಸಿದರು.

ರೈತರನ್ನು ಲೂಟಿಮಾಡಲು ಕಾರ್ಪೋರೇಟ ಕಂಪನಿಗಳಿಗೆ ಮುಕ್ತ ಅವಕಾಶ ನೀಡಲಿರುವ ಹಾಗೂ ಹಮಾಲಿ ಕಾರ್ಮಿಕರನ್ನು ಮತ್ತು ಇತರ ನೌಕರರನ್ನು ಬೀದಿ ಪಾಲು ಮಾಡಲು ಜಾರಿಗೆ ತಂದಿರುವ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಯಬೇಕು. ಉಳುವವನೆ ಹೊಲದೊಡೆಯ ಎಂಬ ಘೋಷಣೆಯನ್ನು ಗಾಳಿಗೆ ತೂರಿ ಹಣವುಳ್ಳವನೇ ಹೊಲದೊಡೆಯ ಎಂಬ ಸಿದ್ಧಾಂತವನ್ನು ಜಾರಿಗೆ ತಂದು ಭಲಾಢ್ಯರು, ಕಾಂಪೋರ್ರೇಟ್ ಕಂಪನಿಗಳು ಮಿತಿಯಿಲ್ಲದೆ ರೈತರ ಭೂಮಿಯನ್ನು ಖರೀದಿ ಮಾಡಲು ಅವಕಾಶ ನೀಡುವ ಪ್ರತಿಗಾಮಿ ಭೂ ಸುಧಾರಣೆ ತಿದ್ದುಪಡಿ ಕಾಯ್ದೆ ವಿಚಾರವನ್ನು ಕೈ ಬಿಡಬೇಕು. ರೈತರ ನೀರಾವರಿ ಪಂಪಸೆಟ್‌ಗಳು, ಬಡವರ ಭಾಗ್ಯಜ್ಯೋತಿ, ಕುಟಿರಜ್ಯೋತಿ, ಸಂಪರ್ಕಗಳಿಗೆ ಉಚಿತ ವಿದ್ಯುತ್ ಪೂರೈಸುವ ಈಗಿನ ಕ್ರಮವನ್ನು ರದ್ದುಮಾಡುವ ಮತ್ತು ವಿದ್ಯುತ್ ಉತ್ಪಾದನೆ ಪ್ರಸರಣೆ ಹಾಗೂ ಸರಬರಾಜನ್ನು ಖಾಸಗಿಕರಣ ಮಾಡುವ ಉದ್ದೇಶದಿಂದ ಕೇಂದ್ರಸರಕಾರ ವಿದ್ಯುತ್ ಕಾಯ್ದೆ 2003 ಕ್ಕೆ ತಿದ್ದುಪಡಿ ಮಾಡಲು ಹೊರಟಿರುವದನ್ನು ರಾಜ್ಯ ಸರಕಾರ ವಿರೋದಿಸಬೇಕು. ಕೇಂದ್ರ ಸರಕಾರ ತಂದಿರುವ ಅಕ್ರಮ ದಾಸ್ತಾನುದಾನುದಾರರಿಗೆ ಅನುಕೂಲಮಾಡಿ ಕೊಡಲಿರುವ ಅಗತ್ಯವಸ್ತುಗಳ ಕಾಯ್ದೆ ತಿದ್ದುಪಡಿ 2020 ನ್ನು ವಾಪಾಸು ಪಡೆಯುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಬೇಕು. ಬೀಜೋದ್ದಿಮೆಯನ್ನು ಕಾರ್ಪೋರೇಟ್ ಕಂಪನಿಗಳಿಗೆ ಒಪ್ಪಿಸುವ ಉದ್ದೇಶದಿಂದ ತರಲಾದ ಬೀಜ ಕಾಯ್ದೆ 2019 ನ್ನು ಹಿಂಪಡೆಯಬೇಕು. ಸಣ್ಣ ರೈತರು ಕೃಷಿ ಕೂಲಿಕಾರರು ಇತರ ಗ್ರಾಮೀಣ ಬಡವರು ಹಾಗೂ ದಲಿತರು ಸಾಗುವಳಿ ಮಾಡುತ್ತಿರುವ ಕಂದಾಯ ಭೂಮಿಯನ್ನು ನಗರ ಮಿತಿ ಶರತ್ತು ವಿಧಿಸದೇ ಸಕ್ರಮಗೊಳಿಸಲು. ಅಗತ್ಯ ಕಾನೂನು ತಿದ್ದುಪಡಿ ಮಾಡಬೇಕು. ಡಾ. ಸ್ವಾಮಿಮಾಥನ್ ವರದಿಯ ಅನ್ವಯ ಉತ್ಪಾದನಾ ವೆಚ್ಚ ಜೊತೆಗೆ ಶೇಕಡಾ 50 ರಷ್ಟು ಲಾಭಾಂಶವನ್ನು ಸೇರಿಸಿ ಎಲ್ಲಾ ಕೃಷಿ ಉತ್ಪನ್ನಗಳನು ಸರಕಾರ ಹಾಗೂ ವರ್ತಕರು ಖರೀದಿ ಮಾಡಬೇಕು ಕನಿಷ್ಟ ಬೆಂಬಲ ಬೆಲೆಯನ್ನು ಖಾತರಿ ಮಾಡುವ ಕಾನೂನನ್ನು ಕೇಂದ್ರ ಸರಕಾರ ಕೂಡಲೇ ಅಂಗೀಕರಿಸಬೇಕು ಎಂದು ಆಗ್ರಹಿಸಿದರು.

ಗ್ರಾಮಘಟಕದ ಅಧ್ಯಕ್ಷರಾದ ಅನುಸುಯಾ ಕಾರಡಗಿಮಠ ಮಾತನಾಡಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಎಲ್ಲಾ ಗ್ರಾಮಗಳಿಗೆ ವಿಸ್ತರಿಸಬೇಕು ರೈತರ ಎಲ್ಲ ಕೃಷಿ ಕೆಲಸಗಳನ್ನು ಈ ಯೋಜನೆಯ ಅಡಿಯಲ್ಲಿ ಮಾಡಿಸಬೇಕು ಕೆಲಸಕ್ಕಾಗಿ ಅರ್ಜಿ ಸಲ್ಲಿಸುವ ಎಲ್ಲರಿಗೂ ಕೆಲಸ ಕೊಡಬೇಕು ಕೆಲಸ ಮಾಡಿದ ಬಾಕಿ ವೇತನ ಕೂಡಲೇ ಬಿಡುಗಡೆ ಮಾಡಬೇಕು. ಮತ್ತು ವರ್ಷದಲ್ಲಿ ಒಬ್ಬನಿಗೆ ಕನಿಷ್ಠ 200 ದಿನ ಕೆಲಸ ಕೊಡಬೇಕು. ದಿನಗೂಲಿಯನ್ನು 600 ರೂ. ಕ್ಕೆ ಹೆಚ್ಚಿಸಬೇಕು ನಗರ ಪ್ರದೇಶಕ್ಕೆ ಪ್ರತ್ಯೇಕ ಯೋಜನೆ ಜಾರಿಗೆ ತರಬೇಕು. ಎಲ್ಲ ರೈತರು ಕೃಷಿ ಕಾರ್ಮಿಕರು ಮತ್ತು ಗ್ರಾಮೀಣ ಕಸಬುದಾರರ ಎಲ್ಲ ಬ್ಯಾಂಕ ಹಾಗೂ ಖಾಸಗಿ ಸಾಲವನ್ನು ಒಂದು ಬಾರಿಯ ಕ್ರಮವಾಗಿ ಮನ್ನಾ ಮಾಡಬೇಕು ಋಣಮುಕ್ತ ಕಾಯ್ದೆಯನ್ನು ಅಂಗೀಕರಿಸಬೇಕು. ತೆರಿಗೆಯನ್ನು ತೆರದಿರುವ ಬಡ ರೈತ ಕೂಲಿಕಾರರ ಕುಟುಂಬಗಳಿಗೆ ಲಾಕಡೌನ ಅವಧಿಯ ಪ್ರತಿತಿಂಗಳು 10000 ರೂ. ಗಳನ್ನು ನೀಡಬೇಕು. ಪ್ರಧಾನ ಮಂತ್ರಿ ಕಿಸಾನ ಯೋಜನೆಯ ಮೊತ್ತವನ್ನು ಕನಿಷ್ಠ ರೂ. 18000 ಸಾವಿರಕ್ಕೆ ಎರಿಸಬೇಕು. ಲಾಕಡೌನ ಅವಧಿಯ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಕ್ಕೆ ಕನಿಷ್ಠ 5 ಲಕ್ಷ ರೂ. ಪರಿಹಾರ ನೀಡಬೇಕು. ಲಾಕಡೌನಿಂದ ಉಲ್ಬಣಗೊಂಡ ಬಡತನ, ನಿರುದ್ಯೋಗ, ಹಸಿವು, ಮುಂತಾದ ಕಾರಣಗಳಿಗಾಗಿ ಸರಕಾರದ ಗೋದಾಮುಗಳಲ್ಲಿ ಸಂಗ್ರಹವಾಗಿರುವ ಆಹಾರ ಧಾನ್ಯಗಳನ್ನು ವ್ಯಕ್ತಿಗೆ ಮಾಸಿಕ ತಲಾ 15 ಕೆ.ಜಿ. ಪ್ರಮಾಣದಲ್ಲಿ ಉಚಿತವಾಗಿ ವಿತರಿಸಬೇಕು. ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ಕುಸಿತದ ಹಿನ್ನಲೆಯಲ್ಲಿ ಡಿಸೆಲ್ ಬೆಲೆಯನ್ನು ಇಳಿಸಬೇಕು.

ರಾಜ್ಯದಲ್ಲಿ ಕೊರೊನಾ ಸಾಂಕ್ರಾಮಿಕ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ರಾಜ್ಯ ಸರಕಾರ ವಿಫಲವಾಗಿದೆ ಎಂದು ಹೇಳಿದ ಅವರು ಸೊಂಕಿತರ ಸಂಖ್ಯೆ 11000 ಗಡಿದಾಟಿದೆ ರಾಜ್ಯದಲ್ಲಿ ಸತ್ತವರ ಸಂಖ್ಯೆ 200 ಕ್ಕೆ ಬಂದಿದೆ ಪ್ರತಿದಿನ ಅಂಕಿಅಂಶಗಳು ಭಯಾನಕವಾಗಿ ಏರುತ್ತಲೆ ಇವೆ. ಈ ರೋಗ ಹರಡುವುದನ್ನು ತಡೆಯಲು ರಾಜ್ಯ ಸರಕಾರ ಕೈಗೊಂಡ ಕ್ರಮಗಳಿಂದ ಯಾವುದೇ ಪ್ರಯೋಜನವಾಗಿಲ್ಲ. ತಮ್ಮ ಜೀವದ ಹಂಗು ತೊರೆದು ಸೇವೆ ಸಲ್ಲಿಸುತ್ತಿರುವ ವೈದ್ಯರು, ದಾದಿಯರು, ಆರೋಗ್ಯ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತಯರು, ಆಶಾ, ಪಂಚಾಯತಿ ನೌಕರರು, ಪೋಲೀಸರು, ಬಸ್ ಡ್ರೈವರ್, ಕಂಡಕ್ಟರ, ಅಟೋರಿಕ್ಷಾ ಚಾಲಕರು ಈ ಭಯಾನಕ ರೋಗಕ್ಕೆ ತುತ್ತಾಗಿದ್ದಾರೆ ಇವರಿಗೆ ಸರಿಯಾದ ರಕ್ಷಣಾ ಸಾಧನಗಳನ್ನು ಒದಗಿಸಲು ಸಾಧ್ಯವಾಗದೇ ಇರುವ ಕಾರಣವೇ ರೋಗ ಹರಡುವಿಕೆಗೆ ಕಾರಣವಾಗಿದೆ. ಹಾಗಾಗಿ ಕೊರೊನಾ ಸೊಂಕಿತರಿಗೆ ಅಗತ್ಯ ಚಿಕಿತ್ಸೆ ನೀಡಲು ಅಗತ್ಯ ವೈದ್ಯಕೀಯ ಸಲಕರಣೆಯನ್ನು ಅವಶ್ಯ ಪ್ರಮಾಣದಲ್ಲಿ ಒದಗಿಸಬೇಕು. ಆಸ್ಪತ್ರೆಗಳಲ್ಲಿ ಮತ್ತು ಕೊರಂಟೈನ ಕೇಂದ್ರಗಳಲ್ಲಿ ಮಾನವೀಯತೆಯಿಂದ ಸೇವೆಗಳನ್ನು ಒದಗಿಸಬೇಕು. ಲಾಕಡೌನ ಸಂದರ್ಭದಲ್ಲಿ ನಿರುಪರಾದಿಗಳ ವಿರುದ್ದ ಹಾಕಲಾದ ಕೇಸಗಳನ್ನು ಕೈ ಬಿಡಬೇಕು. ರಾಜ್ಯ ಸರಕಾರ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು.

ಈ ಪ್ರತಿಭಟನಾ ಧರಣಿಯಲ್ಲಿ ಯಲ್ಲವ್ವ ದಿಂಡೂರ, ಲಕ್ಷ್ಮವ್ವ ಕತ್ತಿ, ರಾಮಕ್ಕ ಕತ್ತಿ, ಬಸಮ್ಮ ಕೊಡಿಕೊಪ್ಪಮಠ, ದೇವಪ್ಪ ಗೋನಾಳ, ಆನಂದ ಕಾರಡಗಿಮಠ, ಶರಣಮ್ಮ ಗೋನಾಳ, ಭೀಮಪ್ಪ ಗೋನಾಳ, ಮುತ್ತಮ್ಮ ಚೋಟಿ, ಶಿವಲಿಂಗಮ್ಮ ಗೋನಾಳ, ಪಾರಮ್ಮ ಗೊಣ್ಣಾಗರ, ಚಂದ್ರಮ್ಮ ಬಂಕದ, ಲಕ್ಷ್ಮೀ ಮಾಳೊತ್ತರ, ಭೀಮವ್ವ ಅಜಮೀರ, ನೂರಪ್ಪ ಅಜಮೀರ, ಸಿದ್ಧಲಿಂಗಯ್ಯ ಚಂದ್ರಗಿರಿಮಠ, ಈರಮ್ಮ ಗೋನಾಳ ಚಂದ್ರ ರಾಠೋಡ, ಗಣೇಶ ರಾಠೋಡ ಹಾಗೂ ಮತ್ತಿತರು ಇದ್ದರು.





ತೈಲ ದರ ಏರಿಕೆ ವಿರುದ್ಧ, ಕೋವಿಡ್ ಪರಿಹಾರಕ್ಕಾಗಿ ಆಗ್ರಹಿಸಿ ದ.ಕ. ಜಿಲ್ಲಾದ್ಯಂತ ಸಿಪಿಐ(ಎಂ) ಪ್ರತಿಭಟನೆ

ವರದಿ: **ವಾ.ಉ.**

ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ವಿರೋಧಿಸಿ ರಾಷ್ಟ್ರಾದ್ಯಂತ ಸಿಪಿಐ(ಎಂ) ಪಕ್ಷವು ಪ್ರತಿಭಟನೆ ನಡೆಸಲು ಕರೆ ನೀಡಿದ ಮೇರೆಗೆ, ದ.ಕ.ಜಿಲ್ಲೆಯಲ್ಲಿ ಸಿಪಿಐ(ಎಂ) ಘಟಕಗಳು ಪ್ರತಿಭಟನೆ ನಡೆಸಿದವು.

ಕೋವಿಡ್ ಸಂತ್ರಸ್ತರಾದ ಬೀಡಿ, ಬಸ್ಸು, ನೌಕರರು ಹೋಟೆಲ್, ಬಾರ್ ಕಾರ್ಮಿಕರು, ಟೈಲರ್‌ಗಳು, ರಿಕ್ಷಾ ಟೆಂಪೋ, ಲಾರಿ, ಮ್ಯಾಕ್ಸಿಕ್ಯಾಬ್ ಚಾಲಕರು, ಬಿಸಿಯೂಟ ಅಂಗನವಾಡಿ ಆಶಾ ಇತ್ಯಾದಿ ಸ್ಕೀಮು ಕಾರ್ಮಿಕರು, ಹಮಾಲಿ, ಬೀದಿ ಬದಿ ವ್ಯಾಪಾರಿಗಳು ಇತ್ಯಾದಿ ದುಡಿಯುವ ಜನ ವಿಭಾಗಗಳಿಗೆ ಕನಿಷ್ಟ ರೂ.6,000/– ಪರಿಹಾರವನ್ನು ನೀಡಬೇಕು ಹಾಗೂ 16 ಜೂನ್ 2020 ರ ಪಕ್ಷದ ಅಖಿಲ ಭಾರತ ಪ್ರತಿಭಟನೆಯ ಅಂಗವಾಗಿ ಜೂನ್ 27 ರಿಂದ ಜುಲೈ 5ರ ವರೆಗೆ ಪ್ರತಿಭಟನಾ ವಾರಾಚರಣೆಯನ್ನು ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಹಮ್ಮಿಕೊಂಡಿತ್ತು. ಈ ವಾರಾಚರಣೆಯ ಭಾಗವಾಗಿಯೂ ಪಕ್ಷದ ಜಿಲ್ಲೆಯ ವಲಯ ಸಮಿತಿಗಳು ಹಾಗೂ ಘಟಕಗಳು ಪ್ರತಿಭಟನಾ ಕಾರ್ಯಕ್ರಮವನ್ನು ನಡೆಸಿದವು.

27 ಜೂನ್ 2020 ರಂದು ಪಕ್ಷದ ಮಂಗಳೂರು ನಗರ ದಕ್ಷಿಣ ಸಮಿತಿ ನೇತೃತ್ವದಲ್ಲಿ ಮಂಗಳೂರು ನಗರ ಕೇಂದ್ರದ ಕ್ಲಾಕ್ ಟವರ್ ಬಳಿ ತೈಲ ದರ ಏರಿಕೆಯ ವಿರುದ್ಧ ಪ್ರತಿಭಟನಾ ಪ್ರದರ್ಶನ ನಡೆದಿದ್ದು, ಅದರಲ್ಲಿ 50 ಮಂದಿ ಪಕ್ಷದ ಕಾರ್ಯಕರ್ತರು ಅಂತರ ಕಾಯ್ದುಕೊಂಡು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯನ್ನು ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಉದ್ಘಾಟಿಸಿದರು. ಪ್ರತಿಭಟನೆಯಲ್ಲಿ ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಜಿಲ್ಲಾ ಸಮಿತಿ ಸದಸ್ಯರಾದ ವಾಸುದೇವ ಉಚ್ಚಿಲ, ಸಂತೋಷ್ ಬಜಾಲ್, ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಭಾರತಿ ಬೋಳಾರ್, ಪಕ್ಷದ ಮಂಗಳೂರು ನಗರ ಸಮಿತಿ ಸದಸ್ಯರು, ನಗರ ಸಿಐಟಿಯು ಮುಖಂಡರು, ನಗರ ದಲಿತ ಹಕ್ಕುಗಳ ಸಮಿತಿಯ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ತೈಲ ದರ ಏರಿಕೆ ವಿರುದ್ಧ ಜಿಲ್ಲೆಯ ಪಕ್ಷ ಘಟಕಗಳು ಹಾಕಿಕೊಂಡಿದ್ದ ಪ್ರತಿಭಟನಾ ಪ್ರದರ್ಶನಗಳಲ್ಲಿ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಲಾಯಿತು.

28 ಜೂನ್ 2020 ರಂದು ಜಪ್ಪಿನಮೊಗರು ಗ್ರಾಮ ಯುವಕ ಮಂಡಲದ ಬಳಿ ಭಿತ್ತಿಚಿತ್ರ ಪ್ರದರ್ಶನ ಹಾಗೂ ಪ್ರತಿಭಟನಾ ಸಭೆ ನಡೆಸಲಾಯಿತು. ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್, ಪಕ್ಷದ ನಗರ ಮುಖಂಡರಾದ ದಿನೇಶ್ ಶೆಟ್ಟಿ, ಜನವಾದಿ ಮಹಿಳಾ ಸಂಘಟನೆಯ ದ.ಕ. ಜಿಲಾಧ್ಯಕ್ಷೆ ಜಯಂತಿ ಬಿ. ಶೆಟ್ಟಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

29 ಜೂನ್ 2020 ರಂದು ಮಂಗಳೂರು ಸ್ಟೇಟ್‌ಬ್ಯಾಂಕ್ ಬಳಿಯಲ್ಲೂ, ಅಪರಾಹ್ನ ಲೇಡಿಗೋಷನ್ ಆಸ್ಪತ್ರೆಯ ಬಳಿಯಲ್ಲೂ ಬೀದಿಬದಿ ವ್ಯಾಪಾರಸ್ಥರ 2 ಪಕ್ಷ ಶಾಖೆಗಳ ವತಿಯಿಂದ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಯಿತು. ಪ್ರತಿಭಟನೆಗಳನ್ನು ಉದ್ದೇಶಿಸಿ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಡಿವೈಎಫ್ಐ ಮಂಗಳೂರು ನಗರ ಅಧ್ಯಕ್ಷರಾದ ನವೀನ್ ಕೊಂಚಾಡಿ, ಬೀದಿ ಬದಿ ವ್ಯಾಪಾರಿಗಳ ಮುಖಂಡರಾದ ಮಹಮ್ಮದ್ ಮುಸ್ತಾಫಾ, ಹರೀಶ್ ಪೂಜಾರಿ, ಸಂತೋಷ್ ಆರ್. ಎಸ್. ಉಪಸ್ಥಿತರಿದ್ದರು.

30 ಜೂನ್ 2020 ರಂದು ಕುಲಶೇಖರದಲ್ಲಿ ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಪಕ್ಷದ ಕುಲಶೇಖರ ಶಾಖಾ ಕಾರ್ಯದರ್ಶಿ ಶಶಿಕಲಾ ಮತ್ತು ಶಾಖಾ ಸದಸ್ಯರು ಭಾಗವಹಿಸಿದ್ದರು.

30 ಜೂನ್ 2020 ಶಕ್ತಿನಗರದಲ್ಲಿ ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಸುನಿಲ್ ಕುಮಾರ್ ಬಜಾಲ್, ಕಟ್ಟಡ ಕಾರ್ಮಿಕರ ಮುಖಂಡರಾದ ಉಮೇಶ್ ಶಕ್ತಿನಗರ, ಪಕ್ಷದ ಶಕ್ತಿನಗರ ಶಾಖಾ ಸದಸ್ಯರು, ಸ್ಥಳೀಯ ಡಿವೈಎಫ್ಐ ಮುಖಂಡರು ಭಾಗವಹಿಸಿದ್ದರು.

1 ಜೂನ್ 2020 ರಂದು ಬಂದರು ಬೈತದಕ್ಕೆಯಲ್ಲಿ ಬೆಳಗ್ಗೆ ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಡಿವೈಎಫ್ಐ ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್, ಬಂದರು ಶ್ರಮಿಕ ಸಂಘದ ಮುಖಂಡರುಗಳು ಭಾಗವಹಿಸಿದ್ದರು. ಅಪರಾಹ್ನ ಬೋಳಾರ ಪಕ್ಷದ ಜಿಲ್ಲಾ ಕಚೇರಿಯ ಸಮೀಪ ನಡೆದ ಪ್ರತಿಭಟನೆಯಲ್ಲಿ ಸುನಿಲ್ ಕುಮಾರ್ ಬಜಾಲ್, ಸಿಪಿಐ(ಎಂ) ರಾಜ್ಯ ಸಮಿತಿ ಮುಖಂಡ ಜೆ.ಬಾಲಕೃಷ್ಣ ಶೆಟ್ಟಿ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಭಾರತಿ ಬೋಳಾರ್, ಎಸ್ಎಫ್ಐ ಜಿಲ್ಲಾ ಕಾರ್ಯದರ್ಶಿ ಮಾಧುರಿ ಬೋಳಾರ್, ಶಾಖೆಯ ಕಾರ್ಯದರ್ಶಿ ನಾಗೇಶ್ ಕೋಟ್ಯಾನ್ ಭಾಗವಹಿಸಿದ್ದರು.

2 ಜುಲೈ 2020 ದಂದು ಅಪರಾಹ್ನ ಪಕಲಡ್ಕ ಪಿ.ರಾಮಚಂದ್ರ ರಾವ್ ಭವನದ ಬಳಿ ನಡೆದ ಪ್ರತಿಭಟನೆಯಲ್ಲಿ ಸುನಿಲ್ ಕುಮಾರ್ ಬಜಾಲ್, ರಾಜ್ಯ ಸಮಿತಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ, ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಸಂತೋಷ್ ಬಜಾಲ್, ಪಕ್ಷದ ನಗರ ಸಮಿತಿ ಸದಸ್ಯ ಸುರೇಶ್ ಬಜಾಲ್ ಭಾಗವಹಿಸಿದ್ದರು.

3 ಜುಲೈ 2020 ರಂದು ಉರ್ವಸ್ಟೋರ್ ಮತ್ತು ಕಣ್ಣೂರಿನಲ್ಲೂ, 5 ಜುಲೈ 2020 ರಂದು ಬೆಳಿಗ್ಗೆ ಪಕ್ಕಲಡ್ಕ ಜಂಕ್ಷನ್‌ನಲ್ಲೂ, ಸಾಯಂಕಾಲ ಜಲ್ಲಿಗುಡ್ಡೆಯಲ್ಲೂ ಪ್ರತಿಭಟನಾ ಪ್ರದರ್ಶನಗಳು ನಡೆಯಲಿವೆ.

ಗುರುಪುರ ಪಕ್ಷದ ವಲಯ ಸಮಿತಿಯು ಪ್ರತಿಭಟನೆಯ ವಾರಾಚರಣೆಯ ಭಾಗವಾಗಿ 29 ಜೂನ್ 2020 ರಂದು ಪ್ರತಿಭಟನಾ ಪ್ರದರ್ಶನ ನಡೆಸಿತು. ವಲಯ ಸಮಿತಿ ಮುಖಂಡರಾದ ಗಂಗಯ್ಯ ಅಮೀನ್ ಪ್ರದರ್ಶನವನ್ನುದ್ದೇಶಿಸಿ ಮಾತನಾಡಿದರು. 30 ಜೂನ್ 2020 ರಂದು ಕುಪ್ಪೆಪದವಿನಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಗುರುಪುರ ವಲಯ ಕಾರ್ಯದರ್ಶಿ ಸದಾಶಿವದಾಸ್ ಮಾತನಾಡಿದರು. ವಲಯ ಸಮಿತಿ ಸದಸ್ಯರಾದ ವಸಂತಿ ಕುಪ್ಪೆಪದವು, ಎನ್.ಎ. ಹಸನಬ್ಬ ಉಪಸ್ಥಿತರಿದ್ದರು.

ಉಳ್ಳಾಲ ವಲಯದ ಕುತ್ತಾರಿನಲ್ಲಿ 3 ಜುಲೈ 2020 ರಂದು ವಾರಾಚರಣೆಯ ಭಾಗವಾಗಿ ಪ್ರತಿಭಟನಾ ಪ್ರದರ್ಶನ ನಡೆಯಲಿದೆ.

ಮೂಡಬಿದ್ರಿ ವಲಯದಲ್ಲಿ ಜುಲೈ 4 ರಂದು ನೀರ್ಕೆರೆ ಪಂಚಾಯತ್ ಬಳಿಯೂ, ಪುತ್ತಿಗೆ ಪಂಚಾಯತ್ ಬಳಿಯೂ ಪ್ರದರ್ಶನ ನಡೆದರೆ, ಜುಲೈ 5 ರಂದು ಶಿರ್ತಾಡಿ ಪಂಚಾಯತ್, ವಾಲ್ಪಾಡಿ ಪಂಚಾಯತ್ ಮತ್ತು ಪಡುಮಾರ್ನಾಡು ಪಂಚಾಯತ್ ಮುಂದೆಯೂ ಪ್ರತಿಭಟನಾ ಪ್ರದರ್ಶನ ನಡೆಯಲಿದೆ.

ಕೊರೊನಾ ವೈರಸ್ ಹತ್ತಿಕ್ಕುವ ಬದಲು ಜನರ ಬದುಕನ್ನೇ ನಾಶಗೊಳಿಸಲು ಹೊರಟ ನರೇಂದ್ರ ಮೋದಿ ಸರಕಾರ

"ಜಾಗತಿಕ ಮಟ್ಟದಲ್ಲಿ ಕೊರೊನಾ ವೈರಸ್ ವ್ಯಾಪಕವಾಗಿ ಹರಡಿದ ಸಂಧರ್ಭದಲ್ಲಿ ಭಾರತ ಅಷ್ಟೊಂದು ಅಪಾಯಕ್ಕೆ ಒಳಗಾಗಿರಲಿಲ್ಲ. ಆ ಸಮಯದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಬದಲು ತೀರಾ ನಿರ್ಲಕ್ಷ್ಯ ವಹಿಸಿದ್ದರ ಫಲವಾಗಿ ಇಂದು 5 ಲಕ್ಷಕ್ಕೂ ಮಿಕ್ಕಿ ಕೋರೋನಾ ಸೋಂಕಿತರು ದೇಶದಲ್ಲಿರುವುದು ಸರಕಾರದ ವೈಫಲ್ಯವನ್ನು ಎತ್ತಿ ತೋರಿಸಿದೆ. 2020ರ ಜನವರಿ 30ರಂದು ವಿಶ್ವ ಆರೋಗ್ಯ ಸಂಸ್ಥೆಯು ಇದನ್ನು ಜಾಗತಿಕ ಸಾಂಕ್ರಾಮಿಕ ರೋಗವೆಂದು ಘೋಷಿಸಿ, ಜಗತ್ತಿನ ಎಲ್ಲಾ ರಾಷ್ಟ್ರಗಳಿಗೂ ಎಚ್ಚರಿಕೆಯನ್ನು ನೀಡಿತು. ಹಾಗೂ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಸೇರಿದಂತೆ ದೇಶದ ಹಲವಾರು ವೈಜ್ಞಾನಿಕ ಸಂಸ್ಥೆಗಳು ವಿವಿಧ ಶಿಫಾರಸ್ಸುಗಳನ್ನೊಳಗೊಂಡ ಎರಡು ವರದಿಗಳನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಿದವು. ಅತ್ಯಂತ ತುರ್ತು ಆದ್ಯತೆಯ ಮೇಲೆ ಗಮನ ಹರಿಸಿ ಜನರ ಜೀವ ರಕ್ಷಿಸಬೇಕಾದ ಕೇಂದ್ರ ಸರಕಾರ ಈ ಸಂಧರ್ಭದಲ್ಲೂ ಕಾರ್ಪೊರೇಟ್ ಕಂಪೆನಿಗಳ ಹಿತ ಕಾಯುವ ಮೂಲಕ ದೇಶದ್ರೋಹಿಯಾಗಿ ವರ್ತಿಸಿದೆ. ಈ ಮೂಲಕ ಕೋರೋನಾ ವೈರಸ್ ಹತ್ತಿಕ್ಕುವ ಬದಲು, ನರೇಂದ್ರ ಮೋದಿ ಸರಕಾರ ಜನರ ಬದುಕನ್ನೇ ನಾಶಗೊಳಿಸಲು ಹೊರಟಿದೆ" ಎಂದು ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷರಾದ ಬಿ.ಕೆ.ಇಮ್ತಿಯಾಜ್ ರವರು ಆಕ್ರೋಶ ವ್ಯಕ್ತಪಡಿಸಿದರು.

ಲಾಕ್ ಡೌನ್ ಸಂಧರ್ಭದಲ್ಲಿ ಕೇಂದ್ರ ಸರಕಾರದ ಸಂಪೂರ್ಣ ವೈಫಲ್ಯವನ್ನು ಖಂಡಿಸಿ ಸಿಪಿಐ(ಎಂ) ನೇತ್ರತ್ವದಲ್ಲಿ ದ.ಕ. ಜಿಲ್ಲೆಯಾದ್ಯಂತ ನಡೆಯುವ ವಾರಾಚರಣೆಯ ಭಾಗವಾಗಿ ಜಪ್ಪಿನ ಮೊಗರಿನಲ್ಲಿ ಜರುಗಿದ ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸುತ್ತಾ ಅವರು, ಈ ಮಾತುಗಳನ್ನು ಹೇಳಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ ಸಿಪಿಐ(ಎಂ) ಮಂಗಳೂರು ನಗರ ಮುಖಂಡರಾದ ದಿನೇಶ್ ಶೆಟ್ಟಿಯವರು ದ.ಕ. ಜಿಲ್ಲೆಯ ಉಸ್ತುವಾರಿ ಸಚಿವರು, ಸಂಸದರು, ಶಾಸಕರ ಬೇಜವಾಬ್ದಾರಿ ವರ್ತನೆಯನ್ನು ಖಂಡಿಸುತ್ತಾ, "ಕೊರೊನಾ ಸಂಕಷ್ಟದ ಕಾಲದಲ್ಲಿ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕಾದ ಜಿಲ್ಲಾಡಳಿತವನ್ನು ಸಂಪೂರ್ಣವಾಗಿ ತಮ್ಮ ಹತೋಟಿಯಲ್ಲಿಟ್ಟು ಕೀಳು ಮಟ್ಟದ ರಾಜಕೀಯ ನಡೆಸಿರುವುದು ಮಾತ್ರವಲ್ಲದೆ ಕೊರೊನಾವನ್ನು ಮುಂದಿಟ್ಟು ಬಡಪಾಯಿ ಜನರ ಬದುಕನ್ನೇ ನಾಶ ಮಾಡಲು ಹೊರಟಿದ್ದಾರೆ" ಎಂದು ಟೀಕಿಸಿದರು.

ಜನವಾದಿ ಮಹಿಳಾ ಸಂಘಟನೆಯ ದ.ಕ. ಜಿಲ್ಲಾಧ್ಯಕ್ಷರಾದ ಜಯಂತಿ ಬಿ. ಶೆಟ್ಟಿಯವರು ಮಾತನಾಡುತ್ತಾ, "ಕೆಲಸ ಕಳೆದುಕೊಂಡ ಕಾರ್ಮಿಕರಿಗೆ ಹಾಗೂ ಬೀಡಿ, ಹೋಟೆಲ್, ಬೀದಿ ಬದಿ, ಹಮಾಲಿ, ಟೈಲರ್, ಬಸ್ ನೌಕರರು, ಖಾಸಗೀ ಶಾಲಾ ಶಿಕ್ಷಕರು, ಕಲಾವಿದರು, ಬಿಸಿಯೂಟ ಕಾರ್ಮಿಕರಿಗೆ ವಿಶೇಷ ಪ್ಯಾಕೇಜ್ ನೀಡಬೇಕೆಂದು" ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ನಾಯಕರಾದ ಮನೋಜ್ ಶೆಟ್ಟಿ, ಉದಯಚಂದ್ರ ರೈ, ಚಂದ್ರಹಾಸ ಜೆ, ಜಯಲಕ್ಷ್ಮಿ, ಡಿವೈಎಫ್ಐ ಘಟಕಾಧ್ಯಕ್ಷರಾದ ಅಭಿಷೇಕ್ ಶೆಟ್ಟಿ ಮುಂತಾದವರು ಭಾಗವಹಿಸಿದ್ದರು.

ರಕ್ತದಾನ ಶಿಬಿರ ಹಾಗು ಮಾಸ್ಕ್, ಸಾನಿಟೈಸರ್ ವಿತರಣೆ

ಡಿವೈಎಫ್ಐ ನಾಯಕ ಕಾಂ ಶ್ರೀನಿವಾಸ್ ಬಜಾಲ್ ಅವರ 18 ನೇ ವರ್ಷದ ಹುತಾತ್ಮ ದಿನದ ಅಂಗವಾಗಿ 28–06–2020 ರಂದು ಡಿವೈಎಫ್ಐ ಬಜಾಲ್ ಪಕ್ಕಲಡ್ಕ ಘಟಕದ ಆಶ್ರಯದಲ್ಲಿ ಇಂಡಿಯನ್ ರೆಡ್ ಕ್ರಾಸ್ ಸಂಸ್ಥೆಯ ಸಹಯೋಗದೊಂದಿಗೆ ರಕ್ತದಾನ ಶಿಬಿರ ಹಾಗು ಮಾಸ್ಕ್, ಸಾನಿಟೈಸರ್ ವಿತರಿಸಲಾಯಿತು.

ರಕ್ತದಾನ ಕಾರ್ಯಕ್ರಮದ ಉದ್ಘಾಟನೆಯನ್ನು ಡಿವೈಎಫ್ಐ ಮಂಗಳೂರು ನಗರ ಅಧ್ಯಕ್ಷರಾದ ನವೀನ್ ಕೊಂಚಾಡಿ ಮಾತನಾಡಿದರು.

ಈ ವೇಳೆ ವೇದಿಕೆಯಲ್ಲಿ ಡಿವೈಎಫ್ಐ ದ.ಕ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಸಜಿತ್ ಶೆಟ್ಟಿ ವಾಮಂಜೂರು, ನಾಗೇಶ್ ಶೆಟ್ಟಿ ಉಪಸ್ಥಿತರಿದ್ದರು ಸಭೆಯ ಅದ್ಯಕ್ಷತೆಯನ್ನು ಡಿವೈಎಫ್ಐ ಮುಖಂಡ ದೀಪಕ್ ಬೊಲ್ಲ ವಹಿಸಿದ್ದರು. ಡಿವೈಎಫ್ಐ ಪಕ್ಕಲಡ್ಕ ಘಟಕದ ಕಾರ್ಯದರ್ಶಿ ಧಿರಾಜ್ ಪಕ್ಕಲಡ್ಕ ಸ್ವಾಗತ ಕೋರಿ ವರಪ್ರಸಾದ್ ದನ್ಯವಾದ ನೀಡಿದರು. ಶಿಬಿರದಲ್ಲಿ 50 ಕ್ಕೂ ಮಿಕ್ಕಿ ಕಾರ್ಯಕರ್ತರು



ರಕ್ತದಾನ ಮಾಡಿದರು.

ವಿಜ್ಞಾನ, ವೈದ್ಯಕೀಯ ಕ್ಷೇತ್ರಗಳು ಮೊದಲ ಆದ್ಯತೆಯಾದಾಗ ಮಾತ್ರವೇ ದೇಶದ ಅಭಿವೃದ್ಧಿ ಸಾಧ್ಯ

"ವಿಜ್ಞಾನ, ವೈದ್ಯಕೀಯ ಕ್ಷೇತ್ರಗಳು ಮೊದಲ ಆದ್ಯತೆಯಾದಾಗ ಮಾತ್ರವೇ ದೇಶದ ಅಭಿವೃದ್ಧಿ ಸಾಧ್ಯ. ಆದರೆ ನಮ್ಮ ದೇಶವು ಜಾಗತೀಕರಣದ ಕರಿನೆರಳಿನಲ್ಲಿ ಒದ್ದಾಡುತ್ತಿದ್ದು, ಆಳುವ ಕೇಂದ್ರ ಸರಕಾರವು ಇವೆರಡನ್ನೂ ತೀರಾ ನಿರ್ಲಕ್ಷಿಸಿದ್ದರ ಫಲವಾಗಿ ಕೋರೋನಾ ವೈರಸ್ಸನ್ನು ಹತ್ತಿಕ್ಕುವಲ್ಲಿ ಸಂಪೂರ್ಣ ವೈಫಲ್ಯವನ್ನು ಕಂಡಿದೆ. ಜನರ ಜೀವವನ್ನು ರಕ್ಷಿಸಬೇಕಾದ ಸರಕಾರವು ಜನರಲ್ಲಿ ಮೌಢ್ಯತೆಯನ್ನು ತುಂಬಿ ಅಪಪ್ರಚಾರಗಳನ್ನು ನಡೆಸಿ, ಇಂತಹ ಸಂಕಷ್ಟದ ಕಾಲದಲ್ಲೂ ಕೋಮುವಿಷ ಬೀಜವನ್ನು ಬಿತ್ತುವ ನೀಚ ಕಾರ್ಯಕ್ಕೆ ಮುಂದಾಗಿದೆ. ಮತ್ತೊಂದು ಕಡೆ ಆರೋಗ್ಯ ಕ್ಷೇತ್ರವು ತೀವ್ರವಾಗಿ ಖಾಸಗೀಕರಣಗೊಂಡಿರುವುದರಿಂದ ಹಾಗೂ ಸರಕಾರಿ ಆಸ್ಪತ್ರೆಗಳು ಮೂಲಭೂತ ಸೌಕರ್ಯಗಳ ಕೊರತೆಯಿಂದ ಅನಿವಾರ್ಯವಾಗಿ ಘೋಷಣೆ ಮಾಡಿದ ಲಾಕ್‌ಡೌನ್ ನಿಂದಾಗಿ ದೇಶದ ಕೋಟ್ಯಾಂತರ ಜನತೆಯ ಬದುಕು ತೀರಾ ಶೋಚನೀಯವಾಗಿದೆ" ಎಂದು ಡಿವೈಎಫ್‌ಐ ಮಂಗಳೂರು ನಗರಾಧ್ಯಕ್ಷರಾದ ನವೀನ್ ಕೊಂಚಾಡಿಯವರು ಅಭಿಪ್ರಾಯಪಟ್ಟರು.

ಅವರು ಸಿಪಿಐ(ಎಂ) ನೇತ್ರತ್ವದಲ್ಲಿ ನಗರದಲ್ಲಿಂದು 29 ಜೂನ್ 2020 ಸ್ಟೇಟ್ ಬ್ಯಾಂಕ್ ಹಾಗೂ ಲೇಡಿಗೋಷನ್ ಬಳಿಯಲ್ಲಿ ಬಿತ್ತಿಚಿತ್ರ ಪ್ರದರ್ಶನ ಹಾಗೂ ಪ್ರತಿಭಟನೆಯಲ್ಲಿ ಭಾಗವಹಿಸುತ್ತಾ, ಈ ಮಾತುಗಳನ್ನು ಹೇಳಿದರು.

ಕೊರೊನಾ ವೈರಸ್ ತಡೆಗಟ್ಟುವಲ್ಲಿ ಕೇಂದ್ರ ಸರಕಾರದ ಸಂಪೂರ್ಣ ವೈಫಲ್ಯವನ್ನು ಖಂಡಿಸಿ, ಸಿಪಿಐ(ಎಂ) ದ.ಕ.ಜಿಲ್ಲೆಯಾದ್ಯಂತ ಹಮ್ಮಿಕೊಂಡ ವಾರಾಚರಣೆಯ ಭಾಗವಾಗಿ ಈ ಪ್ರತಿಭಟನೆಯನ್ನು ಆಯೋಜಿಸಲಾಗಿತ್ತು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, "ಅಂದು ನರೇಂದ್ರ ಮೋದಿ ಸರಕಾರವು ಅಧಿಕಾರಕ್ಕೇರುವಲ್ಲಿ ಪ್ರಾರಂಭಿಸಿದ ಹಸಿಹಸಿ ಸುಳ್ಳಿನ ವರಸೆ ಇಂದಿಗೂ ಕೊನೆಗೊಂಡಿಲ್ಲ. ಜನರ ಭಾವನೆಗಳನ್ನು ಕೆರಳಿಸಿ, ವಾಸ್ತವ ಬದುಕನ್ನು ಮರೆಮಾಚಿ ಸುಳ್ಳಿನ ಸಾಮ್ರಾಜ್ಯವನ್ನು ಕಟ್ಟುವಲ್ಲಿ ನಿಸ್ಸೀಮರಾದ ಬಿಜೆಪಿಗರು, ಕಪ್ಪು ಹಣ ತರುವುದಾಗಿ, ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ 15 ಲಕ್ಷ ಹಾಕುವುದಾಗಿ ಹೇಳಿದ್ದರು. ಇಂದು 20 ಲಕ್ಷ ಕೋಟಿ ರೂ. ಪರಿಹಾರ ಘೋಷಣೆ ಮಾಡಿರುವುದು ಸಂಪೂರ್ಣ ಬೊಗಳೆಯಾಗಿದೆ. ಯಾವುದೇ ವಿಭಾಗದ ಕಾರ್ಮಿಕರಿಗೂ ಪರಿಹಾರ ಘೋಷಣೆ ಮಾಡಿಲ್ಲ. ಲಾಕ್‌ಡೌನ್ ನಿಂದಾಗಿ ಹೋಟೆಲ್ ಉದ್ಯಮ, ಟೂರಿಸಂ, ಶಾಲಾ ಕಾಲೇಜ್ ಪ್ರಾರಂಭವಾಗುವುದು ಇನ್ನೂ ಅನಿಶ್ಚಿತತೆಯಲ್ಲಿದ್ದು, ಅಲ್ಲಿನ ಹೋಟೆಲ್ ಕಾರ್ಮಿಕರು, ಖಾಸಗೀ ಶಾಲಾ ಶಿಕ್ಷಕರು, ಬಿಸಿಯೂಟ ನೌಕರರ ಬದುಕು ತೀರಾ ಸಂಕಷ್ಟಮಯವಾಗಿದೆ" ಎಂದು ಹೇಳಿದರು.

ಸಿಐಟಿಯು ಮಂಗಳೂರು ನಗರ ಮುಖಂಡರಾದ ಮಹಮ್ಮದ್ ಮುಸ್ತಫಾರವರು ಮಾತನಾಡುತ್ತಾ, "ಇಡೀ ದೇಶದಲ್ಲಿ 3 ಕೋಟಿಗೂ ಮಿಕ್ಕಿರುವ ಬೀದಿಬದಿ ವ್ಯಾಪಾರಸ್ಥರ ಬದುಕು ಈ ಲಾಕ್‌ಡೌನ್ ನಿಂದಾಗಿ ತೀರಾ ಕಂಗೆಟ್ಟಿದ್ದು, ಕೇಂದ್ರ ಸರಕಾರ ಕಿಂಚಿತ್ತೂ ಗಮನ ಹರಿಸಿಲ್ಲ. ಬೀದಿಬದಿ ವ್ಯಾಪಾರಸ್ಥರಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡುವ ಮೂಲಕ ಪರಿಹಾರ ಧನವನ್ನು ಒದಗಿಸಬೇಕೆಂದು" ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಿಐಟಿಯು ನಗರ ಮುಖಂಡರಾದ ಸಂತೋಷ್ ಆರ್.ಎಸ್. ಹರೀಶ್ ಪೂಜಾರಿ ಹಸ್ಸೈನಾರ್, ಮುಝಾಫರ್, ವಿಜಯ, ಶಿವಪ್ಪ, ಗುಡ್ಡಪ್ಪ, ಸೆಲ್ವರಾಜ್ ಮುಂತಾದವರು ಹಾಜರಿದ್ದರು.

ಕೊರೊನಾ ಹತ್ತಿಕ್ಕುವ ನೆಪದಲ್ಲಿ ಜನರನ್ನು ಸುಲಿಗೆ ಮಾಡಲು ಖಾಸಗೀ ಆಸ್ಪತ್ರೆಗಳಿಗೆ ಅನುಮತಿ

"ದಿನದಿಂದ ದಿನಕ್ಕೆ ಕೊರೊನಾ ಸೋಂಕಿತರ ಸಂಖ್ಯೆ ದೇಶದಲ್ಲಿ ಹೆಚ್ಚಳವಾಗುತ್ತಿದ್ದು, 5 ಲಕ್ಷಕ್ಕೂ ಮೀರಿದೆ. ಅತ್ಯಂತ ಕಡಿಮೆ ಅಪಾಯವಿದ್ದಾಗ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸಿ ಇಂದು ಯದ್ವಾತದ್ವಾ ಸೋಂಕು ಉಲ್ಬಣಗೊಳ್ಳುತ್ತಿರುವ ಈ ಸಂಧರ್ಭದಲ್ಲಿ ಕೇಂದ್ರ ಸರಕಾರ ಕೈಚೆಲ್ಲಿ ಕೂತಿದೆ. ಇದರಿಂದಾಗಿ ಜನತೆ ಒಂದು ಕಡೆ ಭಯಭೀತಿಗೊಂಡರೆ, ಮತ್ತೊಂದು ಕಡೆ ಉದ್ಯೋಗವಿಲ್ಲದೆ, ಕೈಯಲ್ಲಿ ಕಾಸಿಲ್ಲದೆ, ತಿನ್ನಲು ಆಹಾರವಿಲ್ಲದೆ ಯಾತನಾಮಯ ಬದುಕು ಸಾಗಿಸುತ್ತಿದ್ದಾರೆ. ಈತನ್ಮಧ್ಯೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜನರ ಜೀವ ರಕ್ಷಿಸುವ ಬದಲು ಕೋರೋನಾ ಹತ್ತಿಕ್ಕುವ ನೆಪದಲ್ಲಿ ಜನಸಾಮಾನ್ಯರನ್ನು ಸುಲಿಗೆ ಮಾಡಲು ಖಾಸಗೀ ಆಸ್ಪತ್ರೆಗಳಿಗೆ ವಿಪರೀತ ಶುಲ್ಕ ವಸೂಲಿ ಮಾಡಲು ಗ್ರೀನ್ ಸಿಗ್ನಲ್ ನೀಡುವ ಮೂಲಕ ಬೇಲಿಯೇ ಎದ್ದು ಹೊಲ ಮೇಯ್ದಂತಾಗಿದೆ. ಇಂತಹ ಕಠೋರ ಮನೋಸ್ಥಿತಿಯ ಜನದ್ರೋಹಿ ಸರಕಾರಗಳ ವಿರುದ್ದ ಜನತೆ ಹೆಚ್ಚೆಚ್ಚು ಸಂಘಟಿತರಾಗಬೇಕೆಂದು" ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಹೇಳಿದರು.

ಅವರು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಸಿಪಿಐ(ಎಂ) ನೇತ್ರತ್ವದಲ್ಲಿ ಜರುಗುತ್ತಿರುವ ವಾರಾಚರಣೆ ಕಾರ್ಯಕ್ರಮದ ಭಾಗವಾಗಿ ಕುಲಶೇಖರದಲ್ಲಿ ಜರುಗಿದ ಬಿತ್ತಿಚಿತ್ರ ಪ್ರದರ್ಶನ ಹಾಗೂ ಪ್ರತಿಭಟನೆಯಲ್ಲಿ ಭಾಗವಹಿಸುತ್ತಾ ಈ ಮಾತುಗಳನ್ನು ಹೇಳಿದರು.

ಸಿಪಿಐ(ಎಂ) ಕುಲಶೇಖರ ಶಾಖಾ ಕಾರ್ಯದರ್ಶಿ ಶಶಿಕಲಾರವರು ಮಾತನಾಡುತ್ತಾ, "ಲಾಕ್ ಡೌನ್ ಸಂಧರ್ಭದಲ್ಲಿ ಕೆಲಸವಿಲ್ಲದೆ ಕಂಗಾಲಾಗಿದ್ದ ಕಾರ್ಮಿಕರಿಗೆ ವೇತನ ನೀಡಬೇಕೆಂದು ಘೋಷಣೆ ಮಾಡಿದ್ದ ಪ್ರಧಾನಮಂತ್ರಿಗಳು ಮರುದಿನವೇ ವೇತನ



ನೀಡದಿದ್ದರೂ ಪರವಾಗಿಲ್ಲ ಎಂದು ಮಾಲಕ ವರ್ಗದ ಪರವಾಗಿ ಹೇಳಿಕೆ ನೀಡುವ ಮೂಲಕ ಕೇಂದ್ರ ಸರಕಾರದ ಜುಟ್ಟು ದೇಶದ ಅಗರ್ಭ ಶ್ರೀಮಂತರ ಕೈಯಲ್ಲಿದೆ ಎಂದು ಸಾಬೀತು ಪಡಿಸಿದ್ದಾರೆ. ಎಲ್ಲಾ ವಿಭಾಗದ ಕಾರ್ಮಿಕರಿಗೆ ಮುಂದಿನ 6 ತಿಂಗಳುಗಳ ಕಾಲ ರೂ. 7500 ಹಣವನ್ನು ನೇರ ನಗದು ವರ್ಗಾವಣೆ ಮಾಡಬೇಕು ಹಾಗೂ 10 ಕೆಜಿ ಆಹಾರಧಾನ್ಯಗಳನ್ನು ಪ್ರತೀ ಕುಟುಂಬಕ್ಕೆ ನೀಡಬೇಕೆಂದು" ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಕುಲಶೇಖರ ಶಾಖಾ ಸದಸ್ಯರಾದ ವಸಂತಿ, ಗುಲಾಬಿ, ಮೀನಾ, ಕವಿತಾ, ಸವಿತಾ, ಪ್ರಿಯಾಂಕ, ಅಶ್ವಿನಿ ಮುಂತಾದವರು ಭಾಗವಹಿಸಿದ್ದರು.

ಕೋರೋನಾ ನಿಗ್ರಹಿಸುವಲ್ಲಿ ಜಿಲ್ಲಾಡಳಿತ ಸಂಪೂರ್ಣ ವಿಫಲ

"ರಾಜ್ಯದಲ್ಲಿ ಕೋರೋನಾ ವೈರಸ್ ವ್ಯಾಪಕವಾಗಿ ಹರಡುತ್ತಿದ್ದು, ದ.ಕ. ಜಿಲ್ಲೆಯಲ್ಲಿಯೂ ಭಯಭೀತಿಯನ್ನು ಹುಟ್ಟಿಸಿದೆ. ಕೇವಲ 12 ಸೋಂಕಿತರು ಇದ್ದಾಗ ಕಟ್ಟುನಿಟ್ಟಿನ ಕ್ರಮವಹಿಸಿದ್ದ ಜಿಲ್ಲಾಡಳಿತವು, ಇಂದು ಸಾವಿರ ಗಡಿಯತ್ತ ಹೋಗುತ್ತಿರುವಾಗ ಕೈಚೆಲ್ಲಿ ಕುಳಿತಿದೆ. ಕ್ವಾರಂಟೈನ್ ನಲ್ಲಿದ್ದವರಿಗೆ ಸರಿಯಾದ ವ್ಯವಸ್ಥೆ ಇಲ್ಲ, ಸೀಲ್ ಡೌನ್ ಆದ ಪ್ರದೇಶಗಳನ್ನು ಕೇಳುವವರೇ ಇಲ್ಲ. ಜಿಲ್ಲೆಯ ಜನತೆ ಭಯಗ್ರಸ್ತರಾಗಿದ್ದು, ಅವರಿಗೆ ಧೈರ್ಯ ನೀಡಬೇಕಾದ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು ಸೇರಿದಂತೆ ಇಡೀ



ಜಿಲ್ಲಾಡಳಿತವೇ ತೀರಾ ಬೇಜವಾಬ್ದಾರಿಯಿಂದ ವರ್ತಿಸುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ" ಎಂದು ಕಟ್ಟಡ ಕಾರ್ಮಿಕರ ಸಂಘಟನೆಯ ಜಿಲ್ಲಾ ಮುಖಂಡರಾದ ಉಮೇಶ್ ಶಕ್ತಿನಗರ ರವರು ಆಕ್ರೋಶ ವ್ಯಕ್ತಪಡಿಸಿದರು.

ಅವರು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನವಿರೋಧಿ ನೀತಿಗಳ ವಿರುದ್ದ ಶಕ್ತಿನಗರದಲ್ಲಿ ಹಮ್ಮಿಕೊಂಡ ಪ್ರತಿಭಟನೆಯಲ್ಲಿ ಭಾಗವಹಿಸುತ್ತಾ ಈ ಮಾತುಗಳನ್ನು ಹೇಳಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, "ಲಾಕ್ ಡೌನ್ ನಿಂದಾಗಿ ಲಕ್ಷಾಂತರ ಕಾರ್ಮಿಕರು ಕೆಲಸಗಳನ್ನು ಕಳೆದುಕೊಂಡಿದ್ದು, ಅವರಿಗೆ ಉದ್ಯೋಗದ ಭದ್ರತೆಯನ್ನು ಸರಕಾರ ಒದಗಿಸಬೇಕು. ತೀರಾ ಸಂಕಷ್ಟದಲ್ಲಿರುವ ಬೀಡಿ, ಬೀದಿ ಬದಿ, ಹಮಾಲಿ, ಬಸ್ ನೌಕರರು, ಹೋಟೆಲ್ ಕಾರ್ಮಿಕರು, ಖಾಸಗೀ ಶಾಲಾ ಶಿಕ್ಷಕರು, ಕಲಾವಿದರು ಸೇರಿದಂತೆ ವಿವಿಧ ವಿಭಾಗದ ಕಾರ್ಮಿಕರಿಗೆ ಸರಕಾರದಿಂದ ಯಾವುದೇ ರೀತಿಯ ಪರಿಹಾರ ಧನ ಘೋಷಣೆಯಾಗಿಲ್ಲ. ಬಗ್ಗೆ ಸರಕಾರ ಕೂಡಲೇ ಗಮನಹರಿಸಬೇಕೆಂದು" ಹೇಳಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ನಾಯಕರಾದ ಭಾಗೀರಥಿ, ತುಕಾರಾಮ, ಮಲ್ಲಿಕಾರ್ಜುನ, ಡಿವೈಎಫ್‌ಐ ನಾಯಕರಾದ ರಾಹುಲ್, ಭರತ್, ಪ್ರಸಾದ್ ಮುಂತಾದವರು ಹಾಜರಿದ್ದರು.

ಬೀಡಿ ಕಾರ್ಮಿಕರಿಗೆ ಪರಿಹಾರ ನೀಡಲು ಆಗ್ರಹಿಸಿ ಬೀಡಿ ಕಾರ್ಮಿಕರ ಪ್ರತಿಭಟನೆಗಳು:

ಲಾಕ್‌ಡೌನ್ ಅವಧಿಯಲ್ಲಿ ಸಂತ್ರಸ್ತರಾಗಿರುವ ಬೀಡಿ ಕಾರ್ಮಿಕರಿಗೆ ರಾಜ್ಯ ಸರ್ಕಾರ ರೂ. 6000/– ಪರಿಹಾರ ನೀಡಬೇಕು, 2020 ಎಪ್ರಿಲ್‌ನಿಂದ ಏರಿಕೆಯಾದ ತುಟ್ಟಿಭತ್ತೆಯನ್ನು ಬೀಡಿ ಮಾಲಕರು ಕಾರ್ಮಿಕರಿಗೆ ನೀಡಬೇಕು ಎಂಬುದಾಗಿ ಆಗ್ರಹಿಸುವ ಪ್ರತಿಭಟನೆಯನ್ನು ಬೀಡಿ ಕಾರ್ಮಿಕರು ಹಮ್ಮಿಕೊಳ್ಳಬೇಕೆಂದು ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್ ಕರೆ ಕೊಟ್ಟ ಮೇರೆಗೆ ದ.ಕ.ಜಿಲ್ಲೆಯಲ್ಲಿ ಜೂನ್ ತಿಂಗಳ ಅಂತ್ಯದಲ್ಲಿ ಹಾಗೂ ಜುಲೈ ಆರಂಭದಲ್ಲಿ ಅಲ್ಲಲ್ಲಿ ಪ್ರತಿಭಟನೆಗಳು ನಡೆದವು.

ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ ವತಿಯಿಂದ 28 ಜೂನ್ 2020 ರಂದು ಮುಸ್ತಾಫ ಅವರ ಬೀಡಿ ಬ್ರಾಂಚಿನ ಕಾರ್ಮಿಕರು ಪ್ರತಿಭಟನೆ ನಡೆಸಿದರು. ಯೂನಿಯನ್ ಮುಖಂಡರಾದ ಯು.ಜಯಂತ ನಾಯ್ಕ್ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ಮುಖಂಡರಾದ ಜನಾರ್ಧನ ಕುತ್ತಾರ್ ಉಪಸ್ಥಿತರಿದ್ದರು. 29 ಜೂನ್ 2020 ರಂದು ಇನ್ನೊಂದು ಬೀಡಿ ಬ್ರಾಂಚ್ ಮುಂದೆ ಪ್ರತಿಭಟನೆ ನಡೆಯಿತು.

ಮೂಡಬಿದ್ರಿ ವಲಯ ಬೀಡಿ ಕಾರ್ಮಿಕರು ಈಗಾಗಲೇ ಕೇಮಾರು ಮತ್ತು ಅಮ್ಟಾಡಿಯಲ್ಲಿ 30 ಜೂನ್ 2020 ರಂದು ಪ್ರತಿಭಟನಾ ಪ್ರದರ್ಶನ ನಡೆಸಿರುತ್ತಾರೆ. ಪಲ್ಕೆ, ವಿಶಾಲನಗರ, ಕೊಣಾಜೆ, ವಾಲ್ಪಾಡಿ, ಜೋಕೊಟ್ಟು, ಕಾಪಿಕಾಡು, ತಂಡ್ರಕೆರೆಗಳಲ್ಲಿ ಈ ವಾರದೊಳಗಾಗಿ ಬೀಡಿ ಕಾರ್ಮಿಕರು ಬೀಡಿ ಬ್ರಾಂಚುಗಳ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಲಿರುವರು.

ಉಳ್ಳಾಲ ವಲಯದಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ:

ಕಟ್ಟಡ ಕಾರ್ಮಿಕರಿಗೆ ಕೋವಿಡ್ ಸಂಕಷ್ಟದ ಹಿನ್ನೆಲೆಯಲ್ಲಿ ರೂ. 6000/– ಪರಿಹಾರ ನೀಡಬೇಕೆಂದು ಆಗ್ರಹಿಸಿ ಉಳ್ಳಾಲ ವಲಯದ ಮದಕ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ಸಿಡಬ್ಲ್ಯೂಎಫ್‌ಐ ದ.ಕ.ಜಿಲ್ಲಾ ಕಾರ್ಯದರ್ಶಿ ಯು. ಜಯಂತ ನಾಯ್ಕ್ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಮದಕ ಕಟ್ಟಡ ಕಾರ್ಮಿಕ ಘಟಕದ ಅಧ್ಯಕ್ಷ ಇಬ್ರಾಹಿಂ ಮದಕ, ಕಾರ್ಯದರ್ಶಿ ಅಬೂಸಾಲ ಉಪಸ್ಥಿತರಿದ್ದರು.

ರೈತರ ಅಖಿಲ ಭಾರತ ಪ್ರತಿಭಟನಾ ಪ್ರದರ್ಶನಗಳು ದ.ಕ.ಜಿಲ್ಲೆಯಲ್ಲಿ:

ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ಜೂನ್ 27 ರಿಂದ ಜೂನ್ 30ರ ವರೆಗೆ ಕೇಂದ್ರ ರಾಜ್ಯ ಸರಕಾರಗಳ ರೈತ ವಿರೋಧಿ ಸುಗ್ರೀವಾಜ್ಞೆಗಳನ್ನು ವಿರೋಧಿಸಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಬೇಕೆಂದು ಕರೆ ಕೊಟ್ಟ ಮೇರೆಗೆ 23 ಜೂನ್ 2020 ರಂದು ರೈತ ಸಂಘಗಳ ಜಿಲ್ಲಾ ಸಮನ್ವಯ ಸಮಿತಿ ಬಂಟ್ವಾಳದಲ್ಲಿ ಸಭೆ ಸೇರಿ ಕಾರ್ಯಕ್ರಮಗಳನ್ನು ರೂಪಿಸಿತು. ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ (ಹಸಿರು ಸೇನೆ)ಯ ಎರಡು ಬಣಗಳು ಒಟ್ಟಾಗಿ ಕಾರ್ಯಕ್ರಮಗಳನ್ನು ರೂಪಿಸಿವೆ. ಪ್ರಾಂತ ರೈತ ಸಂಘ ವಿಶೇಷ ಮುತುವರ್ಜಿ ವಹಿಸಿ ಜಂಟಿ ಕಾರ್ಯಕ್ರಮಗಳು ಯಶಸ್ವಿಯಾಗುವಂತೆ ನೋಡಿಕೊಂಡಿವೆ.

27 ಜೂನ್ 2020 ರಂದು ಗುರುಪುರ ಕೈಕಂಭದಲ್ಲಿ ನಾಡ ಕಚೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ, ಗುರುಪುರ ವಲಯಾಧ್ಯಕ್ಷ ಸದಾಶಿವದಾಸ್ ಮಾತನಾಡಿದರು. ವಲಯ ರೈತ ಮುಖಂಡರಾದ ಗಂಗಯ್ಯ ಅಮೀನ್, ನೋಣಯ್ಯ ಗೌಡ ಉಪಸ್ಥಿತರಿದ್ದರು. 29 ಜೂನ್ 2020 ರಂದು ಸುಳ್ಯ ಮಿನಿ ವಿಧಾನಸೌಧದ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಜಾನಿ ಮತ್ತಿತರರು ಭಾಗವಹಿಸಿದ್ದರು. 30 ಜೂನ್ 20 ರಂದು ಬಂಟ್ವಾಳ ಮಿನಿ ವಿಧಾನಸೌಧದ ಎದುರು ನಡೆದ ಪ್ರದರ್ಶನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಖಜಾಂಚಿ ವಾಸುದೇವ ಉಚ್ಚಿಲ, ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ ಮಾತನಾಡಿದರು. ಪ್ರಾಂತ ರೈತ ಸಂಘದ ತಾಲೂಕು ಅಧ್ಯಕ್ಷ ರಾಮಣ್ಣ ವಿಟ್ಲ ಉಪಸ್ಥಿತರಿದ್ದರು. ಅದೇ ದಿನ ಅಪರಾಹ್ನ ಮೂಡಬಿದ್ರಿ ತಾಲೂಕು ಕಚೇರಿ ಎದುರು ನಡೆದ ಪ್ರದರ್ಶನವನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ ಮಾತನಾಡಿದರು. ಪ್ರಾಂತ ರೈತ ಸಂಘದ ಗುರುಪುರ ವಲಯಾಧ್ಯಕ್ಷ ಸದಾಶಿವದಾಸ್, ಮೂಡಬಿದ್ರಿ ವಲಯದ ಅಧ್ಯಕ್ಷ ಸುಂದರ ಶೆಟ್ಟಿ, ಕಾರ್ಯದರ್ಶಿ

ಪುಟ 6 ಕ್ಕೆ

ಇತ್ತೀಚಿನ ದಿನಗಳಲ್ಲಿ ಕರ್ನಾಟಕದ ಮುಖ್ಯ ಪತ್ರಿಕೆಯೊಂದರಲ್ಲಿ APMC ಗೆ ಸಂಬಂಧಿಸಿದ ಕಾನೂನನ್ನು ಮಾರ್ಪಾಡು ಮಾಡಿ ಅದರಲ್ಲಿ ಮುಕ್ತ ಮಾರುಕಟ್ಟೆ ಅರ್ಥಾತ್ ಬಂಡವಾಳಶಾಹಿಗೆ ಪ್ರವೇಶವನ್ನು ಕೊಡುವುದು ಸಾಕಷ್ಟು ಚರ್ಚೆಯನ್ನು ಹುಟ್ಟುಹಾಕಿತು. ಆದರೆ ನಾವು ಗಮನಿಸಬೇಕಾದುದೆಂದರೆ ಈ ವಾದ ವಿವಾದಗಳಲ್ಲಿ ಭಾಗವಹಿಸಿದ ಅನೇಕ ರೈತರು ಕೂಡ ನಾನು ಮೇಲೆ ವಿವರಿಸಿದ ಸಂಕಥನಗಳನ್ನು ಕಾಮನ್ ಸೆನ್ಸ್ ಸತ್ಯಗಳೆಂದು ಒಪ್ಪಿಕೊಂಡಿದ್ದಾರೆ. ಈ ಪರಿಸ್ಥಿತಿ ನನಗೆ ಸಮಸ್ಯಾತ್ಮಕವಾಗಿ ಕಾಣುತ್ತಿದೆ. ಒಂದು ಕಡೆಗೆ ಪ್ರತಿಭಟನೆಗಳಿಗೆ ಅವಕಾಶವಿಲ್ಲ. ಕೋವಿಡ್ ವೈರಾಣು ಅಧಿಕಾರಸ್ಥರಿಗೆ ದೇವರೇ ಕೊಟ್ಟ ವರವಾಗಿದೆ. ಇಷ್ಟೇ ಅಪಾಯಕಾರಿಯೆಂದರೆ ಖಾಸಗಿ ಬಂಡವಾಳಶಾಹಿಯೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರವೆನ್ನುವ ಚಿಂತನೆಯು ಸಮುದಾಯದ ಒಪ್ಪಿತ ಹಾಗೂ ಸ್ವೀಕೃತ ಚಿಂತನೆಯಾಗುತ್ತಿರುವುದು.

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಇದಕ್ಕೆ ಪೂರಕವಾಗಿ ನಮ್ಮ ಮಾಧ್ಯಮಗಳು ನಿಜವಾಗಿಯೂ ಜನಸಾಮಾನ್ಯರ ಅಫೀಮುಗಳಾಗಿ ಕೆಲಸ ಮಾಡುತ್ತಿವೆ. “ಧರ್ಮ ಜನಸಮೂಹಗಳ ಅಫೀಮು” ಎಂಬ ಹೇಳಿಕೆಯ ಅರ್ಥವೆಂದರೆ ವಾಸ್ತವದ ಕಟುಸತ್ಯವನ್ನು ಮರೆಮಾಚಿಸುವ ಸಂಕಥನಗಳನ್ನು ಒಪ್ಪುವುದು. ಅತ್ಯಂತ ಅವಶ್ಯಕವಾದ ವಿಮರ್ಶಾತ್ಮಕ ಚಿಂತನೆಯು ಇಲ್ಲದಿದ್ದಾಗ ಇದು ಸುಲಭವಾಗಿಬಿಡುತ್ತದೆ.



ನವ ಬಂಡವಾಳಶಾಹಿಯ ಹೊಸ ಚಹರೆಗಳು

ಇತ್ತೀಚಿನ ದಿನಗಳಲ್ಲಿ ಕರ್ನಾಟಕದ ಮುಖ್ಯ ಪತ್ರಿಕೆಯೊಂದರಲ್ಲಿ ಪ್ರಚಲಿತ ವಿದ್ಯಮಾನಗಳ ಬಗ್ಗೆ ಹಾಗೂ ವಿವಾದಗಳ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಇದರಲ್ಲಿ ಪ್ರಮುಖವಾಗಿ APMC ಗೆ ಸಂಬಂಧಿಸಿದ ಕಾನೂನನ್ನು ಮಾರ್ಪಾಡು ಮಾಡಿ ಅದರಲ್ಲಿ ಮುಕ್ತ ಮಾರುಕಟ್ಟೆ ಅರ್ಥಾತ್ ಬಂಡವಾಳಶಾಹಿಗೆ ಪ್ರವೇಶವನ್ನು ಕೊಡುವುದು ಸಾಕಷ್ಟು ಚರ್ಚೆಯನ್ನು ಹುಟ್ಟುಹಾಕಿತು. ವಿಶೇಷವೆಂದರೆ ಈ ಬದಲಾವಣೆಗಳನ್ನು ಮಾಡಬೇಕೆಂದು ಆದೇಶವು ಬಂದಿದ್ದು ಕೇಂದ್ರದಿಂದ. ಅಂದರೆ ಭಾರತದ ಸಂವಿಧಾನ ಕಲ್ಪಿಸಿಕೊಟ್ಟ ಫೆಡರಲ್ ರಚನೆಯ ಆಶಯಗಳಿಗೆ ತದ್ವಿರುದ್ಧವಾಗಿ ಈಗ ರಾಜ್ಯಗಳಿಗೆ ನಿಮ್ಮ ಕಾನೂನುಗಳನ್ನು ಹೀಗೆ ಬದಲಾಯಿಸಿ ಎನ್ನುವ ನಿರ್ದೇಶನಗಳು ಬರತೊಡಗಿವೆ. ತನ್ನದಲ್ಲದ ಕ್ಷೇತ್ರದಲ್ಲಿ ಕೇಂದ್ರ ಸರಕಾರವು ಅತಿಕ್ರಮ ಪ್ರವೇಶ ಮಾಡತೊಡಗಿದೆ. ಒಂದು ಪತ್ರಿಕಾ ವರದಿಯಲ್ಲಿ ಅತ್ಯಂತ ಅನೌಪಚಾರಿಕವಾಗಿ ಮಾತನಾಡುತ್ತಾ ಮಾನ್ಯ ಯಡಿಯೂರಪ್ಪನವರು “ಇದರಲ್ಲಿ ನಂದೇನಿಲ್ಲ; ಎಲ್ಲಾ ಮೇಲಿಂದ ಬಂದಿರೋದು” ಎಂದಿದ್ದಾರಂತೆ. ಇದು ನಿಜವೂ ಇರಬಹುದು. ಆದರೆ ಅವರು ಅದನ್ನು ಮುಕ್ತವಾಗಿ ಹೇಳಲಾರರು. ಅದರಿಂದ ರಾಜಕೀಯವಾಗಿ ಗಂಭೀರವಾದ ಈ ಸಮಸ್ಯೆಗೆ ಪರಿಹಾರವೂ ಸಿಕ್ಕುವುದಿಲ್ಲ. ಇಷ್ಟೇ ಮುಖ್ಯವೆಂದರೆ ಕೋವಿಡ್‌ನಿಂದಾಗಿ ವಿಧಾನಸಭೆ, ಸಂಸತ್ತುಗಳ ಸಭೆಗಳು ನಡೆಯಲಾಗದ ಸನ್ನಿವೇಶವನ್ನು ದುರ್ಬಳಕೆ ಮಾಡಿಕೊಂಡು ಸುಗ್ರೀವಾಜ್ಞೆಗಳ ಮೂಲಕ ಈ ಕಾನೂನಾತ್ಮಕ ಬದಲಾವಣೆಗಳನ್ನು ತರಲಾಗುತ್ತಿದೆ. ಈಗ ಪ್ರತಿಭಟನೆಗಳು ಸಾಧ್ಯವಿಲ್ಲದ್ದರಿಂದ ಈ ಕೆಲಸವು ಸುಗಮವಾಗಿ ನಡೆಯುತ್ತಿದೆ. ಅದೇ ರೀತಿ ಭೂಸುಧಾರಣೆ ಕಾಯಿದೆಯಲ್ಲಿ ಮೂಲಭೂತ ಬದಲಾವಣೆಗಳನ್ನು ತರಲಾಗುತ್ತಿದೆ. ಬಹುಪಾಲು ಜನರು ಇದನ್ನು ತೀವ್ರವಾಗಿ ವಿರೋಧಿಸಿದರು. ಸರಕಾರವು ವಿರೋಧವನ್ನು ತಳ್ಳಿಹಾಕಿ ಮುಂದುವರೆಯುತ್ತಿದೆ.

ಈ ಬಗ್ಗೆ ಬಂದಿರುವ ಪ್ರತಿಕ್ರಿಯೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಇಂಥ ಬದಲಾವಣೆಗಳಿಂದ ಮಾತ್ರ ‘ಅಭಿವೃದ್ಧಿ’ಯು ಸಾಧ್ಯವೆಂದು ವಾದಿಸುವ ಪ್ರತಿಕ್ರಿಯೆಗಳಲ್ಲಿ ಕಂಡುಬರುತ್ತಿರುವ ಹೊಸ ಸಂಕಥನವೊಂದು ಕುತೂಹಲಕಾರಿಯಾಗಿದೆ. ಅದೇನೆಂದರೆ ಈ ಕಾನೂನುಗಳು ‘ಹಿಂದಿನ’ ಕಾಲದ ಅದರಲ್ಲೂ ರೈತಪರ ಸಮಾಜವಾದಿ ಎಂದು ಕರೆಯಲಾಗುತ್ತಿದ್ದ ಧೋರಣೆಗಳ ಫಲವಾಗಿದ್ದವು. ಅಂದರೆ ಈಗ ನಿಷ್ಪ್ರಯೋಜಕವಾದ ರಾಜಕೀಯ ಚಿಂತನೆಯ ಫಲವಾಗಿದ್ದವು. ಹೇಗೆ ಮಾರ್ಕ್ಸ್‌ವಾದವು ಈಗ ಪ್ರಸ್ತುತವಲ್ಲವೆಂದು ವಾದಿಸಲಾಗುತ್ತದೆಯೋ ಅದೇ ಧಾಟಿಯಲ್ಲಿ ಈ ಕಾನೂನುಗಳ ಬಗ್ಗೆ ಹೇಳಲಾಗುತ್ತಿದೆ. ಇದು ನವಬಂಡವಾಳಶಾಹಿಯ ವರಸೆಯೇ ಅಲ್ಲವೆ? ‘ಅಭಿವೃದ್ಧಿ’ ‘ಆಧುನಿಕತೆ’ ‘ಹೊಸ ಆರ್ಥಿಕತೆ’ ಇಂಥ ಪದಗಳ ಬೆಂಬಲದಿಂದ ಸ್ವಲ್ಪಮಟ್ಟಿಗೆಯಾದರೂ ಪ್ರಜಾಸತ್ತಾತ್ಮಕವಾಗಿದ್ದ ರಾಜಕೀಯ ನೀತಿಗಳನ್ನು ಅಂಚಿಗೆ ತಳ್ಳುವ ಕೆಲಸವಿದಾಗಿದೆ. ಇದಕ್ಕೆ ಪೂರಕವಾದ ಇನ್ನೊಂದು ಸಂಕಥನವೆಂದರೆ ಈ ನೀತಿಗಳನ್ನು ಸರಿಯಾಗಿ ಅನುಷ್ಠಾನ ಮಾಡದ ನಮ್ಮ ಸರಕಾರ ಹಾಗೂ ನೌಕರಶಾಹಿಯಿಂದಾಗಿ ಆಗಿರುವ ತಪ್ಪುಗಳನ್ನೆಲ್ಲ ಆ ನೀತಿಗಳ ಹಿಂದಿನ ಚಿಂತನೆಯ ಮೇಲೆಯೇ ಹೊರಿಸುವ ಸಂಕಥನವಿದಾಗಿದೆ. ಉದಾಹರಣೆಗೆ APMC ಗಳಲ್ಲಿ ಕೆಲವು ಹಿತಾಸಕ್ತಿಗಳು ರೈತರ ವಿರುದ್ಧ ಕೆಲಸ ಮಾಡಿದ್ದವು; ಅಲ್ಲಿ ಈ ಶಕ್ತಿಗಳು ಪ್ರಬಲವಾಗಿದ್ದವು. ಇದೆಲ್ಲವೂ ನಿಜ. ಆದರೆ ಇದಕ್ಕೆ ಪರಿಹಾರವಾಗಿ ಕಾಣುತ್ತಿರುವುದು ಬಂಡವಾಳಶಾಹಿ ಕಂಪನಿಗಳಿಗೆ ಮುಕ್ತ ಪ್ರವೇಶ ನೀಡುವುದು. ಇದು ಹೇಗಿದೆಯೆಂದರೆ ಅನೇಕ ದಶಕಗಳವರೆಗೆ ಸರಕಾರಿ ಸ್ವಾಮ್ಯದ ಉದ್ದಿಮೆಗಳು ಭ್ರಷ್ಟಾಚಾರ ಹಾಗೂ ದುರಾಡಳಿತದಿಂದ ನಷ್ಟ ಅನುಭವಿಸಿ ರೋಗಿಷ್ಟ ಉದ್ಯಮ (Sick industry) ಎಂದು ಕರೆದು ಅವುಗಳನ್ನು ಖಾಸಗಿ ವಲಯಕ್ಕೆ ಮಾರುವ ಪದ್ಧತಿಯ ಹೊಸ ಅವತಾರವಾಗಿದೆ. ನನ್ನ ನಂಬಿಕೆಯೆಂದರೆ ಬಂಡವಾಳಶಾಹಿ ಶಕ್ತಿಗಳು ಸರಕಾರಿ ಸ್ವಾಮ್ಯದ ಉದ್ದಿಮೆಗಳನ್ನು ರೋಗಿಷ್ಟವಾಗಿಸಲು ಕನಿಷ್ಟ 5 ರಿಂದ 10 ವರ್ಷ ಪ್ರಯತ್ನಪಟ್ಟು ಯಶಸ್ವಿಯಾಗುತ್ತವೆ. ಈಗ ಬಿಡಿ. ಅತ್ಯಂತ ಲಾಭದಾಯಕವಾಗಿರುವ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳನ್ನು ಸಂಸ್ಥೆಗಳನ್ನು ಖಾಸಗಿ ವಲಯಕ್ಕೆ ಕೊಡಲಾಗುತ್ತಿದೆ. ಕೋಮುವಾದವು ಭಾರತದಲ್ಲಿ ಪ್ರಬಲವಾಗತೊಡಗಿದ ಕಾಲದಲ್ಲಿಯೇ ಅದು ಬಂಡವಾಳಶಾಹಿಯ ಅವಳಿ–ಜವಳಿಯೆಂದು ಹೇಳಿದರೆ ಬಹಳ ಜನ ನಂಬಲಿಲ್ಲ. ನವ ಬಂಡವಾಳಶಾಹಿಗೆ ಇದ್ದ ಒಂದೇ ತೊಡಕೆಂದರೆ ಪ್ರಜಾಪ್ರಭುತ್ವವಾದಿ ಹೋರಾಟಗಳು ಮತ್ತು ಹಿಂದಿನ ಕಾನೂನುಗಳು. ಇವೆರಡರ ತೊಡಕನ್ನು ಈಗ ಸರಕಾರವು ನಿವಾರಿಸಿದೆ. ಇದು ನಿರೀಕ್ಷಿತವೇ.

ಆದರೆ ನಾವು ಗಮನಿಸಬೇಕಾದುದೆಂದರೆ ಈ ವಾದ ವಿವಾದಗಳಲ್ಲಿ ಭಾಗವಹಿಸಿದ ಅನೇಕ ರೈತರು ಕೂಡ ನಾನು ಮೇಲೆ ವಿವರಿಸಿದ ಸಂಕಥನಗಳನ್ನು ಕಾಮನ್ ಸೆನ್ಸ್ ಸತ್ಯಗಳೆಂದು ಒಪ್ಪಿಕೊಂಡಿದ್ದಾರೆ. ತಾವು ಕೂಡ ಒಬ್ಬ ರೈತ ಎಂದು ಹೇಳಿಕೊಂಡ ಖಾಸಗಿ ಬಹುರಾಷ್ಟ್ರೀಯ ವಾಹಿನಿಯ ಹಿರಿಯ ಸಂಪಾದಕರೊಬ್ಬರು ಭೂಸುಧಾರಣಾ ಕಾನೂನು “ಮೂರ್ಖ ಕಾನೂನು” ಆಗಿತ್ತೆಂದು ಬರೆಯುತ್ತಾರೆ. ಸಮಾಜವಾದಿ ಧೋರಣೆಯುಳ್ಳವರನ್ನು “ಜಾಗಟೆ ಬಾರಿಸುವವರು” ಎಂದು ಹೀಯಾಳಿಸುತ್ತಾರೆ. ಹಾಗೆಯೇ ಹಲವು ಆಧುನಿಕ ರೈತರಿಗೆ ಸರಕಾರದ ಕಾನೂನುಗಳಿಂದ ಈಗ ಮುಕ್ತಿ ಸಿಕ್ಕುತ್ತಿದೆಯೆಂದು ಅನ್ನಿಸಿದೆ.

ಈ ಪರಿಸ್ಥಿತಿ ನನಗೆ ಸಮಸ್ಯಾತ್ಮಕವಾಗಿ ಕಾಣುತ್ತಿದೆ. ಒಂದು ಕಡೆಗೆ ಪ್ರತಿಭಟನೆಗಳಿಗೆ ಅವಕಾಶವಿಲ್ಲ. ಕೋವಿಡ್ ವೈರಾಣು ಅಧಿಕಾರಸ್ಥರಿಗೆ ದೇವರೇ ಕೊಟ್ಟ ವರವಾಗಿದೆ. ಇಷ್ಟೇ ಅಪಾಯಕಾರಿಯೆಂದರೆ ಖಾಸಗಿ ಬಂಡವಾಳಶಾಹಿಯೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರವೆನ್ನುವ ಚಿಂತನೆಯು ಸಮುದಾಯದ ಒಪ್ಪಿತ ಹಾಗೂ ಸ್ವೀಕೃತ ಚಿಂತನೆಯಾಗುತ್ತಿರುವುದು. ಇದಕ್ಕೆ ಪೂರಕವಾಗಿ ನಮ್ಮ ಮಾಧ್ಯಮಗಳು ನಿಜವಾಗಿಯೂ ಜನಸಾಮಾನ್ಯರ ಅಫೀಮುಗಳಾಗಿ ಕೆಲಸ ಮಾಡುತ್ತಿವೆ. ಧರ್ಮ ಜನಸಮೂಹಗಳ ಅಫೀಮು (Religion is ‘The opium of the masses’) ಎಂಬ ಹೇಳಿಕೆಯ ಅರ್ಥವೆಂದರೆ ವಾಸ್ತವದ ಕಟುಸತ್ಯವನ್ನು ಮರೆಮಾಚಿಸುವ ಸಂಕಥನಗಳನ್ನು ಒಪ್ಪುವುದು. ಅತ್ಯಂತ ಅವಶ್ಯಕವಾದ ವಿಮರ್ಶಾತ್ಮಕ ಚಿಂತನೆಯು ಇಲ್ಲದಿದ್ದಾಗ ಇದು ಸುಲಭವಾಗಿಬಿಡುತ್ತದೆ. ಬಹಳ ವರ್ಷಗಳ ಹಿಂದೆ ನೀನಾಸಂನ ಕಾರ್ಯಕ್ರಮದಲ್ಲಿ ಪ್ರಸಿದ್ಧ ಚಿಂತಕರಾದ ಐಜಾಜ್ ಅಹಮದ್ ಅವರು ಜಗತ್ತಿನಲ್ಲಿ ಜಾಗತೀಕರಣಕ್ಕೆ ಸಂಪೂರ್ಣ ಯಶಸ್ಸು ದೊರೆತಿರುವುದು ಭಾರತದಲ್ಲಿ ಮಾತ್ರ ಎಂದು ಹೇಳಿದ್ದರು. ಈಗ ಅದು ನಿಜವಾಗುತ್ತಿದೆ. ಯೂರೋಪಿನ ಅನೇಕ ಸಂಘಟನೆಗಳು ಜಾಗತೀಕರಣದ ವಿರುದ್ಧ ಹೋರಾಡುತ್ತಿವೆ. ಲ್ಯಾಟಿನ್ ಅಮೇರಿಕನ್ ದೇಶಗಳು ಸಂಕಷ್ಟದಲ್ಲಿವೆ; ಅವುಗಳಲ್ಲಿ ಕೆಲವು ಬಲಪಂಥೀಯ ಸರ್ವಾಧಿಕಾರಿಗಳ ಕ್ರೂರ ಹಿಡಿತದಲ್ಲಿವೆ. ಆದರೂ ಅವು ಜಾಗತೀಕರಣದ ವಿರುದ್ಧ ತಮ್ಮದೇ ಆದ ಹೋರಾಟಗಳನ್ನು ನಡೆಸಿವೆ. ಭಾರತದಲ್ಲಿ ಮಾತ್ರ ಎಡಪಕ್ಷಗಳ ಆಚೆಗೆ ಯಾವ ಪ್ರತಿಭಟನೆಯೂ ಗಟ್ಟಿಯಗಿ ನಡೆಯುತ್ತಿಲ್ಲ. ಇದರಿಂದಾಗಿ ಬಂಡವಾಳದ ಶಕ್ತಿಗಳಿಗೆ ಬೆಂಬಲವು ಸಿಕ್ಕುತ್ತಿದೆ. ಹೀಗೆ ಜನಸಮುದಾಯಗಳು ತಮ್ಮ ಅನುಮೋದನೆಯನ್ನು ಹಾಗೂ ಸ್ವೀಕೃತಿಯನ್ನು ನೀಡಿದರೆ ಬಂಡವಾಳಶಾಹಿಗೆ ಸಾಂಸ್ಕೃತಿಕವಾಗಿ ಕೂಡ ಯಾಜಮಾನ್ಯವು (ಹೆಜೆಮನಿ) ದೊರೆಯುತ್ತದೆ. ವಿಶೇಷವಾಗಿ ಜನಪರ ಚಳುವಳಿಗಳು ದುರ್ಬಲವಾದ ಸಂದರ್ಭದಲ್ಲಿ ಈ ಅಪಾಯಗಳು ಹೆಚ್ಚಾಗುತ್ತಿವೆ. ಇದರ ಬಗ್ಗೆ ನಾವೆಲ್ಲಾ ಗಾಢವಾಗಿ ಚಿಂತಿಸಬೇಕಿದೆ.

ತೈಲ ದರ ಏರಿಕೆ ವಿರುದ್ಧ, ಕೋವಿಡ್ ಪರಿಹಾರಕ್ಕಾಗಿ ಆಗ್ರಹಿಸಿ........ ಪುಟ 5 ರಿಂದ

ಕೃಷ್ಣಪ್ಪ ಕೊಣಾಜೆ, ರಾಜ್ಯ ರೈತ ಸಂಘದ ಆಲ್ವಿನ್ ಭಾಗವಹಿಸಿದ್ದರು.

1 ಜುಲೈ 2020 ರಂದು ಮಂಗಳೂರು ನಗರದ ಮಿನಿ ವಿಧಾನಸೌಧದ ಎದುರು ನಡೆದ ಪ್ರದರ್ಶನವನ್ನುದ್ದೇಶಿಸಿ ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ, ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ ಮಾತನಾಡಿದರು. ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಓಸ್ವಾಲ್ಡ್ ಪ್ರಕಾಶ್ ಫೆರ್ನಾಂಡೀಸ್, ಪ್ರಾಂತ ರೈತ ಸಂಘದ ಜಿಲ್ಲಾ ಮುಖಂಡರಾದ ಸದಾಶಿವದಾಸ್, ಜಯಂತ ಅಂಬ್ಲಮೊಗರು, ವಾಸುದೇವ ಉಚ್ಚಿಲ ಉಪಸ್ಥಿತರಿದ್ದರು. ಕೋವಿಡ್ ನೆಪ ಹೇಳಿ ಮಿನಿ ವಿಧಾನಸೌಧದ ಆವರಣದಲ್ಲಿ ಪ್ರತಿಭಟನೆಗೆ ಪೊಲೀಸ್ ಅಧಿಕಾರಿಗಳು ಅವಕಾಶ ಕೊಟ್ಟಿರಲಿಲ್ಲ. ಆದ ಕಾರಣ ಹೊರಗೆ ಪ್ರತಿಭಟನಾ ಪ್ರದರ್ಶನ ನಡೆಸಿದ್ದಲ್ಲದೆ, ತಹಶೀಲ್ದಾರರೇ ಖುದ್ದು ರಸ್ತೆಗೆ ಬಂದು ರೈತರ ಆಕ್ಷೇಪ ಪತ್ರವನ್ನು ಸ್ವೀಕರಿಸುವಂತೆ ಮಾಡಲಾಯಿತು.

1 ಜುಲೈ 20 ರಂದೇ ಪುತ್ತೂರು ಮಿನಿ ವಿಧಾನ ಸೌಧದ ಎದುರು ನಡೆದ ಪ್ರತಿಭಟನೆಯಲ್ಲಿ ರೈತ ಸಂಘದ ಇನ್ನೊಂದು ಬಣದ ಜಿಲ್ಲಾಧ್ಯಕ್ಷರಾದ ಶ್ರೀಧರ ಶೆಟ್ಟಿ ಮಾತನಾಡಿದರು. ಪ್ರಾಂತ ರೈತ ಸಂಘದ ಪುತ್ತೂರು ತಾಲೂಕು ಮುಖಂಡ ಪಿ.ಕೆ. ಸತೀಶನ್ ಹಾಗೂ ಎರಡೂ ರಾಜ್ಯ ರೈತ ಸಂಘಗಳ ತಾಲೂಕು ಕಾರ್ಯಕರ್ತರು ಭಾಗವಹಿಸಿದ್ದರು.

ಅದೇ ದಿನ ಬೆಳ್ತಂಗಡಿ ಮಿನಿ ವಿಧಾನಸೌಧದ ಎದುರು ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಪ್ರಾಂತ ರೈತ ಸಂಘದ ತಾಲೂಕು ಅಧ್ಯಕ್ಷ ಎಸ್.ಎಂ. ಶಿವಕುಮಾರ್, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ತಾಲೂಕು ಮುಖಂಡರಾದ ಶೇಖರ ಲಾಯಿಲ, ವಸಂತ ನಡ, ರಾಜ್ಯ ರೈತ ಸಂಘದ ಜಿಲ್ಲಾ ಮುಖಂಡ ಜಯಾನಂದ ಪಿತ್ತಿಲ ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಕಾರ್ಯದರ್ಶಿ ಸೆಲಿಮೋನು ಪುದುವೆಟ್ಟು, ಪ್ರಾಂತ ರೈತ ಸಂಘದ ಮಹಿಳಾ ಘಟಕದ ಸುಕನ್ಯಾ ಹೆಚ್. ಉಪಸ್ಥಿತರಿದ್ದರು.



ದರ್ಪ ಪ್ರದರ್ಶನದ ಆಳ್ವಿಕೆ

ಸರ್ವಾಧಿಕಾರಶಾಹಿ ಸಂರಚನೆಯ ಕ್ರೋಡೀಕರಣ

ತಮಿಳುನಾಡಿನ ಕಸ್ಟಡಿಯಲ್ಲಿ ಸಾವುಗಳು, ಚಿತ್ರಹಿಂಸೆ ದೇಶದ ಗಮನ ಸೆಳೆದಿದೆ. ಆದರೆ ಇವೆಲ್ಲ ತಮಿಳುನಾಡಿನಲ್ಲಿ ಮಾತ್ರವಲ್ಲ, ಹಲವು ರಾಜ್ಯಗಳಲ್ಲಿ ಒಂದು ಸಾಮಾನ್ಯ ಘಟನೆಯಾಗುತ್ತಿದೆ. ಕಸ್ಟಡಿಯಲ್ಲಿ ಪೋಲೀಸ್ ಅತಿರೇಕಗಳನ್ನು ತಡೆಯುವ ನಿರ್ದೇಶನಗಳು ಮತ್ತು ಕ್ರಮಗಳನ್ನು ರಾಜ್ಯ ಸರಕಾರಗಳು ಒಂದೋ ಅನುಷ್ಠಾನಗೊಳಿಸಿಲ್ಲ, ಇಲ್ಲವೇ ಬುಡಮೇಲು ಮಾಡಿವೆ. ಕಳೆದ ಆರು ವರ್ಷಗಳಲ್ಲಿ, ಮೋದಿ ಸರಕಾರದ ವ್ಯವಸ್ಥೆಯಲ್ಲಿ ಪೋಲೀಸರು ಮತ್ತು ಭದ್ರತಾ ಏಜೆಂಸಿಗಳು ಮನಬಂದಂತೆ, ಯಾವುದೇ ಲಂಗುಲಗಾಮಿಲ್ಲದೆ ವರ್ತಿಸಲು ಭಾರೀ ಸಡಿಲ ಬಿಡಲಾಗಿದೆ, ಮಹಾಮಾರಿ ಸೃಷ್ಟಿಸಿದ ಅಸಾಧಾರಣ ಪರಿಸ್ಥಿತಿ ಈ ಪ್ರವೃತ್ತಿಯನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಲಾಕ್‌ಡೌನ್‌ನ ಮೂರು ತಿಂಗಳ ಸಣ್ಣ ಅವಧಿಯಲ್ಲಿ ನಡೆದಿರುವುದು ಭಾರತದಲ್ಲಿ ಸರ್ವಾಧಿಕಾರಶಾಹಿಯ ಸಂರಚನೆಯ ಕ್ರೋಡೀಕರಣ. ಪೋಲೀಸ್ ದರ್ಪ ಪ್ರದರ್ಶನ ಈ ದಮನಕಾರೀ ಆಳ್ವಿಕೆಯ ಒಂದು ಭಾಗವಷ್ಟೇ.

ಪ್ರಕಾಶ ಕಾರಟ್



ಒಬ್ಬ ತಂದೆ ಮತ್ತು ಮಗ, ಜಯರಾಜ್ ಮತ್ತು ಬೆನಿಕ್ಸ್ ಪೋಲೀಸ್ ಠಾಣೆಯಲ್ಲಿ ಅಮಾನುಷ ಚಿತ್ರಹಿಂಸೆಯ ನಂತರ ಸಾವಪ್ಪಿರುವುದು ವ್ಯಾಪಕ ಆಕ್ರೋಶವನ್ನು ಉಂಟು ಮಾಡಿದೆ. ಇದು ನಡೆದದ್ದು ತಮಿಳುನಾಡಿನ ತೂತುಕುಡಿ ಜಿಲ್ಲೆಯ ಸಂತನ್ಕುಲಂ ನ ಒಂದು ಪೋಲಿಸ್ ಠಾಣೆಯಲ್ಲಿ. ಅಷ್ಟೇ ಆಘಾತಕಾರಿಯಾಗಿರುವಂತದ್ದು ಪೋಲಿಸ್ ಅಧಿಕಾರಿಗಳಿಂದ ಇದನ್ನು ಮುಚ್ಚಿ ಹಾಕುವ ಪ್ರಯತ್ನ ಮತ್ತು ಈ ಅಪರಾಧವನ್ನು ಹಗುರವಾಗಿ ಕಾಣಲು ಎಐಎಡಿಎಂಕೆ ಸರಕಾರದ ಪ್ರಯತ್ನ. ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳ ಮೇಲೆ ಮೇಲ್ನೋಟಕ್ಕೇ ಕೊಲೆ ಆರೋಪವನ್ನು ಸ್ಥಾಪಿಸಲು ಮತ್ತು ಸಿಬಿ–ಸಿಐಡಿಯಿಂದ ತನಿಖೆಯ ಆದೇಶಕ್ಕೆ ಮದ್ರಾಸ್ ಹೈಕೋರ್ಟಿನ ಮಧುರೈ ಪೀಠವೇ ಮಧ್ಯಪ್ರವೇಶಿಸಬೇಕಾಗಿ ಬಂತು.

ಸಂತನ್ಕುಲಂ ಅತ್ಯಾಚಾರದ ಮೇಲೆ ಗಮನ ಕೇಂದ್ರೀಕರಿಸಿದಾಗ ಅದೇ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಚಿತ್ರಹಿಂಸೆಯ ಇತರ ಪ್ರಕರಣಗಳು ಮತ್ತು ಇನ್ನೊಂದು ಕಸ್ಟಡಿ ಸಾವು ಬೆಳಕಿಗೆ ಬಂದಿವೆ. ಲಾಕ್‌ಡೌನ್ ಹಾಕಿದ ನಂತರ ಪೋಲೀಸರ ದರ್ಪದ ವರ್ತನೆ ಭುಗಿಲೆದ್ದಿತು ಎಂಬುದನ್ನು ಸ್ಥಳೀಯ ಜನಗಳ ವರದಿಗಳು ಸೂಚಿಸುತ್ತವೆ. ನಿಜ ಹೇಳಬೇಕೆಂದರೆ ರಾಜ್ಯಾದ್ಯಂತ ಲಾಕ್‌ಡೌನ್ ಪರಿಸ್ಥಿತಿಗಳನ್ನು ಹೇರುವಲ್ಲಿ ಪೋಲೀಸರ ಅತಿರೇಕಗಳ ಬಗ್ಗೆ ದೂರುಗಳು ವರದಿಯಾಗಿವೆ.

ಇದು ತಮಿಳುನಾಡಿಗಷ್ಟೇ ಸೀಮಿತವಾಗಿಲ್ಲ. ಇಡೀ ದೇಶದಲ್ಲೇ ಪೋಲಿಸರಿಗೆ ಮತ್ತು ಭದ್ರತಾ ಏಜೆಂಸಿಗಳಿಗೆ ಇಂತಹ ಒಂದು ಶಿಕ್ಷೆಯ ಭಯವಿಲ್ಲದ ದರ್ಪ ಪ್ರದರ್ಶನದ ಪರಿಸ್ಥಿತಿ ಮಹಾಮಾರಿ ಮತ್ತು ಲಾಕ್‌ಡೌನ್ ಸಂದರ್ಭದಲ್ಲಿ ಉಂಟಾಗಿದೆ. ಪ್ರಭುತ್ವ ಇದಕ್ಕೆ ಪರವಾನಿಗೆ ನೀಡಿದೆ. ಉತ್ತರಪ್ರದೇಶದಲ್ಲಿ ನಡೆದು ಸಾಗಿದ್ದ ವಲಸೆ ಕಾರ್ಮಿಕರನ್ನು ಪೋಲೀಸರು ಥಳಿಸಿದ್ದನ್ನು ನೋಡಿದ್ದೇವೆ. ಲಾಕ್‌ಡೌನ್ ಮೊದಲು ಉತ್ತರಪ್ರದೇಶದ ಪೋಲೀಸರು ಮುಖ್ಯಮಂತ್ರಿ ಆದಿತ್ಯನಾಥರ ನಿರ್ದೇಶನದಲ್ಲೇ ಸಿಎಎ–ವಿರೋಧಿ ಪ್ರತಿಭಟನಾಕಾರರನ್ನು ಸಿಕ್ಕಾಪಟ್ಟೆ ಥಳಿಸಿದ್ದರು, ಶಾಂತಿಯುತ ಪ್ರತಿಭಟನಾಕಾರರನ್ನು ಮನಬಂದಂತೆ ಬಂಧಿಸಿದ್ದರು ಮತ್ತು ಜಿಲ್ಲಾ ಆಡಳಿತದೊಂದಿಗೆ ಕೈಮಿಲಾಯಿಸಿ ಅಲ್ಪಸಂಖ್ಯಾತ ಸಮುದಾಯದ ಮೇಲೆ ಸಾಮೂಹಿಕ ದಂಡಗಳನ್ನು ಹೇರಲಾಗಿತ್ತು. ಅಲಹಾಬಾದ್ ಹೈಕೋರ್ಟಿನಿಂದಾಗಿ ಲಾಕ್‌ಡೌನ್ ವೇಳೆಯಲ್ಲಿ ಶಿಕ್ಷಾ ಕ್ರಮಗಳಿಗೆ ಸ್ವಲ್ಪಕಾಲದ ವಿರಾಮದ ನಂತರ ಮುಸ್ಲಿಂ ವ್ಯಾಪಾರ–ವ್ಯವಹಾರಗಳ ಮೇಲೆ ದಂಡಗಳು, ಸೀಲು ಹಾಕುವ ಕೆಲಸಗಳು ಮತ್ತೆ ಆರಂಭವಾಗಿವೆ.

ಕಸ್ಟಡಿಯಲ್ಲಿ ಸಾವು ಹಲವು ರಾಜ್ಯಗಳಲ್ಲಿ ಒಂದು ಸಾಮಾನ್ಯ ಘಟನೆಯಾಗುತ್ತಿದೆ. ಕಸ್ಟಡಿಯಲ್ಲಿ ಪೋಲೀಸ್ ಅತಿರೇಕಗಳನ್ನು ತಡೆಯುವ ನಿರ್ದೇಶನಗಳು ಮತ್ತು ಕ್ರಮಗಳನ್ನು ರಾಜ್ಯ ಸರಕಾರಗಳು ಒಂದೋ ಅನುಷ್ಠಾನಗೊಳಿಸಿಲ್ಲ, ಇಲ್ಲವೇ ಬುಡಮೇಲು ಮಾಡಿವೆ. ತಮಿಳುನಾಡಿನ ಪ್ರಕರಣದಲ್ಲಿ ಒಂದು 'ರಾಜ್ಯ ಪೋಲೀಸ್ ದೂರುಗಳ ಆಯೋಗ'ವನ್ನು ರಚಿಸುವ ಸುಪ್ರಿಂ ಕೋರ್ಟ್ ನಿರ್ದೇಶನವನ್ನು ಅದರ ಅಧ್ಯಕ್ಷರಾಗಿ ಒಬ್ಬ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರನ್ನು ನೇಮಿಸದೆ ಒಬ್ಬ ಅಧಿಕಾರಶಾಹಿಯನ್ನು ನೇಮಿಸುವ ಮೂಲಕ ಶಿಥಿಲಗೊಳಿಸಲಾಗಿದೆ.


ಪೋಲೀಸ್ ದರ್ಪವನ್ನು ಮತ್ತು ಕಾನೂನು ಪಾಲಕರಿಂದಲೇ ಉಲ್ಲಂಘನೆಗಳನ್ನು ತಡೆಯಲು ಪರಿಣಾಮಕಾರೀ ಕ್ರಮಗಳನ್ನು ಕೈಗೊಳ್ಳುವುದು ರಾಜಕೀಯ ಅಧಿಕಾರದಿಂದಷ್ಟೇ ಸಾಧ್ಯ. ಆದರೇನು ಮಾಡುವುದು, ಕಳೆದ ಆರು ವರ್ಷಗಳಲ್ಲಿ, ಮೋದಿ ಸರಕಾರದ ವ್ಯವಸ್ಥೆಯಲ್ಲಿ ಪೋಲೀಸರನ್ನು ಮತ್ತು ಭದ್ರತಾ ಏಜೆಂಸಿಗಳನ್ನು ಮನಬಂದಂತೆ, ಯಾವುದೇ ಲಂಗುಲಗಾಮಿಲ್ಲದೆ ವರ್ತಿಸಲು ಭಾರೀ ಸಡಿಲ ಬಿಡಲಾಗಿದೆ, ಮಹಾಮಾರಿ ಸೃಷ್ಟಿಸಿದ ಅಸಾಧಾರಣ ಪರಿಸ್ಥಿತಿ ಈ ಪ್ರವೃತ್ತಿಯನ್ನು ಮತ್ತಷ್ಟು ಗಟ್ಟಿಗೊಳಿಸಿದೆಯಷ್ಟೇ. ಈಶಾನ್ಯ ದಿಲ್ಲಿಯಲ್ಲಿ ಈ ವರ್ಷದ ಆರಂಭದಲ್ಲಿ ನಡೆದ ಕೋಮುವಾದಿ ಹಿಂಸಾಚಾರಕ್ಕೆ ಸಂಬಂಧಪಟ್ಟಂತಹ ಪ್ರಕರಣಗಳಲ್ಲಿ ಕೇಂದ್ರ ಗೃಹ ಮಂತ್ರಾಲಯದ ಕೃಪಾಕಟಾಕ್ಷದ ಅಡಿಯಲ್ಲಿ ದಿಲ್ಲಿ ಪೋಲಿಸ್ ವರ್ತನೆ ಒಂದು ಸ್ಪಷ್ಟ ಉದಾಹರಣೆ. ಲಾಕ್‌ಡೌನ್ ನಂತರ ದೊಡ್ಡ ಪ್ರಮಾಣದಲ್ಲಿ ಮನಬಂದಂತೆ ಬಂಧನಗಳನ್ನು ನಡೆಸಲಾಗಿದೆ, ಪೊಲೀಸರು ಹಾಕಿದ ಎಫ್‌ಐಆರ್‌ಗಳನ್ನು ಸಾರ್ವಜನಕಗೊಳಿಸಿಲ್ಲ, ಬಂಧನಗಳನ್ನು ನೋಟಿಫೈ ಮಾಡಿಲ್ಲ. ದೊಂಬಿ ಹಿಂಸಾಚಾರದಲ್ಲಿ ಕೈಜೋಡಿಸಿದ ಪೋಲೀಸರ ಪಾತ್ರವನ್ನು ಮುಚ್ಚಿ ಹಾಕುವ ನಗ್ನ ಪ್ರಯತ್ನಗಳು ನಡೆದಿವೆ. ಎದ್ದು ಕಾಣುವ ಒಂದು ಪ್ರಕರಣವೆಂದರೆ 23 ವರ್ಷದ ಫೈಝಾನ್‌ನದ್ದು. ಫೈಝಾನ್ ಮತ್ತು ಇತರ ನಾಲ್ವರನ್ನು ಪೋಲೀಸರು ಸಾರ್ವಜನಿಕವಾಗಿಯೇ ಸಿಕ್ಕಾಪಟ್ಟೆ ಥಳಿಸಿದರು, ಇದು ವೀಡಿಯೋದಲ್ಲಿ ದಾಖಲಾಗಿದೆ. ಫೈಝಾನ್ ತೀವ್ರ ಗಾಯಗಳಿಂದಾಗಿ ನಂತರ ಸಾವಪ್ಪಿದ. ಆದರೆ ಎಫ್‌ಐಆರ್ ಸುಳ್ಳು ಮಾಹಿತಿ ಕೊಡುತ್ತದೆ, ಅವನನ್ನು ಪೋಲಿಸ್ ಠಾಣೆಗೆ ಒಯ್ದ ಸಂಗತಿಯೂ ಅದರಲ್ಲಿಲ್ಲ. ಅಲ್ಲದೆ ಅಲ್ಲಿ ಮತ್ತಷ್ಟು ಚಿತ್ರಹಿಂಸೆಗೆ ಗುರಿಪಡಿಸಲಾಯ್ತು.

ಕಳೆದ ಮೂರು ತಿಂಗಳಲ್ಲಿ ಯುಎಪಿಎ (ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ) ಮತ್ತು ಭಾರತೀಯ ದಂಡ ಸಂಹಿತೆಯ ರಾಜದ್ರೋಹದ ಪರಿಚ್ಛೇದದ ಅಡಿಯಲ್ಲಿ ಹಲವಾರು ಪ್ರಕರಣಗಳು ದಾಖಲಾಗಿವೆ. ಕೇಂದ್ರ ಮತ್ತು ರಾಜ್ಯಗಳಲ್ಲಿನ ಬಿಜೆಪಿ ಸರಕಾರಗಳು ಇವುಗಳಲ್ಲಿನ ಕರಾಳ ಅಂಶಗಳನ್ನು ಬಳಸಿ ಜನಗಳನ್ನು ಆಧಾರಹೀನ ಆರೋಪಗಳ ಮೇಲೆ ಬಂಧಿಸಿ ಪೋಲಿಸ್ ಮತ್ತು ನ್ಯಾಯಾಂಗ ಕಸ್ಟಡಿಗಳಿಗೆ ತಳ್ಳುವಂತೆ ನಿರ್ದೇಶನಗಳನ್ನು ಕೊಡುತ್ತಿವೆ. ರಾಷ್ಟ್ರೀಯ ತನಿಖಾ ಏಜೆಂಸಿ (ಎನ್.ಐ.ಎ.), ಸಿಬಿಐ, ಜಾರಿ ನಿರ್ದೇಶನಾಲಯ(ಇಡಿ) ಮುಂತಾದ ಕೇಂದ್ರೀಯ ಏಜೆಂಸಿಗಳು ತಾವೇ ಕಾನೂನು ಎಂಬಂತೆ ವರ್ತಿಸುತ್ತಿವೆ. ರಾಜಕೀಯ ಅಧಿಕಾರದಿಂದ ಬರುವ ನಿರ್ದೇಶನಗಳೇ ದರ್ಪದಿಂದ ವರ್ತಿಸಲು ಪೋಲೀಸ್ ಮತ್ತು ಭದ್ರತಾ ಏಜೆಂಸಿಗಳಿಗೆ ಪರವಾನಗೆ ಕೊಟ್ಟಿವೆ.

ಪೋಲಿಸರ ತಪ್ಪು ವರ್ತನೆಗಳಿಗೆ ಕೆಳಗಣ ನ್ಯಾಯಾಂಗ ಒಂದು ತಡೆಯಾಗಬೇಕು. ಆದರೆ ಈಗೀಗ ಮ್ಯಾಜಿಸ್ಟ್ರೇಟ್‌ಗಳು ಮತ್ತು ಕೆಳಗಣ ಕೋರ್ಟ್‌ಗಳ ನ್ಯಾಯಾಧೀಶರುಗಳು ತಮ್ಮ ಕರ್ತವ್ಯಗಳನ್ನು ಪಾಲಿಸುತ್ತಿಲ್ಲ. ಅವರು ರಿಮಾಂಡಿಗೆ ಕಳಿಸಬೇಕೆಂಬ ಪೋಲೀಸರ ಎಲ್ಲ ಕೋರಿಕೆಗಳಿಗೂ ರಬ್ಬರ್ ಸ್ಟಾಂಪ್ ಒತ್ತುತ್ತಾರೆ, ಹಾಕಿದ ಎಫ್‌ಐಆರ್‌ಗಳಲ್ಲಿನ ನಗ್ನ ಅಸಾಂಗತ್ಯಗಳನ್ನು ಉಪೇಕ್ಷಿಸಿ ಬಿಡುತ್ತಾರೆ. ಸಂತನ್ಕುಲಂ ಪ್ರಕರಣದಲ್ಲಿ ಮ್ಯಾಜಿಸ್ಟ್ರೇಟ್ ವರ್ತಿಸಿದ ರೀತಿ ಒಟ್ಟಾರೆಯಾಗಿ ಈ ಕಾಯಿಲೆಯನ್ನು ಬಿಂಬಿಸುತ್ತದೆ. ಈ ದಿನಗಳಲ್ಲಿ, ಮ್ಯಾಜಿಸ್ಟ್ರೇಟರುಗಳು ಯೋಚಿಸಲೂ ಹೋಗದೆ, ಯಾಂತ್ರಿಕವಾಗಿ ಆರೋಪಿಗಳನ್ನು ಕಸ್ಟಡಿಗೆ ಕಳಿಸುತ್ತಾರೆ. ಉದಾಹರಣೆಗೆ, ರಾಜದ್ರೋಹದ ಕೇಸುಗಳಲ್ಲಿ ಕೇದಾರನಾಥ್ ಸಿಂಗ್ ಪ್ರಕರಣದಲ್ಲಿ ಸುಪ್ರಿಂ ಕೋರ್ಟ್ ನೀಡಿದ ಮಾರ್ಗಸೂತ್ರಗಳ ಪ್ರಕಾರ ರಾಜದ್ರೋಹದ ಆರೋಪ ನಿಲ್ಲುತ್ತದೆಯೇ ಇಲ್ಲವೇ ಎಂದು ಯೋಚಿಸಲೂ ಹೋಗುವುದಿಲ್ಲ. ಉನ್ನತ ನ್ಯಾಯಾಂಗದ ನಿಲುವಿನಿಂದಾಗಿ ಪೋಲೀಸ್ ಮತ್ತು ಭದ್ರತಾ ಏಜೆಂಸಿಗಳ ಕಾನೂನುಹೀನ ಕ್ರಮಗಳು ಇನ್ನಷ್ಟು ನ್ಯಾಯಬದ್ಧಗೊಳ್ಳುತ್ತವೆ. ಭೀಮ ಕೊರೆಗಾಂವ್ ಆರೋಪಿಗಳದ್ದೇ ಆಗಲೀ, ಅಥವ ಯುಎಪಿಎ ಅಥವ ರಾಜದ್ರೋಹದ ಅಡಿಯಲ್ಲಿ ಆರೋಪ ಎದುರಿಸುತ್ತಿರುವ ವ್ಯಕ್ತಿಗಳದ್ದೇ ಆಗಲೀ, ಮೂಲಭೂತ ನಾಗರಿಕ ಹಕ್ಕುಗಳನ್ನು ರಕ್ಷಿಸುವುದಕ್ಕಾಗಿ ಮಧ್ಯಪ್ರವೇಶಿಸಲು ಅದು ನಿರಾಕರಿಸಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ನಾಗರಿಕ ಸ್ವಾತಂತ್ರ್ಯಗಳ ವಂಚನೆಯ ಸಂಗತಿಗಳು ಕಣ್ಣಿಗೆ ರಾಚುವಂತಿವೆ.

ಹೀಗೆ ಮಹಾಮಾರಿ–ಲಾಕ್‌ಡೌನಿನ ಮೂರು ತಿಂಗಳ ಸಣ್ಣ ಅವಧಿಯಲ್ಲಿ ನಡೆದಿರುವುದು ಭಾರತದಲ್ಲಿ ಸರ್ವಾಧಿಕಾರಶಾಹಿಯ ಸಂರಚನೆಯ ಕ್ರೋಡೀಕರಣ. ಪೋಲಿಸ್ ದರ್ಪ ಪ್ರದರ್ಶನ ಈ ದಮನಕಾರೀ ಆಳ್ವಿಕೆಯ ಒಂದು ಭಾಗವಷ್ಟೇ.

ಕಳೆದ ಆರು ವರ್ಷಗಳಲ್ಲಿ, ಮೋದಿ ಸರಕಾರದ ವ್ಯವಸ್ಥೆಯಲ್ಲಿ ಪೋಲೀಸರನ್ನು ಮತ್ತು ಭದ್ರತಾ ಏಜೆಂಸಿಗಳನ್ನು ಮನಬಂದಂತೆ, ಯಾವುದೇ ಲಂಗುಲಗಾಮಿಲ್ಲದೆ ವರ್ತಿಸಲು ಭಾರೀ ಸಡಿಲ ಬಿಡಲಾಗಿದೆ, ಮಹಾಮಾರಿ ಸೃಷ್ಟಿಸಿದ ಅಸಾಧಾರಣ ಪರಿಸ್ಥಿತಿ ಈ ಪ್ರವೃತ್ತಿಯನ್ನು ಮತ್ತಷ್ಟು ಗಟ್ಟಿಗೊಳಿಸಿದೆಯಷ್ಟೇ.









ದೆಹಲಿ



ಜಾರ್ಖಂಡ್

ರಾಜ್ಯದಾದ್ಯಂತ ಜುಲೈ 3ರ ಅಖಿಲ ಭಾರತ ಪ್ರತಿಭಟನೆ

ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ರಾಷ್ಟ್ರವ್ಯಾಪಿ ಕರೆಯ ಮೇರೆಗೆ ಜುಲೈ 3 ರಂದು ಪ್ರತಿಭಟನೆಯಲ್ಲಿ ದೇಶ ಮತ್ತು ಕರ್ನಾಟಕ ರಾಜ್ಯದಾದ್ಯಂತ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ. ಇದರ ಜತೆಗೆ ಜುಲೈ 2 ರಿಂದ ಆರಂಭವಾದ ಕಲ್ಲಿದ್ದಲು ಕಾರ್ಮಿಕರ 3 ದಿನಗಳ ಮುಷ್ಕರವೂ ನಡೆಯುತ್ತಿದೆ. ಇದರಲ್ಲಿ 5.3 ಲಕ್ಷ ಕಲ್ಲಿದ್ದಲು ಕಾರ್ಮಿಕರನ್ನು ಪೂರ್ಣ ಮುಷ್ಕರದಲ್ಲಿ ಭಾಗವಹಿಸಿದ್ದಕ್ಕೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಅಭಿನಂದಿಸಿವೆ. ಕರ್ನಾಟಕದಲ್ಲಿ ಜುಲೈ 3 ರ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರ ಕುರಿತು ಜುಲೈ 3 ರ ರಾತ್ರಿ ದೊರೆತ ಮಾಹಿತಿ ಆಧರಿಸಿ ಕಿರು ವರದಿ ಇಲ್ಲಿದೆ. ಜೊತೆಗೆ ಕರ್ನಾಟಕ ಮತ್ತು ಇತರ ರಾಜ್ಯಗಳಲ್ಲಿ ಪ್ರತಿಭಟನೆಯ ಕೆಲವು ಲಭ್ಯವಿರುವ ಚಿತ್ರಗಳನ್ನು ಕೊಡಲಾಗಿದೆ.



ತ್ರಿಪುರ



ಬೆಂಗಳೂರು

ಜುಲೈ 3 ರ ಸಂಜೆಯವರೆಗೆ ಬಂದ ವರದಿಗಳ ಪ್ರಕಾರ ಕರ್ನಾಟಕ ರಾಜ್ಯದ ತಾಲೂಕು/ಜಿಲ್ಲಾ ಕೇಂದ್ರಗಳು, ಗ್ರಾಮ ಪಂಚಾಯತ್ ಗಳು, ಸ್ಕೀಂ (ಅಂಗನವಾಡಿ, ಬಿಸಿಯೂಟ, ಆಶಾ) ಕಾರ್ಮಿಕ ಕೇಂದ್ರಗಳು, ವಿದ್ಯುತ್ ಕೇಂದ್ರಗಳು ಮತ್ತು ಪ್ರಮುಖ ಕೈಗಾರಿಕಾ ಘಟಕಗಳು ಸೇರಿದಂತೆ ಸುಮಾರು 5 ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಒಟ್ಟು ರಾಜ್ಯದಾದ್ಯಂತ 20 ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿದ್ದು 1 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ್ದಾರೆಂದು ವರದಿಯಾಗಿದೆ. ಈ ಪ್ರತಿಭಟನೆಗಳಲ್ಲಿ ಸ್ಕೀಂ, ಗ್ರಾಮ ಪಂಚಾಯತ್, ವಿದ್ಯುತ್, ಹಮಾಲಿ, ಕಟ್ಟಡ ಮತ್ತು ಸಂಘಟಿತ ಕೈಗಾರಿಕೆಗಳ ಕಾರ್ಮಿಕರು ಭಾಗವಹಿಸಿದ್ದಾರೆಂದು ವರದಿಯಾಗಿದೆ. ಕೆಲಸದ ಅವಧಿ ಸೇರಿದಂತೆ ಹಲವು ಕಾರ್ಮಿಕ-ವಿರೋಧಿ ಕಾನೂನುಗಳನ್ನು ಬದಲಾಯಿಸುವುದರ ವಿರುದ್ಧ, ಪ್ರಮುಖ ಸಾರ್ವಜನಿಕ ಉದ್ಯಮ ಮತ್ತು ರಾಷ್ಟ್ರೀಯ ಆಸ್ತಿಗಳ ಖಾಸಗೀಕರಣವನ್ನು ನಿಲ್ಲಿಸಲು ಒತ್ತಾಯಿಸಿ, ಕಾರ್ಮಿಕರಿಗೆ ವೇತನ ಕೊಡದಿರುವುದು ಮತ್ತು ವಜಾ ಮಾಡುವುದನು ವಿರೋಧಿಸಿ, ಮುಂಚೂಣಿ ಕೊರೊನಾ ತಡೆ ಕಾರ್ಮಿಕರಿಗೆ ರಕ್ಷಣೆ ಒದಗಿಸಲು ಒತ್ತಾಯಿಸಿ – ಈ ದೇಶವ್ಯಾಪಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು.

ಬೆಂಗಳೂರಿನಲ್ಲಿ ಹಲವು ಕೈಗಾರಿಕಾ ಘಟಕಗಳಲ್ಲದೆ (ಹೂಡಿಯ ಶುಂಕಾ ಮೆಟಲ್, ಐ.ಎಂ.ಪಿ.ಎಲ್, ಯುಕೇನ್ ಇತ್ಯಾದಿ) ಕಾರ್ಮಿಕ ಭವನದ ಎದುರು, ಆನೇಕಲ್, ಚಂದಾಪುರ, ಬೊಮ್ಮಸಂದ್ರ ಪ್ರದೇಶಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ ಧಾರವಾಡ–ಹುಬ್ಬಳ್ಳಿ ನಗರ, ನರಗುಂದ, ನವಲಗುಂದ, ಕುಂದಗೋಳ, ಕಲ್ಘಟ್ಟಿ, ಹಾವೇರಿ ಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಕೋಲಾರ ಜಿಲ್ಲೆಯಲ್ಲಿ ಶ್ರೀನಿವಾಸಪುರ, ಬಂಗಾರಪೇಟೆ, ಮಾಲೂರು ತಾಲೂಕಿನ ಹಲವು ಕಡೆ ಕಾರ್ಮಿಕರು ಭಾಗವಹಿಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿ ಜಿಲ್ಲಾ ಕೇಂದ್ರ ಸೇರಿದಂತೆ ಸಿರಗುಪ್ಪ, ಹಗರಿಬೊಮ್ಮನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಗಿ ಗಳಲ್ಲಿ ಪ್ರತಿಭಟನೆಗಳಲ್ಲಿ ಕಾರ್ಮಿಕರು ಭಾಗವಹಿಸಿದ್ದಾರೆ. ಉತ್ತರ ಕನ್ನಡದ 9 ತಾಲೂಕುಗಳಲ್ಲಿ, ಮೈಸೂರು ಜಿಲ್ಲೆಯಲ್ಲಿ ಟಿ ನರಸೀಪುರ ಅಲ್ಲದೆ ವಿಕ್ರಾಂತ ಟೈರ್ಸ್ ಮುಂತಾದ ಕೈಗಾರಿಕಾ ಘಟಕಗಳಲ್ಲಿ, ಕೊಪ್ಪಳ ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರ ಮತ್ತು ಗಂಗಾವತಿ ಯಲ್ಲಿ ಹಲವು ಕಡೆ ಪ್ರತಿಭಟನೆಗಳು ನಡೆದಿವೆ. ಇವಲ್ಲದೆ ದಕ್ಷಿಣ ಕನ್ನಡ, ಗುಲ್ಬರ್ಗ, ತುಮಕೂರು, ಉಡುಪಿ, ದಾವಣಗೆರೆ, ಚಿಕ್ಕಬಳ್ಳಾಪುರ, ರಾಯಚೂರು, ಯಾದಗಿರಿ, ಬಿಜಾಪುರ, ಬೀದರ, ಬೆಳಗಾಂ ಜಿಲ್ಲೆಯ ಹಲವು ಕಡೆ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ.

ಕರ್ನಾಟಕ ಮತ್ತು ಇತರ ರಾಜ್ಯಗಳಲ್ಲಿ ನಡೆದ ಪ್ರತಿಭಟನೆಗಳ ಒಂದು ಝುಲಕ್ ಇಲ್ಲಿದೆ.


ವಿಜಯವಾಡ



ಬಿಹಾರ



ಮಂಡ್ಯ


ಹಗರಿಬೊಮ್ಮನಹಳ್ಳಿ

ಪುಟ 16 ಕ್ಕೆ

ಸರ್ಕಾರಿ ಶಾಲೆಗಳಲ್ಲಿ ಆನ್-ಲೈನ್ ಕೊಡಬಹುದೇ ಎಂದು ಯೋಚಿಸುವುದು ಕಷ್ಟ ಎನ್ನುವಂತಹ ಪರಿಸ್ಥಿತಿಯಲ್ಲಿ ಕೇರಳವು ಸಾರ್ವಜನಿಕ ಶಿಕ್ಷಣವನ್ನು ಹೇಗೆ ಉಳಿಸುವುದು ಮತ್ತು ವರ್ಚುವಲ್ ಕಲಿಕೆಯನ್ನು ಹೇಗೆ ಪ್ರಜಾಪ್ರಭುತ್ವೀಕರಿಸುವುದು ಎಂಬುದರ ಕುರಿತು ನಮಗೆ ನಿರ್ಣಾಯಕ ಪಾಠಗಳನ್ನು ನೀಡುವಂತಹ "ಫಸ್ಟ್ ಬೆಲ್" ಎಂಬ ಐತಿಹಾಸಿಕ ಸಾಮೂಹಿಕ ಆಂದೋಲನಕ್ಕೆ ಈಗ ಸಾಕ್ಷಿಯಾಗಿದೆ. ದೀನದಲಿತರು ಮತ್ತು ಸಾಮಾಜಿಕವಾಗಿ ಹೊರಗುಳಿದವರು ಬೇರೆಯವರಂತೆಯೇ ಡಿಜಿಟಲ್ ಹಕ್ಕನ್ನು ಹೊಂದಿದ್ದಾರೆ, ಮತ್ತು ಡಿಜಿಟಲ್ ಪ್ರಜಾಪ್ರಭುತ್ವದ ಪರಿಕಲ್ಪನೆಯೊಳಗೆ ಜೀವನ ಮತ್ತು ಜೀವನೋಪಾಯಗಳನ್ನು ಮರು-ಸಾಕ್ಷಾತ್ಕಾರ ಮಾಡಬೇಕಾಗಿದೆ ಎಂಬ ಸಮಾಜವಾದಿ ತಿಳುವಳಿಕೆ, ರಾಜ್ಯದ ಈ ಹೊಸ ಮೈಲಿಗಲ್ಲುಗಳ ಆಕಾಂಕ್ಷೆಗೆ ಉತ್ತೇಜನೆ



ಕೇರಳದ 'ಫಸ್ಟ್ ಬೆಲ್'

ಡಿಜಿಟಲ್ ಶಿಕ್ಷಣವನ್ನು ಪ್ರಜಾಪ್ರಭುತ್ವೀಕರಿಸುವ ಸಾಮೂಹಿಕ ಚಳವಳಿ

ಬಾನುಗೊಂದಿ ಲಿಂಗರಾಜು

(ಮೂಲ : ಮುಕುಲಿಕಾ, ನ್ಯೂಸ್ ಕ್ಲಿಕ್)



'ಕೇರಳದಲ್ಲೊಂದು ವಿರುದ್ಧ ವಲಸೆ' ಎಂಬ ಸುದ್ದಿಯನ್ನು ನೀವು ಇತ್ತೀಚೆಗೆ ಓದಿದ್ದೀರಿ. ಸರ್ಕಾರವು ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಿ ಖಾಸಗಿ ಶಾಲೆಗಳಲ್ಲಿ ಓದಿಸುತ್ತಿದ್ದ ಪೋಷಕರು ಸರ್ಕಾರಿ ಶಾಲೆಗಳಿಗೆ ಕರೆತರುತ್ತಿದ್ದ ಕುರಿತ ಸುದ್ದಿಯಾಗಿತ್ತದು. ಈಗ ಕೇರಳ ಶಿಕ್ಷಣ ಕ್ಷೇತ್ರ 'ಫಸ್ಟ್ ಬೆಲ್' ಎಂಬ ಪ್ರಯೋಗದಿಂದಾಗಿ ಮತ್ತೆ ಸುದ್ದಿಯಲ್ಲಿದೆ.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಸಾಮಾಜಿಕ ಬಂಡವಾಳ ಹೂಡಿದ ಪರಿಣಾಮ ಕೇರಳ ಇಂದು ಸಾಕ್ಷರತೆಯಲ್ಲಿ ಮೊದಲ ಸ್ಥಾನದಲ್ಲಿ ನಂತಿದ್ದರೆ, ಕೋವಿಡ್-19ರ ನಿಭಾಯಿಸುವಿಕೆಯಲ್ಲಿ ಕೇರಳ ಜಗತ್ತಿಗೆ ಒಂದು ಮಾದರಿಯಾಗಿದೆ. ಕೊರೊನಾ ಸೋಂಕು ಹರಡುವಿಕೆ ತಡೆಯಲು ಕೆಲ ನಿರ್ಬಂಧಗಳು ಜಾರಿಯ ಹಿನ್ನೆಲೆಯಲ್ಲಿ ಇದುವರೆಗೂ ಶಾಲಾ ಕಾಲೇಜುಗಳು ಆರಂಭವಾಗಿಲ್ಲ. ಬಹುಶಃ ನವೆಂಬರಿನ ವರೆಗೂ ಶಾಲಾ-ಕಾಲೇಜುಗಳು ಆರಂಭವಾಗುವುದು ಕಷ್ಟ ಇಂತಹ ಪರಿಸ್ಥಿತಿ ನಿಭಾಯಿಸಲು ಈಗ ಆನ್-ಲೈನ್ ಶಿಕ್ಷಣ ನೀಡಬೇಕು ಎಂಬ ಚರ್ಚೆರೂಪದ ಒತ್ತಾಯ ಕೇಳಿಬರುತ್ತಿದೆ. ಇದು ಖಾಸಗಿ ವಲಯದ ಬೇಡಿಕೆ ಎಂಬುದನ್ನು ಗಮನಿಸಬೇಕು. ಸರ್ಕಾರಿ ಶಾಲೆಗಳಲ್ಲಿ ಆನ್-ಲೈನ್ ಕೊಡಬಹುದೇ ಎಂದು ಯೋಚಿಸುವುದು ಕಷ್ಟ ಎನ್ನುವಂತಹ ಪರಿಸ್ಥಿತಿಯಲ್ಲಿ ಕೇರಳವು ಸಾರ್ವಜನಿಕ ಶಿಕ್ಷಣವನ್ನು ಹೇಗೆ ಉಳಿಸುವುದು ಮತ್ತು ವರ್ಚುವಲ್ ಕಲಿಕೆಯನ್ನು ಹೇಗೆ ಪ್ರಜಾಪ್ರಭುತ್ವೀಕರಿಸುವುದು ಎಂಬುದರ ಕುರಿತು ನಮಗೆ ನಿರ್ಣಾಯಕ ಪಾಠಗಳನ್ನು ನೀಡುವಂತಹ ಐತಿಹಾಸಿಕ ಸಾಮೂಹಿಕ ಆಂದೋಲನಕ್ಕೆ ಈಗ ಸಾಕ್ಷಿಯಾಗಿದೆ.

ಜೂನ್ ಆರಂಭದಲ್ಲಿ ಕೇರಳದ ಮಲಪ್ಪುರಂನಲ್ಲಿ 14 ವರ್ಷದ ವಿದ್ಯಾರ್ಥಿನಿಯು ಆತ್ಮಹತ್ಯೆ ಮಾಡಿಕೊಂಡಳು. ಕೊರೊನಾ ಸೋಂಕು ಹರಡದಂತೆ ತಡೆಯಲು ದೇಶಾದ್ಯಂತ ಎರಡು ತಿಂಗಳಿನಿಂದ ಕೋವಿಡ್-19 ನಿರ್ಬಂಧಗಳನ್ನು ಅನುಸರಿಸುತ್ತಿದೆ. ಇದೇ ವೇಳೆ ಕೇರಳ ಶಿಕ್ಷಣ ಸಚಿವಾಲಯವು ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಆನ್-ಲೈನ್ ತರಗತಿಗಳನ್ನು ಪ್ರಾರಂಭಿಸಿದುದಲ್ಲದೆ ಇದರ ಪ್ರಾಯೋಗಿಕ ಸರಣಿಯನ್ನು ಜೂನ್ ತಿಂಗಳ ಮೊದಲನೆ ವಾರದಿಂದ ಆರಂಭಿಸಿತು. ಆದರೆ ಈ ಸೌಲಭ್ಯವನ್ನು ಬಳಸಿಕೊಳ್ಳಲು ಮನೆಯಲ್ಲಿ ಟೆಲಿವಿಷನ್ ಅಥವಾ ಸ್ಮಾರ್ಟ್‌ಫೋನ್ ಬೇಕಾಗಿತ್ತು. ಆದರೆ ಮಲಪ್ಪುರಂನ ಪರಿಶಿಷ್ಟ ಜಾತಿಗೆ ಸೇರಿದ ಬಡಕುಟುಂಬದಲ್ಲಿ ಈ ಎರಡೂ ಸೌಲಭ್ಯ ಇರಲಿಲ್ಲ. ಇದ್ದ ಟಿವಿ ರಿಪೇರಿಗೆ ಬಂದು ಕುಳಿತಿತ್ತು. ದಿನದ ದುಡಿಮೆ ಸಿಕ್ಕಿದರಷ್ಟೇ ಊಟ ಎನ್ನುವಂತಿದ್ದ ಬಡ ಕುಟುಂಬಕ್ಕೆ ಸ್ಮಾರ್ಟ್‌ಫೋನ್ ಖರೀದಿಸುವ ಶಕ್ತಿಯೂ ಇರಲಿಲ್ಲ. ಹಾಗಾಗಿ ಆನ್-ಲೈನ್ ತರಗತಿಗಳ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಲಾಗದ ನೋವಿನಲ್ಲಿ 14 ವಯಸ್ಸಿನ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಳು. ಇದು ನಿಜವಾಗಿಯೂ ಕೇರಳದಲ್ಲಿ ಸಂಚಲನವನ್ನೇ ಹುಟ್ಟುಹಾಕಿತು.

ಈ ಸಂಬಂಧ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಈಗ ಪ್ರಾಯೋಗಿಕ ತರಗತಿಗಳು ಮಾತ್ರವೇ ನಡೆಯುತ್ತಿದ್ದು, ವಾರದ ನಂತರ ಸಂಪೂರ್ಣವಾಗಿ ಮರುಪ್ರಸಾರ ಮಾಡಲಾಗುವುದು. ಎಲ್ಲಾ ಕೇಬಲ್ ಟಿವಿ ನೆಟ್ವರ್ಕ್‌ಗಳಲ್ಲಿ ಲಭ್ಯವಿರುವ ಸರ್ಕಾರಿ ಚಾನೆಲ್ ಮೂಲಕ ತರಗತಿಗಳನ್ನು ದೂರದರ್ಶನದಲ್ಲಿ ಪ್ರಸಾರ ಮಾಡುವುದಾಗಿ ಮತ್ತೊಮ್ಮೆ ಹೇಳಿದರು. ಇದು ದೇಶದ ಇತರ ಕಡೆ ಇಂಟರ್ನೆಟ್ ಆಧಾರಿತವಾಗಿ ಆನ್-ಲೈನ್ ಪಾಠಗಳು ನಡೆಯುತ್ತಿದ್ದರೆ, ಕೇರಳದಲ್ಲಿ ಭಿನ್ನವಾಗಿ, ಕೇರಳವು ಎಲ್ಲಾ ಕೇಬಲ್ ಟಿವಿ ನೆಟ್ವರ್ಕ್‌ಗಳಲ್ಲಿ ಲಭ್ಯವಿರುವ ಸರ್ಕಾರಿ ಚಾನೆಲ್ ಮೂಲಕ ತರಗತಿಗಳನ್ನು ದೂರದರ್ಶನದಲ್ಲಿ ಪ್ರಸಾರ ಮಾಡುತ್ತಿತ್ತು. ಇದು ಸಾರ್ವಜನಿಕ ಶಿಕ್ಷಣವನ್ನು ಹೇಗೆ ಉಳಿಸುವುದು ಮತ್ತು ವರ್ಚುವಲ್ ಕಲಿಕೆಯನ್ನು ಪ್ರಜಾಪ್ರಭುತ್ವೀಕರಿಸುವಲ್ಲಿ ಒಂದು ಹೆಜ್ಜೆ ಮುಂದೆ ಹೋಗಿದೆ.

ಪೂರ್ವ ಸಮೀಕ್ಷೆ-ತರಬೇತಿ

"ಫಸ್ಟ್ ಬೆಲ್" ಎಂದು ಹೆಸರಿಸಲಾಗಿರುವ 2020-21ರ ಶೈಕ್ಷಣಿಕ ವರ್ಷದ ಕೇರಳದ ವರ್ಚುವಲ್ ಶಾಲಾ ಶಿಕ್ಷಣ ಕಾರ್ಯಕ್ರಮವನ್ನು ಕೇರಳ ಮೂಲಸೌಕರ್ಯ ಮತ್ತು ಶಿಕ್ಷಣಕ್ಕಾಗಿ ತಂತ್ರಜ್ಞಾನ (ಕೈಟ್), ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎಸ್.ಆರ್.ಇ.ಟಿ), ಸಮಗ್ರ ಶಿಕ್ಷ ಕೇರಳ (ಎಸ್.ಎಸ್.ಕೆ) ಜಂಟಿಯಾಗಿ ನಿರ್ವಹಿಸುತ್ತದೆ. ಮತ್ತು ರಾಜ್ಯ ಶಿಕ್ಷಣ ತಂತ್ರಜ್ಞಾನ ಸಂಸ್ಥೆ (ಎಸ್.ಐ.ಇ.ಟಿ) - ರಾಜ್ಯ ಶಿಕ್ಷಣ ಸಚಿವಾಲಯದ ಒಡೆತನದ ಏಜೆನ್ಸಿಗಳು. ದಿನನತ್ಯದ ವೇಳಾಪಟ್ಟಿಯ ಪ್ರಕಾರ ರಾಜ್ಯದಾದ್ಯಂತ ಪ್ರಚಾರಗೊಂಡಿರುವ ತರಗತಿಗಳನ್ನು ಕೈಟ್ ನಡೆಸುವ ವಿಕ್ಟರ್ಸ್ ಚಾನೆಲಿನಲ್ಲಿ ಪ್ರಸಾರ ಮಾಡಲಾಗುತ್ತದೆ. ಅವುಗಳನ್ನು ಯೂಟ್ಯೂಬ್ ಮತ್ತು ತನ್ನದೇ ವೆಬ್-ಸೈಟಿನಲ್ಲಿ ಅಪ್ಲೋಡ್ ಮಾಡಲಾಗುತ್ತದೆ. 1 ರಿಂದ 10 ತರಗತಿಗಳಿಗೆ ವಾರದ ದಿನಗಳಲ್ಲಿ ಅಧಿವೇಶನಗಳನ್ನು ನಡೆಸಲಾಗುತ್ತದೆ. ಡೌನ್ಲೋಡ್ ಮಾಡಬಹುದಾದ ಸ್ವರೂಪದಲ್ಲಿ, ತರಗತಿಗಳನ್ನು ನಂತರವೂ ಸಂಗ್ರಹಿಸಬಹುದು ಮತ್ತು ವೀಕ್ಷಿಸಬಹುದು. ತರಗತಿಗಳು ಅಕ್ಷಯ ಕೇಂದ್ರಗಳಲ್ಲಿಯೂ ಲಭ್ಯವಿವೆ. ಅವುಗಳು ರಾಜ್ಯ ಸರ್ಕಾರ ನಡೆಸುವ ಸಂಪನ್ಮೂಲ ಕೇಂದ್ರಗಳಾಗಿವೆ, ಅವುಗಳು ವ್ಯಾಪಕವಾದ ಚಟುವಟಿಕೆಗಳನ್ನು ನಿರ್ವಹಿಸುತ್ತವೆ ಮತ್ತು ವಿವಿಧ ಪ್ರದೇಶಗಳಲ್ಲಿ ರಾಜ್ಯ ಮತ್ತು ಸಾರ್ವಜನಕರ ನಡುವೆ ಕೆಲಸ ಮಾಡುತ್ತವೆ.

ಪ್ರಾಯೋಗಿಕ ಪಾಠಗಳನ್ನು ನಡೆಸುವ ಮೊದಲು, ಎಸ.ಎಸ್.ಕೆ ಇಂಟರ್ನೆಟ್ ಸಂಪರ್ಕ ಅಥವಾ ಟಿವಿಯನ್ನು ಹೊಂದಿರದ ಸರ್ಕಾರಿ/ಅನುದಾನತ ಶಾಲಾ ವಿದ್ಯಾರ್ಥಿಗಳ ಸಂಖ್ಯೆಯನ್ನು ಲೆಕ್ಕಹಾಕಲು ವ್ಯಾಪಕವಾದ ಸಮೀಕ್ಷೆಯನ್ನು ನಡೆಸಿತು, ಮತ್ತು ಅಂದಾಜು 2,61,754 ಲಕ್ಷ ಕುಟುಂಬಗಳಿಗಿಂತ ಹೆಚ್ಚಿನದಾಗಿದೆ. ಇದು ಒಟ್ಟು 6% ಆಗಿದೆ. ಬ್ರಾಡ್-ಕಾಸ್ಟ್ ಇಂಡಿಯಾ ಸಮೀಕ್ಷೆ 2018 ರ ಪ್ರಕಾರ, ಕೇರಳದಲ್ಲಿ ಟಿವಿ ಲಭ್ಯತೆ 93% ಆಗಿದೆ. ಆತ್ಮಹತ್ಯೆಗೆ ಬಲಿಯಾಗಬೇಕಿದ್ದ 14 ವರ್ಷದ ಈ ಎಸ್.ಎಸ್.ಕೆ ಪಟ್ಟಿಯ ಭಾಗ ಎಂದು ನಂತರ ತಿಳಿದುಬಂದಿದೆ.

ಮಾರ್ಚ್‌ನಿಂದ, ಪ್ರಯೋಗವನ್ನು ನಡೆಸಲು ಶಿಕ್ಷಕರಿಗೆ ತೀವ್ರ ತರಬೇತಿ ನೀಡಲಾಯಿತು, ಅದರ ನಂತರ ಸುಮಾರು 82,000 ಶಿಕ್ಷಕರು

ಪುಟ 10 ನೋಡಿ

ಶಿಕ್ಷಣದಲ್ಲಿ ಕೇರಳ ಸಾಧಿಸಿರುವ ಪ್ರಗತಿಯ ವಿಶಿಷ್ಟತೆಯೆಂದರೆ ವ್ಯಾಪಕವಾದ ಸಾರ್ವಜನಿಕ ಬೆಂಬಲ. ಅಂಚಿನಲ್ಲಿರುವ ಪ್ರದೇಶಗಳು ಮತ್ತು ಸಾಮಾಜಿಕ ಗುಂಪುಗಳ ವಿದ್ಯಾರ್ಥಿಗಳು ಶಿಕ್ಷಣ ತಂತ್ರಜ್ಞಾನದಲ್ಲಿ ಹಿಂದುಳಿಯಬಾರದು. ಎಂದು ಖಾತ್ರಿಪಡಿಸುವಲ್ಲಿಯೂ ಇದು ಕೆಲಸ ಮಾಡಿದೆ. ವಿದ್ಯಾರ್ಥಿಗಳಿಗೆ ಸಾಮೂಹಿಕ ಅಧ್ಯಯನ ಕೊಠಡಿಗಳು, ಟಿವಿ ಸೆಟ್‌ಗಳು ಮತ್ತು ಲ್ಯಾಪ್‌ಟಾಪ್‌ಗಳನ್ನು ಒದಗಿಸಲು ಸರಕಾರದೊಂದಿಗೆ ಸಾರ್ವಜನಿಕರೂ ಕೈಜೋಡಿಸಿದರು.





ಕೇರಳದ 'ಫಸ್ಟ್ ಬೆಲ್'

ಪುಟ 9 ರಿಂದ

ಉತ್ತೀರ್ಣರಾದರು.

"ಜೂನ್ 1 ಮುಂದಿನ ಶೈಕ್ಷಣಿಕ ವರ್ಷದ ಆರಂಭವನ್ನು ಸೂಚಿಸುತ್ತದೆ ಮತ್ತು ಸಾಂಕ್ರಾಮಿಕ ರೋಗವು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಶಾಲೆಗಳಿಗೆ ಪ್ರಯಾಣಿಸಲು ಅಸಾಧ್ಯವಾಗಿದೆ ಎಂದು ನಮಗೆ ತಿಳಿದಿದೆ. ಆದ್ದರಿಂದ, ಈ ಪರಿಸ್ಥಿತಿಯನ್ನು ನಿವಾರಿಸಲು ಸರ್ಕಾರವು ಅಸಂಖ್ಯಾತ ವಿಭಿನ್ನ ಮಾರ್ಗಗಳನ್ನು ಹುಡುಕಿದೆ. ಅದು ವರ್ಚುವಲ್ ತರಗತಿಗಳನ್ನು ನಡೆಸುವುದು" ಎಂದು ಕೇರಳ ಶಿಕ್ಷಣ ಸಚಿವ ಸಿ.ರವೀಂದ್ರನಾಥ್ ಅವರು ಮೇ 30 ರಂದು ಹೇಳಿದರು.

"ಮೊದಲ ವಾರವು ಪ್ರಾಯೋಗಿಕ ಅವಧಿಯಾಗಿದೆ. ಮೊದಲ ಏಳು ದಿನಗಳಲ್ಲಿ ಈ ವಿಧಾನದ ನ್ಯೂನತೆಗಳು ಮತ್ತು ಸಾಧ್ಯತೆಗಳನ್ನು ಜನರು ನಮಗೆ ವರದಿ ಮಾಡಲು ನಾವು ಬಯಸುತ್ತೇವೆ, ಇದರಲ್ಲಿ ಎಷ್ಟು ಮಂದಿ ಈ ಸೌಲಭ್ಯವನ್ನು ಬಳಸಲು ಸಾಧ್ಯವಾಗುವುದಿಲ್ಲ. ನಮಗೆ ಈ ಪ್ರಯತ್ನಕ್ಕೆ ಜನರ ಸಂಪೂರ್ಣ ಭಾಗವಹಿಸುವಿಕೆ ಮತ್ತು ಬೆಂಬಲ ಅಗತ್ಯವಿದೆ."

ಸಾಮೂಹಿಕ ಚಳುವಳಿಯಾದ 'ಫಸ್ಟ್ ಬೆಲ್'


ವಿದ್ಯಾರ್ಥಿನಿಯ ಆತ್ಮಹತ್ಯೆ ಕೇರಳವನ್ನು ನಡುಗಿಸಲಿಲ್ಲ. ಅದರ ನಂತರ, ವರ್ಚುವಲ್ ಶಿಕ್ಷಣಕ್ಕೆ ನೆರವಾಗಲು ರಾಜ್ಯಾದ್ಯಂತ ಟೆಲಿವಿಷನ್ ಸೆಟ್ ಗಳು ಮತ್ತು ಇತರ ಸಾಧನಗಳನ್ನು ವಿತರಿಸಲು ಈಗಾಗಲೇ ನಿರ್ಧರಿಸಿದ್ದ ಪ್ರಗತಿಪರ ಸಂಸ್ಥೆಗಳು ತಮ್ಮ ಚಟುವಟಿಕೆಯನ್ನು ತೀವ್ರಗೊಳಿಸಿದವು. ಯುವ ಮತ್ತು ವಿದ್ಯಾರ್ಥಿಗಳ ಸಂಘಟನೆಗಳಾದ ಡೆಮಾಕ್ರಟಿಕ್ ಯೂತ್ ಫೆಡರೇಶನ್ ಆಫ್ ಇಂಡಿಯಾ (ಡಿವೈ.ಎಫ್.ಐ), ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ (ಎಸ್.ಎಫ್.ಐ), ಕೇರಳ ಮೂಲದ ಟೆಕ್ಕಿಗಳ ಗುಂಪುಗಳು ಮುಂತಾದ ಸಂಘಟನೆಗಳ ಕಾರ್ಯಕರ್ತರು ಇದನ್ನು ಗಂಭೀರವಾಗಿ ನಿರ್ವಹಿಸಲು ಪ್ರಾರಂಭಿಸಿದರು. ಶೀಘ್ರದಲ್ಲೇ, ಇದನ್ನು ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು, ಸ್ಥಳೀಯ ಶಾಸಕರು ಮತ್ತು ಸಂಸದರು ಪಕ್ಷದ ವ್ಯಾಪ್ತಿಗೆ ಮೀರಿ ಕೈಗೆತ್ತಿಕೊಂಡರು. ನಾಗರಿಕ ಸಮಾಜವು ಸೇರಿಕೊಂಡಿತು – ದೂರದ ಪ್ರದೇಶಗಳಲ್ಲಿ ಸಾಮೂಹಿಕ್ಯ ಅಧ್ಯಯನ ಕೊಠಡಿಗಳನ್ನು ಶೀಘ್ರದಲ್ಲೇ ಸ್ಥಾಪಿಸಲಾಯಿತು. ವರ್ಚುವಲ್ ಪಾಠಗಳನ್ನು ಸಂಗ್ರಹಿಸಲು ಮತ್ತು ಹಾಜರಾಗಲು ತಮ್ಮದೇ ಆದ ಎಲೆಕ್ಟ್ರಾನಿಕ್ ಸಾಧನಗಳಿಲ್ಲದ ವಿದ್ಯಾರ್ಥಿಗಳಿಗೆ ಗ್ರಂಥಾಲಯಗಳನ್ನು ಪರಿವರ್ತಿಸಲಾಯಿತು.

"ಟಿವಿ ಚಾಲೆಂಜ್"– ಸಾರ್ವಜನಿಕ ಬೆಂಬಲ

ಶಿಕ್ಷಣದಲ್ಲಿ ಕೇರಳ ಸಾಧಿಸಿರುವ ಪ್ರಗತಿಯ ವಿಶಿಷ್ಟತೆಯೆಂದರೆ ವ್ಯಾಪಕವಾದ ಸಾರ್ವಜನಿಕ ಬೆಂಬಲ. ಅಂಚಿನಲ್ಲಿರುವ ಪ್ರದೇಶಗಳು ಮತ್ತು ಸಾಮಾಜಿಕ ಗುಂಪುಗಳ ವಿದ್ಯಾರ್ಥಿಗಳು ಶಿಕ್ಷಣ ತಂತ್ರಜ್ಞಾನದಲ್ಲಿ ಹಿಂದುಳಿಯಬಾರದು. ನಾವೆಲ್ಲರೂ ಇದನ್ನು ಒಟ್ಟಾಗಿ ಇಲ್ಲಿ ಮಾಡಬೇಕೆಂದು ಖಚಿತಪಡಿಸಿಕೊಳ್ಳಬೇಕು. ಸಾರ್ವಜನಿಕರ ಸಹಾಯದಿಂದ ಪಂಚಾಯತ್ ಅಧಿಕಾರಿಗಳಲ್ಲಿ, ಟಿವಿಗಳನ್ನು ಹೊಂದಿರದ ಮತ್ತು ಸ್ಥಳೀಯ ಅಧ್ಯಯನ ಕೊಠಡಿಗಳನ್ನು ಸ್ಥಾಪಿಸುವ ಕುಟುಂಬಗಳ ಸಂಖ್ಯೆಯನ್ನು ಕಂಡುಹಿಡಿಯಬೇಕು ಎಂದು ಹಣಕಾಸು ಸಚಿವ ಮತ್ತು ಅರ್ಥಶಾಸ್ತ್ರಜ್ಞ ಟಿಎಂ ಥಾಮಸ್ ಐಸಾಕ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಇದನ್ನು ಅನುಸರಿಸಿ, ಟೆಲಿವಿಷನ್ ಸೆಟ್ ಗಳು ಮತ್ತು ಲ್ಯಾಪ್ ಟಾಪ್ ಗಳ ವಿತರಣೆಯನ್ನು ಆರ್ಥಿಕವಾಗಿ ಬೆಂಬಲಿಸುವ ಪ್ರಸ್ತಾಪವನ್ನು ಸರ್ಕಾರ ಪ್ರಕಟಿಸಿತು. ಕೇರಳ ರಾಜ್ಯ ಹಣಕಾಸು ಉದ್ಯಮಗಳು (ಕೆ.ಎಸ್.ಎಫ್.ಇ), ಸಾರ್ವಜನಿಕ ವಲಯದ ಚಿಟ್–ಫಂಡ್ ಮತ್ತು ಸಾಲ ಕಂಪನಿ ಮತ್ತು ಸ್ಥಳೀಯ ಸ್ವಯಂ–ಸರ್ಕಾರಗಳಿಗೆ ಪ್ರತಿ ಪ್ರದೇಶದಲ್ಲೂ ಈ ವಿಷಯವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ನೀಡಲಾಯಿತು. ಥಾಮಸ್ ಐಸಾಕ್ ಪ್ರಕಾರ, ಅಗತ್ಯವಿರುವ ಸಾಧನಗಳನ್ನು, ವಿಶೇಷವಾಗಿ ಟೆಲಿವಿಷನ್ ಸೆಟ್ಗಳನ್ನು ಸಂಗ್ರಹಿಸಲು ಕೆ.ಎಸ್.ಎಫ್.ಇ ಸ್ಥಳೀಯ ಸ್ವಯಂ–ಸರ್ಕಾರದ ನಿಧಿಗೆ ಸುಮಾರು 75% ಕೊಡುಗೆ ನೀಡುತ್ತದೆ. ಅಲ್ಲದೆ, ಶಾಸಕರು ತಮ್ಮ ಸ್ಥಳೀಯ ಅಭಿವೃದ್ಧಿ ಹಣವನ್ನು ಟಿವಿ ಮತ್ತು ಲ್ಯಾಪ್ಟಾಪ್ ಖರೀದಿಸಲು ಖರ್ಚು ಮಾಡುವಂತೆ ಕೇಳಿಕೊಂಡರು. ಕುಡುಂಬಶ್ರೀ ಸಹ ಸಹಾಯ ಮಾಡಲು ಸಜ್ಜುಗೊಂಡಿದೆ. ಹೆಚ್ಚುವರಿಯಾಗಿ, ಅಗತ್ಯವಿರುವವರಿಗೆ ಬಳಸಬಹುದಾದ ಲ್ಯಾಪ್ಟಾಪ್ ಗಳು, ಪ್ರೊಜೆಕ್ಟರುಗಳು ಮತ್ತು ಟಿವಿಗಳನ್ನು ಶಾಲೆಗಳಿಗೆ ಒದಗಿಸಲಾಗಿದೆ.





ಜೂನ್ 4 ರಂದು, ಕೇರಳದ ಕೈಗಾರಿಕಾ ಇಲಾಖೆಯು "ಟಿವಿ ಚಾಲೆಂಜ್" ಅನ್ನು ಪ್ರಾರಂಭಿಸಿತು, ಹೊಸ ಟೆಲಿವಿಷನ್ ಸೆಟ್ ಗಳನ್ನು ಕೊಡುಗೆ ನೀಡಲು ಸಾರ್ವಜನಕರನ್ನು ಆಹ್ವಾನಿಸಿ ನಂತರ ಅದನ್ನು ಹೊಂದಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು. "ಇದೀಗ ಸರ್ಕಾರದ ವಾಸ್ತವ ಪಾಠಗಳಿಗೆ ಹಾಜರಾಗಲು ಅಸಮರ್ಥವಾಗಿರುವ ಅನೇಕ ಮಕ್ಕಳು ಇದ್ದಾರೆ. ಶಿಕ್ಷಣ ಇಲಾಖೆಗೆ ಸುಮಾರು 2000 ಹೊಸ ಟಿವಿಗಳನ್ನು ಒದಗಿಸುವುದು ಈ ಸವಾಲಾಗಿದೆ" ಎಂದು ಕೈಗಾರಿಕಾ ಸಚಿವ ಇ.ಪಿ.ಜಯರಾಜನ್ ಬರೆದಿದ್ದಾರೆ. ಕೆಲವೇ ದಿನಗಳಲ್ಲಿ, ಅನೇಕ ಸ್ಥಳೀಯ ಉದ್ಯಮಿಗಳು ತಮ್ಮ ಹತ್ತಿರದ ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ಟಿವಿ ಸೆಟ್ ಗಳನ್ನು ನೀಡಲು ಸೇರಿಕೊಂಡರು. ಕಾಂಗ್ರೆಸ್ಸಿನ ಕೊಚ್ಚಿ ಸಂಸದ ಹಿಬಿ ಈಡನ್ ತಮ್ಮ ಕ್ಷೇತ್ರದಲ್ಲಿ "ಟ್ಯಾಬ್ಲೆಟ್ ಚಾಲೆಂಜ್" ಅನ್ನು ಪ್ರಾರಂಭಿಸಿದರು.

ಕುತೂಹಲಕಾರಿಯೆಂದರೆ, ಆನ್–ಲೈನ್ ಶಿಕ್ಷಣ ಮತ್ತು ಪರೀಕ್ಷೆಗಳ ವಿಶೇಷ ಸ್ವರೂಪದ ವಿರುದ್ಧ ದೇಶದ ಇತರ ಭಾಗಗಳಲ್ಲಿ ವಿದ್ಯಾರ್ಥಿಗಳು ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದಾಗ ಇವೆಲ್ಲವೂ ನಡೆಯುತ್ತಿದೆ. ನವದೆಹಲಿ ಮೂಲದ ಪ್ರಗತಿಪರ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸಂಘಟನೆಗಳು "ಡಿಜಿಟಲ್ ವಿಭಜನೆಯ" ಅಪಾಯಗಳನ್ನು ಉಲ್ಲೇಖಿಸಿ ಪರೀಕ್ಷೆಗಳನ್ನು ಆನ್–ಲೈನನಲ್ಲಿ ಸ್ಥಳಾಂತರಿಸುವ ದೆಹಲಿ ವಿಶ್ವವಿದ್ಯಾಲಯದ ನಿರ್ಧಾರವನ್ನು ವಿರೋಧಿಸಿ ಪ್ರತಿಭಟಿಸಿದರು. ಮೇ 20 ರಂದು, ರಾಷ್ಟ್ರದಾದ್ಯಂತದ ವಿದ್ಯಾರ್ಥಿ ಸಂಘಗಳು ಮತ್ತು ಸಂಸ್ಥೆಗಳು "ಸಾರ್ವಜನಿಕ ಶಿಕ್ಷಣವನ್ನು ಉಳಿಸಲು" ಆನ್–ಲೈನ್ ಪ್ರತಿಭಟನೆಗೆ ಕಾರಣವಾಯಿತು.¸ ಬಹುಸಂಖ್ಯಾತರಿಗೆ ಅಂತರ್ಜಾಲ ಪ್ರವೇಶವಿಲ್ಲದಿರುವ ಸಮಯದಲ್ಲಿ, ಅದನ್ನು ಆನ್–ಲೈನ್ ಗೆ ಸ್ಥಳಾಂತರಿಸುವ ಕೇಂದ್ರ ಸರ್ಕಾರದ ಕ್ರಮಕ್ಕೆ ವಿರುದ್ಧವಾಗಿ. ಕೇರಳದ ಪ್ರಯೋಗವನ್ನು ವಿಭಿನ್ನವಾಗಿಸುತ್ತದೆ. ಆನ್–ಲೈನ್ ಗೆ ಬದಲಾವಣೆಯ ಜೊತೆಗೆ, ವಿಕೇಂದ್ರೀಕೃತ ಪ್ರಕ್ರಿಯೆಯ ಮೂಲಕ ಈ ಬದಲಾವಣೆಯಲ್ಲಿ ಎಲ್ಲರಿಗೂ ಭಾಗವಹಿಸಲು ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಏಕಕಾಲದಲ್ಲಿ ತೆಗೆದುಕೊಳ್ಳಲಾಗುತ್ತಿದೆ. ಎಲೆಕ್ಟ್ರಾನಿಕ್ ಸಾಧನಗಳು ಹೊಂದಿರದ ವಿದ್ಯಾರ್ಥಿಗಳ ಸಂಖ್ಯೆಯನ್ನು ವರದಿ ಮಾಡುವ ಜವಾಬ್ದಾರಿಯನ್ನು ವರ್ಗ ಶಿಕ್ಷಕರು ಮತ್ತು ಶಾಲಾ ಮುಖ್ಯ ಶಿಕ್ಷಕರಿಗೆ ವಹಿಸಲಾಗಿದೆ. ಹೆಚ್ಚಿನ ಸಿದ್ಧತೆ ಅಗತ್ಯವಿರುವುದರಿಂದ ಆನ್–ಲೈನ್ ನಲ್ಲಿ ಪರೀಕ್ಷೆಗಳನ್ನು ನಡೆಸುವುದರ ವಿರುದ್ಧವೂ ಸರ್ಕಾರ ನಿರ್ಧರಿಸಿದೆ.

ಹೊಸ ಆಕಾಂಕ್ಷೆ– ಸಮಾಜವಾದಿ ತಿಳುವಳಿಕೆಯೇ ಉತ್ತೇಜಕ

"ಕೇರಳದಲ್ಲಿ ಡಿಜಿಟಲ್ ಮತ್ತು ವರ್ಚುವಲ್ ಕ್ಷೇತ್ರದಲ್ಲಿ ಪ್ರಗತಿಪರ ಕ್ರಮಗಳು ಇತ್ತೀಚೆಗೆ ಹೆಚ್ಚು ನಡೆಯುತ್ತಿವೆ. ಡಿಜಿಟಲ್ ಕ್ಷೇತ್ರವನ್ನು ಪ್ರಜಾಪ್ರಭುತ್ವಗೊಳಿಸುವ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ, ದೂರದೃಷ್ಟಿಯ ಉತ್ಸಾಹವನ್ನು ಬೆಳೆಸುವಲ್ಲಿ ಕೇರಳವು ಭಾರತದ ಇತರ ರಾಜ್ಯಗಳಿಗಿಂತ ಮುಂದಿದೆ. 2019 ರಲ್ಲಿ ರಾಜ್ಯವು ಅಂತರ್ಜಾಲವನ್ನು ಮೂಲಭೂತ ಮಾನವ ಹಕ್ಕು ಎಂದು ಘೋಷಿಸಿದ್ದು, ಭಾರತದ ಈವರೆಗಿನ ಬರಿಯ ತಾಂತ್ರಿಕ ಆಕಾಂಕ್ಷೆಗಳನ್ನು ಮೀರಿದ ಆ ಬಗೆಗಿನ ವಾಸ್ತವ ಮುನ್ನೋಟವಾಗಿತ್ತು" ಎಂದು ಮೀನಾ ಟಿ ಪಿಳ್ಳೈ ಭಾರತೀಯ ಸಾಂಸ್ಕೃತಿಕ ವೇದಿಕೆಗೆ ತಿಳಿಸಿದರು. ಪಿಳ್ಳೈ ಅವರು ಕೇರಳ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ ಮತ್ತು ಈ ವಿಷಯವನ್ನು ತೀವ್ರವಾಗಿ ಅಧ್ಯಯನ ಮಾಡಿದ್ದಾರೆ.

"ದೀನದಲಿತರು ಮತ್ತು ಸಾಮಾಜಿಕವಾಗಿ ಹೊರಗುಳಿದವರು ಬೇರೆಯವರಂತೆಯೇ ಡಿಜಿಟಲ್ ಹಕ್ಕನ್ನು ಹೊಂದಿದ್ದಾರೆ, ಮತ್ತು ಡಿಜಿಟಲ್ ಪ್ರಜಾಪ್ರಭುತ್ವದ ಪರಿಕಲ್ಪನೆಯೊಳಗೆ ಜೀವನ ಮತ್ತು ಜೀವನೋಪಾಯಗಳನ್ನು ಮರು–ಸಾಕ್ಷಾತ್ಕಾರ ಮಾಡಬೇಕಾಗಿದೆ ಎಂಬ ಸಮಾಜವಾದಿ ತಿಳುವಳಿಕೆ, ರಾಜ್ಯವನ್ನು ಈ ಹೊಸ ಮೈಲಿಗಲ್ಲುಗಳ ಆಕಾಂಕ್ಷೆಗೆ ಉತ್ತೇಜಿಸಿದವು" ಎಂದು ಅವರು ಹೇಳಿದರು. .

ಕೇರಳದ ತೀರಾ ಉತ್ತರಕ್ಕೆ ಇರುವ ಜಿಲ್ಲೆಗಳಲ್ಲಿ ಒಂದಾದ ವಯನಾಡ್, ಟಿವಿಗಳು ಅಥವಾ ಇತರ ಸಾಧನಗಳಿಲ್ಲದ ಹೆಚ್ಚಿನ ಸಂಖ್ಯೆಯ ಕುಟುಂಬಗಳನ್ನು ಹೊಂದಿದೆ ಎಂದು ಕಂಡುಬಂದಿದೆ. ಅದರ ಅಂದಾಜು 21,653. ಇದು ಜಿಲ್ಲೆಯ ಒಟ್ಟು ವಿದ್ಯಾರ್ಥಿಗಳ 15% ಆಗಿದೆ. ಕಲ್ಪೆಟ್ಟಾದ ಸ್ಥಳೀಯ ಶಾಸಕ ಸಿ.ಕೆ.ಸಸೀಂದ್ರನ್ ಮತ್ತು ಇತರರ ಸಹಾಯದಿಂದ ಸುಮಾರು 9,200 ಸಾಮಾನ್ಯ ಅಧ್ಯಯನ ಕೇಂದ್ರಗಳನ್ನು ಇಲ್ಲಿ ಸ್ಥಾಪಿಸಲಾಯಿತು. ಜಿಲ್ಲೆಯು ಇಡೀ ರಾಜ್ಯದಲ್ಲಿ ಗರಿಷ್ಠ ಸಂಖ್ಯೆಯ ಬುಡಕಟ್ಟು ಕುಟುಂಬಗಳನ್ನು ಹೊಂದಿದೆ ಎಂದು ತಿಳಿದು ಬಂದಿದೆ. ಸಸೀಂದ್ರನ್ ಅವರ ಪ್ರಕಾರ ಈ ಮನೆಗಳಲ್ಲಿ ವಿದ್ಯುತ್ ಸಂಪರ್ಕ ಮತ್ತು ಟಿವಿ ಸೆಟ್ ಗಳ ಲಭ್ಯತೆಯನ್ನು ಖಚಿತಪಡಿಸಲಾಗಿದೆ. ಸರ್ಕಾರದ ಸಹಾಯವಿಲ್ಲದೆ ರಾಜ್ಯದ ಹಲವಾರು ಭಾಗಗಳಲ್ಲಿ ಇಂತಹ ಅನೇಕ ಸಾಮಾನ್ಯ ಅಧ್ಯಯನ ಕೊಠಡಿಗಳನ್ನು ತೆರೆಯಲಾಗಿದೆ. ಕರಾವಳಿ ಪ್ರದೇಶಗಳಲ್ಲಿ ಇದೇ ರೀತಿಯ ಕೆಲಸವನ್ನು ಮತ್ಸ್ಯಫೆಡ್ ಅಥವಾ ಮೀನುಗಾರಿಕೆ ಅಭಿವೃದ್ಧಿಗಾಗಿ ಸರ್ಕಾರ ನಡೆಸುವ ಸಹಕಾರಿ ಒಕ್ಕೂಟವು ಕೈಗೆತ್ತಿಕೊಂಡಿದೆ. ಐಸಾಕ್ ಪ್ರಕಾರ, ಕರಾವಳಿಯಾದ್ಯಂತ ಸಮರ್ಪಕ ಸೌಲಭ್ಯಗಳಿಲ್ಲದ ಕುಟುಂಬಗಳ ಸಂಖ್ಯೆಯನ್ನು ಕೆ.ಎಸ್.ಎಫ್.ಇ ಗೆ ಸಲ್ಲಿಸಲಾಗಿದೆ.

ಪಿಳ್ಳೈ ಅವರು ಈ ಕುರಿತು ಹೀಗನ್ನುತ್ತಾರೆ "ಕೇರಳವನ್ನು ಅಳ್ಳು ಅನನ್ಯಗೊಳಿಸಿದ 100% ಸಾಕ್ಷರತೆಯ ದೀರ್ಘ ಕನಸಿನಿಂದ ಮುಂದೆ ಸಾಗಿ, ಪ್ರತಿ ಮನೆಯಲ್ಲೂ ಅಂತರ್ಜಾಲದ ಮತ್ತು ಎರಡು ದಶಲಕ್ಷ ಬಡ ಕುಟುಂಬಗಳಿಗೆ ಉಚಿತ ಅಂತರ್ಜಾಲದ ಹೊಸ ಆಕಾಂಕ್ಷೆಗಳು, ಕೇರಳ ಫೈಬರ್ ಆಪ್ಟಿಕ್ ನೆಟ್ವರ್ಕ್ ಅನ್ನು ಜಂಟಿಯಾಗಿ ಸ್ಥಾಪಿಸಲು ಕಾರಣವಾಯಿತು. ಕೇರಳ ರಾಜ್ಯ ವಿದ್ಯುತ್ ಮಂಡಳಿ (ಕೆ.ಎಸ್.ಇ.ಬಿ) ಮತ್ತು ಕೇರಳ ರಾಜ್ಯ ಐಟಿ ಇನ್–ಫ್ರಾಸ್ಟ್ರಕ್ಚರ್ ಲಿಮಿಟೆಡ್ ನ ಜಂಟಿ ಉದ್ಯಮ. ಇದು ಸ್ಥಳೀಯ ಯೋಜನೆಯ ಮೇಲೆ ಗಮನ ಕೇಂದ್ರೀಕರಿಸಿ ವಿಕೇಂದ್ರೀಕರಣದ ನಿರಂತರ ಪ್ರಯತ್ನಗಳ ಜೊತೆಗೆ, ಸಾರ್ವಜನಿಕ ಶಿಕ್ಷಣದಲ್ಲಿನ ಡಿಜಿಟಲ್ ತಾರತಮ್ಯವನ್ನು ಕನಿಷ್ಠಗೊಳಿಸುವ ಮೂಲಕ, ಸಾಮಾಜಿಕ ಶ್ರೇಣಿಗಳನ್ನು ಸಮತಟ್ಟಾಗಿಸಲು ಸಹಾಯ ಮಾಡುತ್ತದೆ."

ಇಂದು, ಕೇರಳದಾದ್ಯಂತ ಸುಮಾರು 43–45 ಲಕ್ಷ ವಿದ್ಯಾರ್ಥಿಗಳು ತಮ್ಮ ದೈನಂದಿನ ಪಾಠಗಳಿಗಾಗಿ 'ಕೈಟ್ ವಿಕ್ಟರ್ಸ್' ಗೆ ಟ್ಯೂನ್ ಮಾಡುತ್ತಾರೆ. ವರ್ಚುವಲ್ / ರಿಮೋಟ್ ಶಿಕ್ಷಣವು ಭೌತಿಕ ತರಗತಿಗೆ ಪರ್ಯಾಯವಲ್ಲ, ಏಕೆಂದರೆ ವರ್ಚುವಲ್ / ರಿಮೋಟ್ ಶಿಕ್ಷಣಕ್ಕೆ ಭೌತಿಕ ತರಗತಿಯ ಆರೋಗ್ಯಕರ ವಾತಾವರಣವನ್ನು ನೀಡಲು ಸಾಧ್ಯವಾಗುವುದಿಲ್ಲ. ಮೇಲೆ ತಿಳಿಸಿದ ಪ್ರಯತ್ನಗಳು ಇನ್ನೂ ರಾಜ್ಯದ ಅನೇಕ ವಿದ್ಯಾರ್ಥಿಗಳನ್ನು ತಲುಪಿಲ್ಲ ಮತ್ತು ಇದು ಸಮಯ ತೆಗೆದುಕೊಳ್ಳುತ್ತದೆ. ದೇಶದಲ್ಲಿ ಆಳವಾಗಿ ಬೇರೂರಿರುವ ಡಿಜಿಟಲ್ ತಾರತಮ್ಯವನ್ನು ಗಮನದಲ್ಲಿಟ್ಟುಕೊಂಡು ಸಾಮಾನ್ಯವಾಗಿ ಹೆಚ್ಚಿನ ಶಾಲೆಗಳು, ತರಗತಿ ಕೊಠಡಿಗಳು ಮತ್ತು ಉತ್ತಮ ಶೈಕ್ಷಣಿಕ ಮೂಲಸೌಕರ್ಯಗಳನ್ನು ಸ್ಥಾಪಿಸುವುದು ಸರ್ಕಾರಗಳ ಪ್ರಾಥಮಿಕ ಉದ್ದೇಶವಾಗಿರಬೇಕು ಎಂದು ಪ್ರಗತಿಪರ ವಿದ್ಯಾರ್ಥಿಗಳ ಸಂಘಟನೆಗಳು ತಿಳಿಸಿವೆ.

ಭಾರತೀಯ ಸಾಂಸ್ಕೃತಿಕ ವೇದಿಕೆಯು ಕೇರಳದ ಕೇಂದ್ರೀಯ ವಿಶ್ವವಿದ್ಯಾಲಯದ ಶಿಕ್ಷಣ ಪ್ರಾಧ್ಯಾಪಕ ಅಮೃತ್ ಜಿ ಕುಮಾರ್ ಅವರೊಂದಿಗೆ ಮಾತನಾಡಿದಾಗ ಅವರು ಹೀಗಂದರು, "ಡಿಜಿಟಲ್ ತಾರತಮ್ಯವನ್ನು ಬರಿಯ ಡಿಜಿಟಲ್ ಪರಿಕರಗಳೊಂದಿಗೆ ಪರಿಹರಿಸಬಹುದು ಎಂದು ಬರಿಯ ಭೋಳೆತನವಾಗುತ್ತದೆ. ಉಪಕರಣಗಳ ಗುಣಮಟ್ಟ, ವಿದ್ಯುತ್ ಲಭ್ಯತೆ, ಇಂಟರ್ನೆಟ್, ಪೋಷಕರ ತಾಂತ್ರಿಕ ಜ್ಞಾನ, ಸಂಪರ್ಕವನ್ನು ಉಳಿಸಿಕೊಳ್ಳುವ ಸಾಮರ್ಥ್ಯವೂ ತಾರತಮ್ಯದ ಭಾಗವಾಗಿದೆ. ಡಿಜಿಟಲ್ ತಾರತಮ್ಯವು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪ್ರಾದೇಶಿಕ ತಾರತಮ್ಯಗಳ ಸಂಕೀರ್ಣ ಮತ್ತು ಸಂಯುಕ್ತ ಮಿಶ್ರಣವಾಗಿದೆ"

ಆನ್–ಲೈನ್ ಶಿಕ್ಷಣ 'ಶಾಲೆ'ಗೆ ಪರ್ಯಾಯವಲ್ಲ ಎಂಬ ಅರಿವು

ಮಲಪ್ಪುರಂನಲ್ಲಿ ಶಾಲಾ ವಿದ್ಯಾರ್ಥಿಯ ಆತ್ಮಹತ್ಯೆಯ ದಿನದಂದು, ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಆನ್–ಲೈನ್ ಶಿಕ್ಷಣದ ಕಡೆಗೆ ಸ್ಥಳಾಂತರಗೊಳ್ಳುವುದು "ತಾತ್ಕಾಲಿಕ" ಮತ್ತು ಶಾಲೆಗಳನ್ನು ಶೀಘ್ರದಲ್ಲಿಯೇ ಪುನಃ ತೆರೆಯುವ ಆಶಯವನ್ನು ಸರಕಾರ ಹೊಂದಿದೆ ಎಂದು ಮಾಧ್ಯಮಗಳಿಗೆ ಒತ್ತಿ ತಿಳಿಸಿದರು.

ಪ್ರವೇಶದ ಸಮಸ್ಯೆಗಳಲ್ಲದೆ, ಡಿಜಿಟಲ್ ವಿಧಾನವು ಅದಕ್ಕೆ ವಿಶಿಷ್ಟವಾದ ಕೆಲವು ಸಾಮಾಜಿಕ–ರಾಜಕೀಯ ಸಮಸ್ಯೆಗಳನ್ನು ಸಹ ಉಂಟುಮಾಡಿದೆ. ಪ್ರಾಯೋಗಿಕ ತರಗತಿಗಳನ್ನು ಪ್ರಸಾರ ಮಾಡಿದ ನಂತರ ಸೈಬರ್ ಕಿರುಕುಳದ ಅನೇಕ ಪ್ರಕರಣಗಳು ಕೆಲವು ಮಹಿಳಾ ಶಿಕ್ಷಕರ ವಿರುದ್ಧ ಹೊರಬರಲು ಪ್ರಾರಂಭಿಸಿದವು. ತರಗತಿಯಲ್ಲಿ ಮಹಿಳೆಯರ ಸ್ಕ್ರೀನ್–ಶಾಟ್ ಗಳನ್ನು "ಅಭಿಮಾನಿ ಪುಟ"ಗಳನ್ನು ಆರಂಭಿಸಿ ಪ್ರಸಾರ ಮಾಡಲಾಯಿತು. ಸಾಮಾಜಿಕ ನ್ಯಾಯ ಇಲಾಖೆ ಇಂತಹ ಪ್ರಕರಣಗಳನ್ನು ತಾನಾಗಿಯೇ ವಿಚಾರಣೆಗೆ ತೆಗೆದುಕೊಂಡಿದೆ.

ಆನ್–ಲೈನ್ ಶಿಕ್ಷಣ 'ಶಾಲೆಗೆ ಪರ್ಯಾಯವಲ್ಲ ಎಂಬ ಅಂಶ ನಮಗೆ ಮೊದಲಿನಿಂದಲೂ ಸ್ಪಷ್ಟವಾಗಿದೆ. ಇದು ಶೈಕ್ಷಣಿಕ ವರ್ಷಕ್ಕೆ ಪ್ರವೇಶಿಸುವ ಮೊದಲು ವಿದ್ಯಾರ್ಥಿಗಳಿಗೆ ಆ ಅಂತರವನ್ನು ತುಂಬಲು ಸಹಾಯ ಮಾಡುತ್ತದೆ" ಕೈಟ್ ಸಿಇಒ ಕೆ.ಅನ್ವರ್ ಸದಾತ್ ಹೇಳಿದ್ದಾರೆ.

ಅದು ಏನೇ ಇರಲಿ, ದೇಶದ ವಿವಿಧ ಭಾಗಗಳಲ್ಲಿನ ಬಹುಪಾಲು ಶಾಲಾ ವಿದ್ಯಾರ್ಥಿಗಳಿಗೆ ಶಿಕ್ಷಣ ಸಂಪೂರ್ಣವಾಗಿ ಸ್ಥಗಿತಗೊಂಡಿರುವ ಸಮಯದಲ್ಲಿ, ಕೇಂದ್ರ ಸರ್ಕಾರವು ಸಾಕಷ್ಟು ಮೂಲಸೌಕರ್ಯಗಳನ್ನು ಖಾತ್ರಿಪಡಿಸದೆ ಆನ್–ಲೈನ್ ಶಿಕ್ಷಣಕ್ಕೆ ಒತ್ತಾಯಿಸುತ್ತಿರುವಾಗ, ಕೇರಳದಲ್ಲಿನ ಈ ಬೆಳವಣಿಗೆಗಳು ಖಂಡಿತವಾಗಿಯೂ ಗಮನಾರ್ಹವಾಗಿದೆ. ಈ ಸನ್ನಿವೇಶದಲ್ಲಿ ಸಾರ್ವಜನಿಕ ಶಿಕ್ಷಣವನ್ನು ಹೇಗೆ ಉಳಿಸುವುದು ಮತ್ತು ವರ್ಚುವಲ್ ಕಲಿಕೆಯನ್ನು ಹೇಗೆ ಪ್ರಜಾಪ್ರಭುತ್ವೀಕರಿಸುವುದು ಎಂಬುದರ ಕುರಿತು ನಮಗೆ ನಿರ್ಣಾಯಕ ಪಾಠಗಳನ್ನು ನೀಡುವಂತಹ ಐತಿಹಾಸಿಕ ಸಾಮೂಹಿಕ ಆಂದೋಲನಕ್ಕೆ ರಾಜ್ಯವು ಈಗ ಸಾಕ್ಷಿಯಾಗಿದೆ.

ಶತಮಾನೋತ್ಸವ ಲೇಖನ ಮಾಲೆ-33

ಸುಪ್ರಸಿದ್ಧ ತೆಲಂಗಾಣ ಜನರ ಸಶಸ್ತ್ರ ಹೋರಾಟ-3
ಪೋಲೀಸ್ ಕಾರ್ಯಾಚರಣೆ ಮತ್ತು ಹೋರಾಟದ ನಿಲುಗಡೆ

'ಪೋಲೀಸ್ ಕಾರ್ಯಾಚರಣೆ'ಯ ಐದೇ ದಿನಗಳಲ್ಲಿ ನಿಜಾಮ ಶರಣಾದ. ಆ ಸಮಯದಲ್ಲಿ, ಎಲ್ಲಿಯ ತನಕ ರಜಾಕಾರರು ಹಾಗೂ ನಿಜಾಮನ ಸೇನೆಯ ಮೇಲೆ ಭಾರತದ ಸೇನೆಯು ದಾಳಿ ಮಾಡುತ್ತಿರುತ್ತದೋ ಅಲ್ಲಿಯ ತನಕ ಅವರ ಜತೆ ಸಂಘರ್ಷಕ್ಕೆ ಇಳಿಯಬಾರದೆಂದು ಸ್ಥಳೀಯ ಹಾಗೂ ಗೆರಿಲ್ಲಾ ತಂಡಗಳಿಗೆ ಪಕ್ಷ ನಿರ್ದೇಶನ ನೀಡಿತ್ತು. ಆದರೆ ಎಲ್ಲಾ ಗೆರಿಲ್ಲಾ ತಂಡಗಳನ್ನು ಮತ್ತು ಪಕ್ಷವನ್ನು ಧ್ವಂಸ ಮಾಡಲೇಬೇಕೆಂಬ ದೃಢ ನಿಶ್ಚಯದಿಂದಲೇ ಭಾರತಿಯ ಸೇನಾ ಪಡೆಗಳ ದಾಳಿ ನಡೆಸಲಾಗಿತ್ತು. 1948ರಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ ಎರಡನೇ ಮಹಾಧಿವೇಶನವು "ತೆಲಂಗಾಣ ದಾರಿ ನಮ್ಮ ದಾರಿ" ಎಂಬ ಘೋಷಣೆ ನೀಡಿತು. ತೆಲಂಗಾಣ ಸಶಸ್ತ್ರ ಹೋರಾಟಕ್ಕೆ ಸಂಪೂರ್ಣ ಬೆಂಬಲ ಘೋಷಿಸಿತು. ಅದರೆ ನಂತರ ಅಪೂರ್ಣವಾದ ಪಕ್ಷಪಾತಿ ಹೋರಾಟ ಮತ್ತು ವಿಮೋಚನಾ ಹೋರಾಟದ ಭಾಗವಾದ ಪಕ್ಷಪಾತಿ ಸಮರದ ನಡುವಿನ ವ್ಯತ್ಯಾಸವನ್ನು ಅರಿಯುವಲ್ಲಿ ದೊರೆತ ಸ್ಪಷ್ಟತೆಯು, ಮುಂದಿನ ತಂತ್ರಗಾರಿಕೆಯನ್ನು ತೀರ್ಮಾನಿಸುವ ಕಾರ್ಯವನ್ನು ಸಲೀಸು ಮಾಡಿತು. ತೆಲಂಗಾಣ ಜನರ ಸಶಸ್ತ್ರ ಹೋರಾಟವನ್ನು ಹಿಂಪಡೆಯುವ ನಿರ್ಧಾರವನ್ನು ಅಕ್ಟೋಬರ್ 21, 1951 ರಂದು ಪ್ರಕಟಿಸಲಾಯಿತು.



ಕನ್ನಡಕ್ಕೆ: ಟಿ. ಸುರೇಂದ್ರ ರಾವ್

ಭಾರತ ಒಕ್ಕೂಟಕ್ಕೆ ಹೈದರಾಬಾದ್ ಸಂಸ್ಥಾನವನ್ನು ಸೇರಿಸಲು ನಿಜಾಮನನ್ನು ಒತ್ತಾಯಿಸಲು ಹಾಗೂ ತೆಲಂಗಾಣ ರೈತ ಚಳುವಳಿಯ ವಿಸ್ತರಣೆಯನ್ನು ನಿಗ್ರಹಿಸಲು ಕೇಂದ್ರ ಸರ್ಕಾರವು ಸೆಪ್ಟೆಂಬರ್ 13, 1948ರಂದು 'ಪೋಲಿಸ್ ಕಾರ್ಯಾಚರಣೆ' ನಡೆಸಿತು. ಕೆಲವು ಪ್ರದೇಶಗಳನ್ನು ಹೊರತುಪಡಿಸಿ, ನಿಜಾಮನ ಸೈನ್ಯ ಕೇಂದ್ರದ ಪಡೆಗೆ ಪ್ರತಿರೋಧ ಒಡ್ಡಲಿಲ್ಲ ಮತ್ತು ಸಂಪೂರ್ಣ ಶರಣಾದರು. ಕೇವಲ ಐದೇ ದಿನದಲ್ಲಿ ಸೆಪ್ಟೆಂಬರ್ 18, 1948ರಂದು ನಿಜಾಮನೇ ಶರಣಾದನು.

ಈ 'ಪೋಲಿಸ್ ಕಾರ್ಯಾಚರಣೆ'ಯ ಅವಕಾಶವನ್ನು ಬಳಸಿಕೊಂಡು ಹಲವಾರು ರಜಾಕಾರರು ಮತ್ತು ಪೋಲಿಸ್ ಶಿಬಿರಗಳ ಮೇಲೆ ಜನರು ಹಾಗೂ ನಮ್ಮ ಸಶಸ್ತ್ರ ತಂಡಗಳು ದಾಳಿ ಮಾಡಿ, ಅವುಗಳನ್ನು ಧ್ವಂಸ ಮಾಡಿ, ಮದ್ದುಗುಂಡುಗಳನ್ನು ಶಸ್ತ್ರಾಸ್ತ್ರಗಳನ್ನು ಮತ್ತಿತರ ವಸ್ತುಗಳನ್ನು ವಶಪಡಿಸಿಕೊಂಡರು. ರಸ್ತೆಗಳಲ್ಲಿ ಮತ್ತು ಹೊಲಗದ್ದೆಗಳಲ್ಲಿ ಓಡಿಹೋಗುತ್ತಿದ್ದ ಸೈನಿಕರನ್ನು ಹಿಡಿದು ಅವರಿಗೆ ಸರಿಯಾದ ಪಾಠ ಕಲಿಸಿದರು. ಜನತೆಯ ಶತ್ರುಗಳ ಮನೆಗಳು ಹಾಗೂ ಆಸ್ತಿಪಾಸ್ತಿಗಳ ಮೇಲೆ ವ್ಯವಸ್ಥಿತ ದಾಳಿ ಮಾಡಿರುವುದು ಈ ಅಂದೋಲನದ ವಿಶೇಷ. ಎಲ್ಲೇ ಆಗಲಿ, ಯಾವುದೇ ಹಳ್ಳಿಯಲ್ಲಾಗಲೀ ಜನತೆಯ ಶತ್ರುಗಳ ಮನೆಯಿದ್ದರೆ ನೂರಾರು ಸಾವಿರಾರು ಜನರು ಒಟ್ಟುಸೇರಿ ತಮ್ಮ ಬದ್ಧವೈರಿಗಳ ಈ ಕೋಟೆಗಳ ಮೇಲೆ ಸಾಗಿದರು.

'ಪೋಲಿಸ್ ಕಾರ್ಯಾಚರಣೆ'ಯ ಸಮಯದಲ್ಲಿ, ಎಲ್ಲಿಯ ತನಕ ರಜಾಕಾರರು ಹಾಗೂ ನಿಜಾಮನ ಸೇನೆಯ ಮೇಲೆ ಭಾರತದ ಸೇನೆಯು ದಾಳಿ ಮಾಡುತ್ತಿರುತ್ತದೋ ಅಲ್ಲಿಯ ತನಕ ಅವರ ಜತೆ ಸಂಘರ್ಷಕ್ಕೆ ಇಳಿಯಬಾರದೆಂದು ಸ್ಥಳೀಯ ಹಾಗೂ ಗೆರಿಲ್ಲಾ ತಂಡಗಳಿಗೆ ಪಕ್ಷ ನಿರ್ದೇಶನ ನೀಡಿತ್ತು. ರಜಾಕಾರರು ಮತ್ತು ನಿಜಾಮನ ಪೋಲಿಸ್ ಶಿಬಿರಗಳ ಮೇಲೆ ಸ್ವತಂತ್ರವಾಗಿ ದಾಳಿ ಮಾಡಿ, ಧ್ವಂಸ ಮಾಡಿ, ಆಯುಧಗಳನ್ನು ವಶಪಡಿಸಿಕೊಂಡು ಆಧುನಿಕ ಶಸ್ತ್ರಾಸ್ತ್ರಗಳೊಂದಿಗೆ ನಮ್ಮ ತಂಡಗಳನ್ನು ಸಜ್ಜುಗೊಳಿಸಿಕೊಳ್ಳಿ ಎಂದು ನಿರ್ದೇಶನ ನೀಡಲಾಗಿತ್ತು; ಕಲವು ವಾರಗಳ ಕಾಲ ಅವಕಾಶಕ್ಕಾಗಿ ಕಾಯಿರಿ, ಅಷ್ಟೊತ್ತಿಗೆ ತೆಲಂಗಾಣ ರೈತರ ಮೇಲೆ ಭಾರತದ ಸಶಸ್ತ್ರ ಪಡೆಗಳು ಮತ್ತು ಜಮೀನ್ದಾರ-ದೇಶಮುಖರ ತಂಡೆಗಳ ದಾಳಿಗಳು ಜನರಲ್ಲಿ ಎಬ್ಬಿಸಿದ್ದ ಭ್ರಮೆಗಳನ್ನು ಮತ್ತು ಭರವಸೆಗಳನ್ನು ನುಚ್ಚುನೂರು ಮಾಡಲಿವೆ ಎಂದು ತಿಳಿಸಲಾಗಿತ್ತು.

ಭಾರತೀಯ ಸೇನೆ ಪ್ರವೇಶ ಮಾಡಿದ ಒಂದು ವಾರದೊಳಗೆ, ದಾಳಿಗಳು ಪ್ರಾರಂಭವಾದವು. ಎಲ್ಲಾ ಗೆರಿಲ್ಲಾ ತಂಡಗಳನ್ನು ಮತ್ತು ಪಕ್ಷವನ್ನು ಧ್ವಂಸ ಮಾಡಲೇಬೇಕೆಂಬ ದೃಢ ನಿಶ್ಚಯ ಮಾಡಿ ದಾಳಿ ಮಾಡಲಾಗಿತ್ತು. ಪಕ್ಷದ ನಾಯಕತ್ವವು ಪದೇ ಪದೇ ನಿರ್ದೇಶನಗಳನ್ನು ನೀಡಿ ಸಶಸ್ತ್ರ ಗೆರಿಲ್ಲಾ ತಂಡಗಳನ್ನು ವಿಸರ್ಜಿಸುವ, ಆಯುಧಗಳನ್ನು ತ್ಯಜಿಸುವ ಘೋಷಣೆಗಳು ಎಷ್ಟು ಅಪಾಯಕಾರಿ ಎನ್ನುವುದನ್ನು ವಿವರಿಸಿ ಹೇಳಿತ್ತು; ಹಾಗೆ ಮಾಡುವ ಮೂಲಕ ಮಿಲಿಟರಿ ಮತ್ತು ಪೋಲಿಸ್ ದಾಳಿ ಹಾಗೂ ಸ್ಥಳೀಯ ಜಮೀನ್ದಾರರ ಮತ್ತು ದೇಶಮುಖರ ದಾಳಿಗಳಿಗೆ ಸುಲಭವಾಗಿ ತುತ್ತಾಗುತ್ತೀರಿ ಎಂದು ಎಚ್ಚರಿಸಿತ್ತು. ಭಾರತೀಯ ಸೇನೆ ದಾಳಿ ಶುರುಮಾಡಿದಾಗ ತಮ್ಮನ್ನು ಹಾಗೂ ಜನರನ್ನು ರಕ್ಷಿಸಿಕೊಳ್ಳಲು ಸಿದ್ಧರಿರಬೇಕು ಎಂದು ಪ್ರೋತ್ಸಾಹದ ಮಾತುಗಳನ್ನು ಹೇಳಿತ್ತು. ಶೋಚನೀಯ ಸಂಗತಿಯೆಂದರೆ, ಪಕ್ಷದ ಹಲವಾರು ತಂಡೆಗಳು ಮತ್ತು ರಾಜಕೀಯ ಸಂಘಟಕರು, ಭಾರತೀಯ ಸೇನೆಯ ಹಸ್ತಕ್ಷೇಪದ ಸ್ವರೂಪದ ಬಗ್ಗೆ ಭ್ರಮೆಗಳನ್ನು ಬೆಳೆಸಿಕೊಂಡು ಆ ದಾಳಿಗಳನ್ನು ಎದುರಿಸುವ ಪರಿಸ್ಥಿತಿಯಲ್ಲಿ ಇರಲಿಲ್ಲ.

ಭಾರತೀಯ ಸೇನೆಯ ಆಗಮನದ ಎರಡು ವಾರಗಳಲ್ಲಿಯೇ, ನಗರಗಳಿಗೆ ಅಥವಾ ಭಾರತೀಯ ಒಕ್ಕೂಟದ ಸೀಮೆಗೆ ಓಡಿಹೋಗಿದ್ದ ದೇಶಮುಖರು ಮತ್ತು ಜಮೀನ್ದಾರರು ತಮ್ಮ ಹಳ್ಳಿಗಳಿಗೆ ಹಿಂತಿರುಗಿದರು, ಮತ್ತು ತಮ್ಮ ಜಮೀನುಗಳನ್ನು ಮತ್ತು ಧಾನ್ಯಗಳನ್ನು ಮತ್ತೆ ವಶಮಾಡಿಕೊಳ್ಳಲು ಅಧಿಕಾರಿಗಳೊಂದಿಗೆ ಕೈಜೋಡಿಸಿದರು. ಸಾವಿರಾರು ಸ್ಥಳೀಯ ಕಾರ್ಯಕರ್ತರನ್ನು, ದೊಡ್ಡ ಸಂಖ್ಯೆಯ ವಲಯ ಹಾಗೂ ಪ್ರಾದೇಶಿಕ ಮುಖಂಡರುಗಳನ್ನು ಬಂಧಿಸಿದರು. ಇನ್ನುಳಿದ ತಂಡಗಳು ಮತ್ತು ಮುಖಂಡರನ್ನು ವ್ಯಾಪಕವಾಗಿ ಜಾಲಾಡಿ ನಿರ್ದಯವಾಗಿ ಬೇಟೆಯಾಡಿದರು ಮತ್ತು ಕೈಗೆ ಸಿಕ್ಕಿದವರನ್ನು ತೀವ್ರ ಹಿಂಸೆಗೆ ಒಳಪಡಿಸಿ ಗುಂಡು ಹೊಡೆದರು. ಸಾಮೂಹಿಕ ಬಂಧನಗಳು ಮತ್ತು ಚಿತ್ರಹಿಂಸೆಗಳು ಬಹುತೇಕ ಹಳ್ಳಿಗಳ ಸಾಮಾನ್ಯ ದೃಶ್ಯಗಳಾದವು.

ನಿಜಾಮನ ದೌರ್ಜನ್ಯಗಳ ವಿರುದ್ಧ ಗಟ್ಟಿಯಾಗಿ ನಿಂತಿದ್ದ ಸಾಮಾನ್ಯ ಮುಸ್ಲಿಮರ ಮೇಲೆ ಏಕಾಏಕಿ ಎರಗಿ ಅವರನ್ನು ಅಪರಿಮಿತ ದುರವಸ್ಥೆಗೆ ನೂಕಿದರು. ಆ ಹಳ್ಳಿಗಳಲ್ಲಿದ್ದ ಹಿಂದೂ ಜನರು ಅಂತಹ ಸಾಮಾನ್ಯ ಮುಸ್ಲಿಮರಿಗೆ ಆಸರೆ ನೀಡಿದರು, ತಮ್ಮ ಮನೆಗಳಲ್ಲಿ ಉಳಿಸಿಕೊಂಡರು. ಹಳ್ಳಿಗಳಲ್ಲಿ ಹಿಂದೂ-ಮುಸ್ಲಿಂ ಐಕ್ಯತೆಯನ್ನು ಸಾಧಿಸಿದ್ದು ತೆಲಂಗಾಣ ಚಳುವಳಿಯ ಅತ್ಯಂತ ದೊಡ್ಡ ಸಾಧನೆಯಾಗಿದೆ. ಹೈದರಾಬಾದ್ ಸಂಸ್ಥಾನದ ಇತರ ಭಾಗಗಳಲ್ಲಿ, ಪ್ರಜಾಸತ್ತಾತ್ಮಕ ಚಳುವಳಿ ದುರ್ಬಲವಾಗಿದ್ದ ಕಡೆಗಳಲ್ಲಿ, ಮುಸ್ಲಿಮರ ವಿರುದ್ಧ ದ್ವೇಷ ಮತ್ತು ದಾಳಿಗಳು ವ್ಯಾಪಕವಾಗಿದ್ದವು.

ದೇಶೀಯ ಸಂಸ್ಥಾನಗಳನ್ನು ಸಂಪೂರ್ಣವಾಗಿ ರದ್ದುಪಡಿಸುವ ಮತ್ತು ಅಕ್ಕಪಕ್ಕದ ಭಾಷಾ ಪ್ರದೇಶಗಳನ್ನು ವಿಲೀನ ಮಾಡುವ ಹಾಗೂ ವಿವಿಧ ರಾಷ್ಟ್ರೀಯತೆಯವರಿಗೆ ಒಂದು ನಿಜವಾದ ಪ್ರಜಾಸತ್ತಾತ್ಮಕ, ಒಕ್ಕೂಟ ವ್ಯವಸ್ಥೆಯನ್ನು ಕಟ್ಟುವ ಆಸಕ್ತಿಯನ್ನು ಕಾಂಗ್ರೆಸ್ ಸರ್ಕಾರ ಹೊಂದಿರಲಿಲ್ಲ. ಜನವರಿ 26, 1950ರಂದು ಭಾರತದ ಸಂವಿಧಾನವನ್ನು ವಿಧ್ಯುಕ್ತವಾಗಿ ಜಾರಿಗೆ ತಂದಾಗ ನಿಜಾಮನನ್ನು ರಾಜಪ್ರಮುಖ ಎಂದು ಘೋಷಿಸಲಾಯಿತು. ಕಾರ್ಯತಃ, ನಿಜಾಮನ ಹಿಂದಿನ ಅಧಿಕಾರಿಗಳಿಗೆ ಯಾರಿಗೂ ಅವರ ಪಾತಕಗಳಿಗೆ ಶಿಕ್ಷೆಯಾಗಲಿಲ್ಲ.

ಮತ್ತೊಂದೆಡೆ, ಹೋರಾಟಗಾರರ ಖೋಟಾ ವಿಚಾರಣೆ ನಡೆಯಿತು ಮತ್ತು ಕೆಲವರಿಗೆ ಮರಣ ದಂಡನೆ ವಿಧಿಸಲಾಯಿತು. ಹಲವಾರು ಸಂಗಾತಿಗಳನ್ನು ಜೈಲಿನಿಂದ ಹೊರ ಕರೆತಂದು ಕಾಡುಗಳಲ್ಲಿ ಮತ್ತು ಬೆಟ್ಟಗಳಲ್ಲಿ ಗುಂಡು ಹೊಡೆದು ಸಾಯಿಸಲಾಯಿತು. ಭಾರತದ ಹೊಸ ಸಂವಿಧಾನ ಜಾರಿಗೆ ಬರುವ ಮೊದಲೇ ತೆಲಂಗಾಣ ಹೋರಾಟಗಾರರನ್ನು ಮರಣ ದಂಡನೆ ನೀಡಿ ಗುಪ್ತವಾಗಿ ಮುಗಿಸುವ ತರಾತುರಿಯಲ್ಲಿ ಭಾರತ ಸರ್ಕಾರ ಇತ್ತು. 12 ಮಂದಿ ತೆಲಂಗಾಣ ವೀರ ಯೋಧರಿಗೆ ಅವರು ಮರಣ ದಂಡನೆ ನೀಡಿದರು. ಪಾಲ್ ರಾಬ್ಸನ್ ನಂತಹ ಅನೇಕ ಸುಪ್ರಸಿದ್ಧ ಜಾಗತಿಕ ಗಣ್ಯರು ಮತ್ತು ಪ್ರಜಾಸತ್ತಾತ್ಮಕ ಸಂಘಟನೆಗಳು ಈ ಶಿಕ್ಷೆಯನ್ನು ಖಂಡಿಸಿದರು. ತೆಲಂಗಾಣ ವೀರ ಯೋಧರ ರಕ್ಷಣಾ ಸಮಿತಿಯನ್ನು ರಚಿಸಲಾಯಿತು. ಈ ಪ್ರತಿಭಟನೆಗಳು ಮತ್ತು ಖಂಡನೆಗಳ ಮಹಾಪೂರದಿಂದಾಗಿ ಸರ್ಕಾರವು ಅವರ ಮರಣ ದಂಡನೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಮಾರ್ಪಾಟು ಮಾಡುವಂತೆ ಮಾಡಿತು.

ಈ ಹಂತದಲ್ಲಿ ಪಕ್ಷವು ಎದುರಿಸಿದ ಕೆಲವು ಪ್ರಶ್ನೆಗಳು ಇಂತಿವೆ: ರೈತರ ಭೂಮಿ ಮತ್ತು ಇತರ ಪ್ರಜಾಸತ್ತಾತ್ಮಕ ಪ್ರಯೋಜನಗಳನ್ನು ರಕ್ಷಿಸಲು ಭಾರತೀಯ ಸಶಸ್ತ್ರ ಸೇನೆಯ ದಾಳಿಯ ವಿರುದ್ಧ ಸಶಸ್ತ್ರ ಗೆರಿಲ್ಲಾ ದಾಳಿಯನ್ನು ಮುಂದುವರಿಸಬೇಕೆ, ಅಥವಾ ತೆಲಂಗಾಣದ ರೈತ ಹೋರಾಟಗಾರರು ಪಕ್ಷದ ಮೇಲೆ ಇರಿಸಿರುವ ಅದಮ್ಯ ನಂಬಿಕೆಗೆ ದ್ರೋಹ ಎಸಗಿ ಕಾಂಗ್ರೆಸ್ ಸರ್ಕಾರದ ಸೇನೆಗೆ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿ ಶರಣಾಗಬೇಕೆ? ಪಕ್ಷಪಾತಿ(partisan) ಸಶಸ್ತ್ರ ಪ್ರತಿರೋಧವನ್ನು ತೊರೆದು ಕಾಂಗ್ರೆಸ್ ಸರ್ಕಾರದ ಮಿಲಿಟರಿ ಆಡಳಿತದ ಅನುಮತಿಸುವ ಕಾನೂನು ಸ್ವರೂಪದ ಹೋರಾಟವನ್ನು ಅಳವಡಿಸಿಕೊಳ್ಳಬೇಕೆ? ಸಶಸ್ತ್ರ ಹಸ್ತಕ್ಷೇಪವಾದ ನಂತರದಲ್ಲಿ ಕೂಡಲೇ ನಿರುಪಾಯರಾಗಿ ಹೋರಾಟವನ್ನು ಹಿಂತೆಗೆದುಕೊಂಡರೆ, ಭಾರತ ಸರ್ಕಾರವು ಸಾವಿರಾರು ಗೆರಿಲ್ಲಾ ತಂಡಗಳು, ಕಾರ್ಯಕರ್ತರು ಮತ್ತು ಪಕ್ಷದ ಸದಸ್ಯರಿಗೆ ಸಾರ್ವತ್ರಿಕ ಕ್ಷಮಾದಾನ ಘೋಷಿಸುತ್ತದೆಯೇ?

ಈ ಪ್ರಶ್ನೆಗಳ ಮೇಲೆ ತೀಕ್ಷ್ಣವಾದ ಎರಡು ತದ್ವಿರುದ್ಧ ಅಭಿಪ್ರಾಯಗಳು ಹೊರಹೊಮ್ಮಿದವು. ಸಂಗಾತಿಗಳ ಒಂದು ವಿಭಾಗವು ಪಕ್ಷಪಾತಿ ಸಶಸ್ತ್ರ ಪ್ರತಿರೋಧವನ್ನು ತೊರೆದು ಕಾಂಗ್ರೆಸ್ ಸರ್ಕಾರದ ಮಿಲಿಟರಿ ಆಡಳಿತದ ಅನುಮತಿಯಿರುವ ಕಾನೂನು ಸ್ವರೂಪದ ಬಹಿರಂಗ ಹೋರಾಟವನ್ನು ಅಳವಡಿಸಿಕೊಳ್ಳಬೇಕೆಂದು ಪ್ರತಿಪಾದಿಸಿತು. ವಿಶಾಲಾಂಧ್ರ ಪಕ್ಷದ ಸಮಿತಿಯು ಈ ಅಭಿಪ್ರಾಯವನ್ನು ವಿರೋಧಿಸಿತು ಮತ್ತು ತೆಲಂಗಾಣ ರೈತರ ಸಾಧನೆಯನ್ನು ಕಾಪಾಡಿಕೊಳ್ಳಲು ಭಾರತೀಯ ಸಶಸ್ತ್ರ ಸೇನೆಯ ದಾಳಿಯ ವಿರುದ್ಧ ಪಕ್ಷಪಾತಿ ಸಶಸ್ತ್ರ ಪ್ರತಿರೋಧವನ್ನು ಮುಂದುವರಿಸಬೇಕೆಂದು ಪ್ರತಿಪಾದಿಸಿತು. ಹೋರಾಟವನ್ನು ಹಿಂಪಡೆಯುವುದೆಂದರೆ ರೈತರ ಹೋರಾಟಕ್ಕೆ ದ್ರೋಹ ಬಗೆದಂತಾಗುತ್ತದೆ ಮತ್ತು ಅದು ತೆಲಂಗಾಣ ಜನರ ಚಳುವಳಿಗೆ ಸರಿಪಡಿಸಲಾಗದಂತಹ ಆಘಾತವನ್ನು ಉಂಟುಮಾಡುತ್ತದೆ ಎಂದು ಅವರು ಭಾವಿಸಿದರು.


ಬದ್ಧವೈರಿಗಳಾದ ದೇಶಮುಖರು ಮತ್ತು ಜಮೀನ್ದಾರರ ಪುನರಾಗಮನ ಮತ್ತು ರೈತರ ಜಮೀನುಗಳನ್ನು ಮರುವಶ ಮಾಡಿಕೊಳ್ಳುವ ಅವರ ಕೋಪಾವೇಶದ ಪ್ರಯತ್ನಗಳು ಹಾಗೂ ಅವರು ಹರಿಬಿಟ್ಟ ಭಯೋತ್ಪಾದನೆಗಳು ಪಕ್ಷದ ಕಾರ್ಯಕರ್ತರ ಕೋಪವನ್ನು ಕೆರಳಿಸಿದವು. ಸಶಸ್ತ್ರ ಗೆರಿಲ್ಲಾ ಪ್ರತಿರೋಧವನ್ನು ಮುಂದುವರಿಸಬೇಕೆಂಬ ನಿಲುವು ಅಂತಿಮವಾಗಿ ಮೇಲುಗೈ ಪಡೆಯಿತು. ಕೇಂದ್ರ ಸರ್ಕಾರದ ಮಿಲಿಟರಿ ಮತ್ತು ಪೋಲಿಸ್ ದಾಳಿಗಳ ವಿರುದ್ಧ ಪ್ರತಿರೋಧ ಮಾಡಲು ಪಕ್ಷದ ಕಾರ್ಯಕರ್ತರು ತಮ್ಮತಮ್ಮಲ್ಲೇ ಪುನರ್ಸಂಘಟಿತರಾಗಿ ತಂಡಗಳನ್ನು ಕಟ್ಟಿದರು.

ಕೇಂದ್ರ ಸರ್ಕಾರದ ಅತ್ಯಂತ ಸುಸಜ್ಜಿತ ಸೇನೆಗಳ ವಿರುದ್ಧದ ಅಸಮಾನ ಹೋರಾಟದಲ್ಲಿ ಪಕ್ಷಕ್ಕೆ ಸೇರಿದ ಸಶಸ್ತ್ರ ಪಕ್ಷಪಾತಿಗಳು ತಮ್ಮ ರಕ್ತವನ್ನು ಹರಿಸಿದರು. ಕಾಂಗ್ರೆಸ್ ಸರ್ಕಾರವು 50,000 ಸಶಸ್ತ್ರ ಸೇನೆಯನ್ನು ಸಜ್ಜುಗೊಳಿಸಿದ್ದಾಗ್ಯೂ ಮತ್ತು ವರ್ಷಕ್ಕೆ ಹತ್ತರಿಂದ ಹದಿನೈದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾಗ್ಯೂ ಪಕ್ಷದ ಕಾರ್ಯಕರ್ತರ ಸಾವನ್ನೇ ಧಿಕ್ಕರಿಸುವ ಕೆಚ್ಚಿನಿಂದಾಗಿ ಪ್ರತಿರೋಧವನ್ನು ಹಿಮ್ಮೆಟ್ಟಿಸಲಾಗಲಿಲ್ಲ.

ಒಂದು ಕಡೆಯಲ್ಲಿ ಹೋರಾಡುತ್ತಿರುವ ಸಾಮಾನ್ಯ ಜನರ ಒತ್ತಡ, ಹಾಗೂ ಮತ್ತೊಂದೆಡೆ ಪಕ್ಷದ ಆಂಧ್ರಾ ಜಿಲ್ಲೆಗಳಲ್ಲಿ ಹರಿಬಿಡಲಾದ ಭೀಕರ ದಬ್ಬಾಳಿಕೆಯ ಪ್ರಚೋದನೆ, ಇವೆರಡರಿಂದಾಗಿ ತೆಲಂಗಾಣ ಸಶಸ್ತ್ರ ಹೋರಾಟದ ನಾಯಕತ್ವವು ಸಶಸ್ತ್ರ ಗೆರಿಲ್ಲಾ ಪ್ರತಿರೋಧವನ್ನು ಬೇರೆ ಪ್ರದೇಶಗಳಿಗೆ ವಿಸ್ತರಿಸಲು ಯತ್ನಿಸಿತು. ಆದರೆ ಅದು ಸಫಲವಾಗಲಿಲ್ಲ ಮತ್ತು ಸಶಸ್ತ್ರ ಪೋಲಿಸರು ಹಾಗೂ ಜಮೀನ್ದಾರರ ಗೂಂಡಾಗಳು ಕಮ್ಯುನಿಸ್ಟ್ ಕಾರ್ಯಕರ್ತರ ಮೇಲೆ ಭೀಕರ ಮಾರಣಾಂತಿಕ ದಾಳಿಗಳನ್ನು ಮಾಡಿದರು. ಈ ಹಿನ್ನೆಲೆಯಲ್ಲಿ, ಪಕ್ಷದ ಹಲವಾರು ಸಮರಶೀಲ ಕಾರ್ಯಕರ್ತರನ್ನು ಕಾಡು ಪ್ರದೇಶಗಳಿಗೆ ಅಥವಾ ಇತರ ರಾಜ್ಯಗಳ ದೂರದ ಸ್ಥಳಗಳಿಗೆ ಸ್ಥಳಾಂತರ ಮಾಡಲಾಯಿತು. ಪರಿಣಾಮವಾಗಿ, ಪಕ್ಷದ ಸಂಘಟನೆಯು ಪಲ್ಲಟಗೊಂಡಿತು ಮತ್ತು ನಾಯಕತ್ವದ ಮುಂದೆ 'ಮುಂದೇನು' ಎಂಬ ಪ್ರಶ್ನೆ ಎದುರಾಯಿತು.

1948ರಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ ಎರಡನೇ ಮಹಾಧಿವೇಶನವು "ತೆಲಂಗಾಣ ದಾರಿ ನಮ್ಮ ದಾರಿ" ಎಂಬ ಘೋಷಣೆ ನೀಡಿತು. ತೆಲಂಗಾಣ ಸಶಸ್ತ್ರ ಹೋರಾಟಕ್ಕೆ ಸಂಪೂರ್ಣ ಬೆಂಬಲ ಘೋಷಿಸಿತು; ಇದೇ ರೀತಿಯ ಹೋರಾಟಗಳನ್ನು ದೇಶದ ಇತರ ಭಾಗಗಳಲ್ಲಿಯೂ ಬೆಳೆಸಬೇಕು ಮತ್ತು ತೆಲಾಂಗಾಣ ಹೋರಾಟಕ್ಕೆ ಬೆಂಬಲವಾಗಿ ಕಾರ್ಮಿಕ ವರ್ಗದ ಚಳುವಳಿಯನ್ನು ಕಟ್ಟಬೇಕು – ಎಲ್ಲವೂ ಒಟ್ಟುಗೂಡಿ ಸಶಸ್ತ್ರ ದಂಗೆ ಆಗುವಂತಾಗಬೇಕು ಎಂದು ಪಕ್ಷ ಕರೆ ನೀಡಿತು.

ಪುಟ 14 ನೋಡಿ



ಭಾರತದ ಗೃಹಮಂತ್ರಿ ಸರ್ದಾರ್ ಪಟೇಲರನ್ನು ಸ್ವಾಗತಿಸುತ್ತಿರುವ ಹೈದರಾಬಾದ್ ನಿಜಾಮ

ಗುಜರಾತ್ ಮಾದರಿ ಎಂಬ ಮಿಥ್ಯೆಯ ಅಂತಃಸ್ಫೋಟ

'ನಮಸ್ತೆ ಟ್ರಂಪ್' ಕಾಲದ ಗೋಡೆಯ ನಂತರ ಕೊರೊನ ಕಾಲದ ಅದಕ್ಷತೆ, ವಿಫಲತೆ, ರಾಜಧಾನಿ ಅಹಮದಾಬಾದ್‌ನ ಸರ್ಕಾರಿ ಆಸ್ಪತ್ರೆ ಕತ್ತಲ ಕೂಪ ಎಂಬ ಗುಜರಾತ್ ಹೈಕೋರ್ಟಿನ ತೀಕ್ಷ್ಣ ಟಿಪ್ಪಣಿ ಮತ್ತು ಆ ಟಿಪ್ಪಣಿ ಮಾಡಿದ ಪೀಠದ ಬದಲಾವಣೆ–ಗುಜರಾತ್ ಮಾದರಿಯ ನಿಜ ಹೂರಣವನ್ನು ತೆರೆದಿಟ್ಟಿದೆ. ಜತೆಗೆ ಕೊಸರ ಮತ್ತು ಅಂಬು ಬ್ಯಾಗ್ ಹಗರಣಗಳ ಛಾಯೆ. ಎಲ್ಲಕ್ಕೂ ಮಿಗಿಲಾಗಿ ವಲಸೆ ಕಾರ್ಮಿಕರ ದಾರುಣ ಅವಸ್ಥೆ ಇದನ್ನು ಒಳಗಿನಿಂದಲೇ ಸ್ಫೋಟಗೊಳಿಸಿದೆ.

ನೀಲೋತ್ಪಲ ಬಸು ಸಂಗ್ರಹ–ಅನುವಾದ: ಜಿ.ಎಸ್.ಮಣಿ



ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದು

ಕೋರೋನ ಮಹಾಮಾರಿ ದೇಶದಾದ್ಯಂತ ಹರಡಿ ಸಾವಿರ ಸಾವಿರ ಜನರನ್ನು ಕೊಂಡೊಯ್ಯುತ್ತಿರುವಾಗ ಪ್ರಧಾನ ಮಂತ್ರಿಗಳು ತಮ್ಮ 'ಮನ್ ಕಿ ಬಾತ್'ನಲ್ಲಿ ಅಂಕಿ ಸಂಖ್ಯೆಗಳನ್ನು ಕೊಡುತ್ತಾ ಇರುವಾಗ ಅವರು ಕಲ್ಪನಾ ಲೋಕದಲ್ಲಿ ಇರುವಂತೆ ಅನಸುತ್ತದೆ. ಒಂದು ಕಡೆ ಕೋರೋನ ತಡೆವ/ ನಭಾಯಿಸುವ ಕಾರ್ಯ ತಂತ್ರಗಳ ತೀವ್ರ ಕೊರತೆ ಎದ್ದು ಕಾಣುತ್ತಿರುವಂತೆ ಆರ್ಥಿಕ ಡೋಲಾಯಮಾನವಾಗಿರುವುದು ಕಣ್ಣಿಗೆ ರಾಚುತ್ತಿದೆ.

ಸುಪ್ರೀಂ ಕೋರ್ಟಿನ ತೀಕ್ಷ್ಣ ಪರಿಶೀಲನೆಗೆ ಒಳಗಾದಾಗ ಸರ್ಕಾರದ ಹೀನ ವೈಫಲ್ಯ ಬೆಳಕಿಗೆ ಬಂತು. ಇಂಡಿಯನ್ ಎಕ್ಸ್‌ಪ್ರೆಸ್‌ನ ಸಂಪಾದಕೀಯ ಇದನ್ನು ಹೀಗೆ ಕರಾರುವಾಕ್ಕಾಗಿ ದಾಖಲಿಸಿದೆ: "ದೇಶದ ಅತ್ಯುಚ್ಚ ನ್ಯಾಯಾಲಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ವಲಸೆ ಕಾರ್ಮಿಕರ ಪರಿಸ್ಥಿತಿಗಳ ಬಗ್ಗೆ ಪ್ರಶ್ನಿಸಿದಾಗ ಸರ್ಕಾರಿ ವಕೀಲರು ಕೀಳು ಪಕ್ಷಪಾತ ಮೆರೆಯುತ್ತ ವಲಸೆ ಕಾರ್ಮಿಕರ ದುರಂತ ಪರಿಸ್ಥಿತಿಯ ಬಗೆಗೆ ಕೋರ್ಟಿನಲ್ಲಿ ಪ್ರಶ್ನಿಸಿದವರ ಪ್ರಾಮಾಣಿಕತೆ ಮತ್ತು ಕಾಳಜಿಯನ್ನು ಸಂದೇಹಿಸುವ ದುಸ್ಸಾಹಸ ಮಾಡುತ್ತಾರೆ. ಮೆಹ್ತ ಎಂಬ ಸರ್ಕಾರಿ ವಕೀಲರ ಪ್ರಕಾರ ಅವರು 'ದುರಂತದ ಪ್ರವಾದಿಗಳು' ಮತ್ತು ಸದಾ ನಕಾರಾತ್ಮಕತೆಯನ್ನು ಹರಡುವವರು. ಅಲ್ಲದೆ ಅವರು ದೇಶದ ಬಗೆಗೆ ಕನಿಷ್ಠ ಕಾಳಜಿಯನ್ನೂ ತೋರದವರು." ಇದಕ್ಕೆ ವ್ಯತಿರಿಕ್ತವಾಗಿ ಹಗಲೂ ರಾತ್ರಿ ಕೆಲಸ ಮಾಡುವ ಮಂತ್ರಿ ಮಹೋದಯರನ್ನು ಅವರು ಹೋಲಿಸಿದರು.

ಏನೇ ಇರಲಿ. ಜಾಗತಿಕವಾಗಿ ಈ ಮಹಾಮಾರಿ ಹರಡುತ್ತಿರುವುದರಲ್ಲಿ ಒಂದು ವಿಧಾನ ಇದ್ದು ಅದು ಜನರನ್ನು ಸಾಯಿಸುತ್ತಾ ಜಗತ್ತಿನ ಆರ್ಥಿಕಗಳನ್ನು ಹಿಂಜರಿತದ ತೆಕ್ಕೆಗೆ ತಳ್ಳುತ್ತಾ ಬಂಡವಾಳಶಾಹಿ ವ್ಯವಸ್ಥೆಗಳನ್ನು ಬಯಲು ಮಾಡುತ್ತಿದೆ.

ಜಗತ್‌ಪ್ರಸಿದ್ಧ ಚಿಂತಕ ನೋಮ್ ಚೋಮ್ಸ್ಕಿ ಅವರು ಈ ಬಗ್ಗೆ ಪ್ರಖರವಾಗಿ ಹೇಳಿದ್ದಾರೆ "ವಿಜ್ಞಾನಿಗಳು ಇಂತಹ ಒಂದು ಮಹಾಮಾರಿ ಬರುವ ಸಾಧ್ಯತೆಯ ಬಗ್ಗೆ ವರ್ಷಗಳಿಂದ ಹೇಳುತ್ತಲೇ ಬಂದಿದ್ದಾರೆ. 2003 ರ ಸಾರ್ಸ್ ವೈರಸ್ ಗೆ ಲಸಿಕೆ ಅಭಿವೃದ್ಧಿ ಪಡಿಸಿದರೂ ಅದು ಕ್ಲಿನಿಕಲ್ ಪೂರ್ವದ ಮಟ್ಟಕ್ಕಿಂತ ಮುಂದಕ್ಕೆ ಹೋಗಲೇ ಇಲ್ಲ. ಕ್ಷಿಪ್ರ ತಡೆ ಕಾರ್ಯಾಚರಣೆಯ ತಯಾರಿಗಳನ್ನು ಮಾಡಿ ಅದಕ್ಕೆ ತಕ್ಕ ಸಾಮರ್ಥ್ಯಗಳನ್ನು ಅಭಿವೃದ್ಧಿ ಪಡಿಸಲು ಅದು ಅತ್ಯಂತ ಸೂಕ್ತ ಸಮಯವಾಗಿತ್ತು. ಇಂತಹ ವೈರಸ್ ಕಾಯಿಲೆಗೆ ಶುಶ್ರೂಷೆ ಮಾಡುವ/ ವೈರಸ್ ವಿರುದ್ಧ ಹೋರಾಟದ ರೂಪು ರೇಷೆಗಳನ್ನು ಹೆಣೆಯಬೇಕಾಗಿತ್ತು. ವೈಜ್ಞಾನಿಕ ತಿಳುವಳಿಕೆ ಅಷ್ಟೇ ಸಾಲದು ಅದನ್ನು ಸರಿಯಾಗಿ ನಿಭಾಯಿಸುವ ಕ್ಷಮತೆ ಬೇಕು. ಆದರೆ ಇದು ಸಾಧ್ಯವಾಗಲು ಸಾಮಾಜಿಕ ವೈರಸ್‌ನ ತಡೆ ಇತ್ತು. ಅದೇನು? ಮಾರುಕಟ್ಟೆ ಆರ್ಥಿಕದಲ್ಲಿ ಮಾರುಕಟ್ಟೆ ಸಂಜ್ಞೆಗಳು ಸ್ಪಷ್ಟವಾಗಿದ್ದವು. 'ಮುಂಬರುವ ದುರಂತ ತಡೆಯುವುದರಲ್ಲಿ ಯಾವುದೇ ಲಾಭವಿಲ್ಲ'. ಸರ್ಕಾರಗಳು ಮಧ್ಯ ಪ್ರವೇಶ ಮಾಡಬಹುದಾಗಿತ್ತು ಆದರೆ ಈಗಿನ ಸಿದ್ಧಾಂತದ ಪ್ರಕಾರ "ಸರ್ಕಾರವೇ ಸಮಸ್ಯೆ"!



ಇದು ಕ್ವಾರಂಟೈನ್ ಕೇಂದ್ರವಲ್ಲ, ಎಂಎಲ್‌ಎ ಕ್ಯಾಂಪ್!
ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಗುಜರಾತನ್ನು ಅರ್ಥ ಮಾಡಿಕೊಳ್ಳುವ ಅವಶ್ಯಕತೆ

ಚೋಮ್‌ಸ್ಕಿ ಅವರ ಮಾತು ನೂರಕ್ಕೆ ನೂರರಷ್ಟು ಸತ್ಯವಾಗಿದೆ. ಈ ದುರಂತದ ಹಿಂದೆ ಮೂರು ಮುಖ್ಯ ಅಂಶಗಳಿವೆ. ಮೊದಲನೆಯದಾಗಿ ಕಟ್ಟಾ ನವ ಉದಾರವಾದಿ ಆರ್ಥಿಕ ಒತ್ತು ಲಾಭದ ಮೇಲೆ ಇರುತ್ತದೆ. ಆದ್ದರಿಂದ ಅದು ಆರೋಗ್ಯ ದುರಂತ ತಡೆಯಲು ಸೂಕ್ತವಲ್ಲ. ಎರಡನೇಯದಾಗಿ, ಇಂತಹ ನೀತಿಯಿಂದ ಬಡತನ ಮತ್ತು ಅಸಮಾನತೆ ಹೆಚ್ಚಿ ಬಡವರು ರೋಗಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚಾಗಿದೆ. ಮೂರನೇಯದಾಗಿ, ವೈಜ್ಞಾನಿಕ ಮನೋಭಾವ ತೊಡೆದು ಮೂಢನಂಬಿಕೆಗಳನ್ನು ಬೆಳೆಸಿರುವಾಗ ಜನ ರೋಗಕ್ಕೆ ಅವೈಜ್ಞಾನಿಕ ಪ್ರತಿಕ್ರಿಯೆ ತೋರುವ ಅನಿವಾರ್ಯಕ್ಕೆ ಒಳಗಾಗುತ್ತಾರೆ. ಚೋಮ್ಸ್‌ಕಿ ಈ ಮಹಾಮಾರಿಗೆ ಫಲವತ್ತಾದ ಜಾಗಗಳೆಂದರೆ ಅಮೆರಿಕ, ಬದರಿಟನ್ ಮತ್ತು ಬ್ರೆಝಿಲ್, ಮತ್ತು ಇತ್ತೀಚಿನ ಮಾಹಿತಿಗಳ ಪ್ರಕಾರ ಭಾರತ. ಮತ್ತು ಒಳಗೆ ಗುಜರಾತ್ ಒಂದು ಉಗ್ರ ಉದಾಹರಣೆಯಾಗಿ ಮೂಡಿ ಬಂದಿದೆ. ಇದರ ಕಾಕತಾಳೀಯವಲ್ಲ.

ಕಳೆದ ಎರಡು ದಶಕಗಳಲ್ಲಿ ಗುಜರಾತ ಮಾದರಿ ಎಂದು ಬಿಂಬಿಸಿದ್ದು ಎಂದೂ ಒಂದು ಮಾದರಿಯಾಗಿರಲಿಲ್ಲ, ಕಾರ್ಪೊರೇಟ್ ಪ್ರಾಯೋಜಿತ ಪ್ರಚಾರವಾಗಿತ್ತಷ್ಟೇ. ಕಂಪನಗಳ ಜತೆ ಹಲವು ಒಪ್ಪಂದಗಳನ್ನು ಮಾಡಿಕೊಳ್ಳಲಾಗಿತ್ತು. ಅಬ್ಬರದ ಪ್ರಚಾರದ ನಡುವೆ ಸಾಮಾನ್ಯ ಜನರಿಗೇನಾಯಿತು ಎಂಬುದು ಮುಚ್ಚಿಹೋಗಿತ್ತು. ನಜವೇನೆಂದರೆ, ಗುಜರಾತಿನಲ್ಲಿ ಸಾವಿರ ಜನಸಂಖ್ಯೆಗೆ 0.33 ಆಸ್ಪತ್ರೆ ಹಾಸಿಗೆಗಳಿವೆ. ದೇಶದ ಸರಾಸರಿ 0.55 ಹಾಸಿಗೆಗಳು. ಆರೋಗ್ಯದ ವಿಷಯದಲ್ಲಿ ತಲಾ ಖರ್ಚು ಕಡಿಮೆಯೇ. ಶಿಶು ಸಾವು ಅತೀ ದೊಡ್ಡ ಪ್ರಮಾಣದಲ್ಲಿದೆ. ದೊಡ್ಡ ಸಂಖ್ಯೆಯಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ಖಾಸಗೀಕರಿಸಲಾಗಿದೆ.

ಪ್ರಬಲ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಇಲ್ಲದಿರುವುದೊಂದೇ ಅಲ್ಲ. ಶಿಕ್ಷಣದಲ್ಲಿನ ಹೂಡಿಕೆಯೂ ಕಡಿಮೆಯಾಗಿದೆ. ಈ ಕ್ಷೇತ್ರದಲ್ಲಿ ರಾಜ್ಯದ ಆದಾಯದ ಶೇ 2 ಕ್ಕಿಂತ ಕಡಿಮೆ ಹೂಡಿಕೆ ಆಗುತ್ತಿದೆ. ಇದಕ್ಕೆ ತಕ್ಕಂತೆ ರಾಜ್ಯದ ದುಡಿವ ಜನತೆಯ ಶೇ 45 ರಷ್ಟು ಜನ ಅನಕ್ಷರಸ್ತರು ಅಥವಾ 5ನೇ ಇಯತ್ತೆಗಿಂತ ಕಡಿಮೆ ಓದಿದವರು. ಉಚ್ಚ ಶಿಕ್ಷಣದ ಗುಣಮಟ್ಟ ಕಡಿಮೆ ಇರುವುದರಿಂದ ಇಂಜಿನೀರಿಂಗ್ ಮತ್ತು ಇತರೆ ವಿಜ್ಞಾನ ಕ್ಷೇತ್ರಗಳಲ್ಲಿ ನರುದ್ಯೋಗದ ಸಮಸ್ಯೆಯೂ ತೀವ್ರವಾಗಿದೆ. ಅಬ್ಬರದ ಪ್ರಚಾರದ ನಡುವೆ ಅತ್ಯಂತ ಕಡಿಮೆ ಕೂಲಿ ನೀಡುವ ಪ್ರಮುಖ ರಾಜ್ಯಗಳಲ್ಲಿ ಗುಜರಾತ್ ಸಹ ಒಂದು ಎಂಬುದು ಮುಚ್ಚಿ ಹೋಗಿದೆ.

ರಾಜಕೀಯ ಮತ್ತು ಆಡಳಿತಾತ್ಮಕ ದೋಷರೇಖೆಗಳು

ಕೋವಿಡ್ ನಂತಹ ಮಹಾಮಾರಿಯುನ್ನು ಎದುರಿಸಿ ತಡೆವ ತಯಾರಿ ಭಾರತದಲ್ಲಿ ಇರಲಿಲ್ಲ ಎಂಬುದು ಸಾಮಾನ್ಯವಾಗಿ ಗೊತ್ತಿರುವ ವಿಷಯ. ಇದಕ್ಕಿಂತ ಪ್ರಮುಖವಾಗಿ ರಾಜಕೀಯ ಆದ್ಯತೆಗಳೂ ಹಾಗೇ ಇದ್ದವು ಎಂಬುದು ಗಮನಸಬೇಕಾದ ವಿಷಯ. ಫೆಬ್ರುವರಿ 23–24 ಎರಡು ದಿನ ಅಮೆರಿಕದ ಅಧ್ಯಕ್ಷರ ಭಾರತ ಭೇಟಿಯ ತಯಾರಿಗಳಿದ್ದವು. ಗುಜರಾತಿನ ಹಿಂದುತ್ವ ಪ್ರಯೋಗಾಲಯದಲ್ಲಿ ಬೆಳೆದ, ಪಕ್ವಗೊಂಡ ಉನ್ನತ ಮುಖಂಡತ್ವ ಅತ್ಯಂತ ಕೇಂದ್ರೀಕೃತ ಆಡಳಿತವನ್ನು, ಆರ್ಥಿಕ ಅಸಮಾನತೆ ಮತ್ತು ವಿಚ್ಛಿದ್ರಕಾರತೆಯನ್ನು ಪ್ರೋತ್ಸಾಹಿಸುವ ಆಡಳಿತ ಯಂತ್ರವನ್ನು ಹುಟ್ಟು ಹಾಕಿತ್ತು. ಆದ್ದರಿಂದ ಕೋವಿಡ್ ಮಹಾಮಾರಿಯತ್ತ ಗಮನ ಹರಿಸುವ ವ್ಯವಧಾನ ಅಧಿಕಾರದಲ್ಲಿರುವವರಿಗೆ ಇರಲಿಲ್ಲ. ಟ್ರಂಪ್ ಭೇಟಿ ಮುಗಿಯುವ ಮೊದಲೇ ದೆಹಲಿಯಲ್ಲಿ ಕೋಮು ಗಲಭೆ ತಾರಕಕ್ಕೆ ತಲುಪಿತ್ತು. ಮಧ್ಯ ಪ್ರದೇಶದ ಸರ್ಕಾರ ಬೀಳಿಸಲು ಸಮಯವಿದ್ದವರಿಗೆ ರಾಷ್ಟ್ರೀಯ ಆರೋಗ್ಯ ತುರ್ತು ಪರಿಸ್ಥಿತಿಯತ್ತ ಗಮನ ಹರಿಸುವ ಮನೋಭೂಮಿಕೆ ಇರಲಿಲ್ಲ. ಗುಜರಾತ್‌ನ ಒಂದು ರಾಜ್ಯಸಭೆ ಸೀಟು ಗೆಲ್ಲುವ ಹುನ್ನಾರ ಮಾಡಲು ಸಮಯವಿದ್ದವರಿಗೆ ದೇಶದ ಸಾರ್ವಜನಿಕ ಆರೋಗ್ಯದ ತುರ್ತು ಪರಿಸ್ಥಿತಿಯತ್ತ ನೋಡಲೂ ಸಮಯವಿರಲಿಲ್ಲ. ದೇಶದಲ್ಲಿನ ಬಡತನ ಮುಚ್ಚಲು ಪರದೆಯಂತಹ ತಡೆ ಗೋಡೆ ಕಟ್ಟಿದವರಿಗೆ ಜನರ ಆರೋಗ್ಯ ಕಾಪಾಡಲು ಬೇಕಾದ ವಿವಿಧ ಇಲಾಖೆಗಳ ಸಮನ್ವಯ ಇತ್ಯಾದಿ ಸಾಧಿಸಲು ಪುರುಸೊತ್ತಿರಲಿಲ್ಲ.

'ನಮಸ್ತೆ ಟ್ರಂಪ್' ಕಾರ್ಯಕ್ರಮಕ್ಕೆ ಸುಮಾರು 6000 ಅನಿವಾಸಿ ಭಾರತೀಯರು ಬಂದಿದ್ದರೆಂದು ಅಂದಾಜಿಸಲಾಗಿದೆ. ಇವರ ಆರೋಗ್ಯ ತಪಾಸಣೆ ಮಾಡುವ ವ್ಯವಸ್ಥೆ ಇರಲಿಲ್ಲ. ದೊಡ್ಡ ಸಂಖ್ಯೆಯಲ್ಲಿರುವ ಖಾಸಗಿ ಆಸ್ಪತ್ರೆಗಳು ಈ ವಿಷಯದಲ್ಲಿ ಸರ್ಕಾರದ ಜೊತೆ ಸಹಕರಿಸಲಿಲ್ಲ. ಯಾಕೆ? ಅದರಲ್ಲಿ ಲಾಭವಿಲ್ಲ. ಸಾಂಕ್ರಾಮಿಕ ರೋಗವೇ ಇಲ್ಲ ಎಂದ ಸರ್ಕಾರ ತನ್ನ ಅಧಿಕಾರ ಬಳಸಿ ಖಾಸಗಿ ಆಸ್ಪತ್ರೆಗಳನ್ನು ಕೆಲಸಕ್ಕೆ ಇಳಿಸುವ ಸಾಹಸ ಮಾಡಲಿಲ್ಲ. ರೋಗ ಪರೀಕ್ಷೆ ಬಹಳ ಕಡಿಮೆ ಪ್ರಮಾಣದಲ್ಲಿ ನಡೆಯಿತು. ಆರೋಗ್ಯ ಕಾರ್ಯಕರ್ತರಿಗೆ ಸುರಕ್ಷಾ ಕವಚಗಳ ಲಭ್ಯತೆ ಇರಲಿಲ್ಲ.

ಗುಜರಾತ್ ಹೈಕೋರ್ಟಿನ ತೀಕ್ಷ್ಣ ಆಜ್ಞೆ ಕೋರೋನ ಪಿಡುಗು ನಿರ್ವಹಣೆಯಲ್ಲಿನ ಅಸ್ತವ್ಯಸ್ತತೆಯನ್ನು ಹೊರಗೆಳೆಯಿತು. ಅಹಮದಾಬಾದ್‌ನ ಸರ್ಕಾರಿ ಆಸ್ಪತ್ರೆಯಲ್ಲಿನ ಅವ್ಯವಸ್ಥೆ ಬಹಿರಂಗಗೊಂಡಿತು. ಸರ್ಕಾರ ಕೃತ್ರಿಮವಾಗಿ ಪರಿಸ್ಥಿತಿಯನ್ನು ಹತೋಟಿ ಮಾಡಲು ಹವಣಿಸುತ್ತಿದೆ. ಸರ್ಕಾರಿ ಆಸ್ಪತ್ರೆ ಕತ್ತಲ ಕೂಪ ಎಂದಿತು ಕೋರ್ಟ್. ಪರೀಕ್ಷೆ ಮಾಡಿ ರೋಗ ಇರುವುದು ಹೌದಾದರೆ ಯಾರು ಕೆಲಸ ಮಾಡುತ್ತಾರೆ ಎಂಬ ಜಿಜ್ಞಾಸೆಯೇ ಮುಂದೆ ಬಂದಿತು. ಹಿರಿಯ ಡಾಕ್ಟರುಗಳು ತಪಾಸಣೆಗೆ ಬರುವುದಿಲ್ಲ. ಕಿರಿಯ ಡಾಕ್ಟರುಗಳ ಮೇಲೆ ಒತ್ತಡ ಹೇರಿ ಕಳುಹಿಸುವುದು. ಕಿರಿಯ ಡಾಕ್ಟರುಗಳ ಕಳುಹಿಸಲು ಸುರಕ್ಷಾ ಕವಚಗಳಿಲ್ಲ ಎಂಬ ಹೆದರಿಕೆಯ ಪರಿಸ್ಥಿತಿ. ಬಡವರು ಬದುಕುವ ಕಿರಿದಾದ ಓಣಿಗಳಲ್ಲಿ ರೋಗ ಹರಡಿತ್ತು. ವ್ಯವಸ್ಥಿತ ತಡೆ ಕಾರ್ಯಕ್ರಮಗಳೇ ಇರಲಿಲ್ಲ. ಸತ್ತವರ ಎಣಿಕೆಗೆ ಎಲ್ಲಿ ವ್ಯವಸ್ಥೆ? ಸತ್ತವರ ಸಂಖ್ಯೆ ಯನ್ನು ಮಸಣದಿಂದ ಸಂಗ್ರಹಿಸಲಾಯಿತು. ಈ ಸಂಖ್ಯೆ ವರದಿಯಾದ ಸಂಖ್ಯೆಗಿಂತ ಬಹಳ ಹೆಚ್ಚಾಗಿತ್ತು.

ಇಷ್ಟಾಗುವಲ್ಲಿ ಹೈ ಕೋರ್ಟಿನ ಪೀಠವನ್ನು ಹೊಸತಾಗಿ ರಚಿಸಲಾಯಿತು. ಹೊಸ ಪೀಠ ಸರ್ಕಾರಕ್ಕೆ ಒಳ್ಳೆಯ ಪ್ರಮಾಣಪತ್ರ ನೀಡಿತು. ಇದು ಸರ್ಕಾರದ ಕರಾಮತ್ತಿನ ಕುರುಹು.

ಬಂಟತನ ಮತ್ತು ಹಗರಣಗಳ ಛಾಯೆ

ಗುಜರಾತಿನಲ್ಲಿ ಕೋರೋನ ಪಿಡುಗಿನ ನಿರ್ವಹಣೆ ಮತ್ತು ಅದಕ್ಕೆ ಸಂಬಂಧಪಟ್ಟ ಉಪಕರಣ ಮತ್ತು ವಸ್ತುಗಳ ಖರೀದಿ ನೋಡಿದರೆ ಬಂಟತನದ ತಾಂಡವ ಹಾಗೂ ಅದರ ಜೊತೆ ಉಂಟಾದ ಹಗರಣಗಳ ಸರಮಾಲೆಯಾಗಿ ಕಾಣುತ್ತಿದೆ. ಈ ಕೆಳಗಿನ ಒಂದು ಉದಾಹರಣೆ ನೋಡಿ. ಖಾಸಗಿ ಕಂಪನಗಳು 4500 ರೂಪಾಯಿಗಳಿಗೆ ರೋಗ ನದಾನ ಪರೀಕ್ಷೆ ಮಾಡಲು ಸರ್ಕಾರ ದರ ನಿಶ್ಚಯ ಮಾಡಿತ್ತು. ಮೋಹನ್ ಸಾರಭಾಯಿ ಎಂಬಾತನ ಕೊಸಾರ ಡಯಗ್ನೋಸ್ಟಿಕ್ಸ್ ನ ಕಿಟ್ ಗಳನ್ನು ಮಾರ್ಚ್ 19 ರಂದು ಸರ್ಕಾರ ಅನುಮೋದಿಸಿತು. ಒಂದು ದಿನದ ನಂತರ 18 ಕಂಪನಗಳಿಗೆ ರೋಗ ಪರೀಕ್ಷೆಯ ಪರವಾನಗಿ ದೊರಕಿತು. ಆದರೆ ಅವರೆಲ್ಲರೂ ಕೊಸಾರದ ಕಿಟ್ ಗಳನ್ನೇ ಉಪಯೋಗಿಸಬೇಕೆಂಬ ಷರತ್ತಿನೊಂದಿಗೆ. ಯಾಕೆಂದರೆ ಈತನ ಕಿಟ್‌ಗಳನ್ನು ಅಮೆರಿಕದ ಆಹಾರ ಮತ್ತು ಔಷದಿ ಆಢಳಿತ ಮತ್ತು ಯುರೋಪಿನ ದೇಶಗಳು ಅನುಮೋದಿಸಿದ್ದವು. ಉಳಿದವರ ಕಿಟ್‌ಗಳು ಬಹಳ ಅಗ್ಗವಾಗಿದ್ದರೂ ಕೊಸರಾದ ಕಿಟ್‌ಗಳನ್ನೇ ಬಳಸಬೇಕೆಂಬ ಷರತ್ತು ವಿಧಿಸಲಾಯಿತು.

ಇನ್ನೊಂದು ಉದಾಹರಣೆ; ಅಂಬು ಬ್ಯಾಗ್ ಎಂಬ ವೆಂಟಿಲೆಟರ್‌ಗೆ ಸಮಾನವಾದ ಉಪಕರಣವನ್ನು ಖರೀದಿಸಲಾಯಿತು. ಇದರ ಪರೀಕ್ಷಾತ್ಮಕ ಪ್ರಯೋಗವೇ ಆಗಿರಲಿಲ್ಲ. ಒಂದೆರಡಲ್ಲ, 900 ಇಂತಹ ಉಪಕರಣಗಳನ್ನು ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗಿದೆ. ಉಪಯೋಗ ಮಾತ್ರ ಇಲ್ಲ. ಈ ಖರೀದಿ ಯಾಕೆಂದರೆ ಇದರ ಉತ್ಪಾದಕರು ಗುಜರಾತಿನ ಮುಖ್ಯ ಮಂತ್ರಿಗಳ ಆಪ್ತರು. ಅಷ್ಟೇ ಅಲ್ಲ. ಪ್ರಧಾನ ಮಂತ್ರಿಗಳ ಆಪ್ತರೂ ಹೌದು. ಗುಜರಾತಿನಲ್ಲಿ ಕೋವಿಡ್ ನಂದ ಹೆಚ್ಚು ಸಾವುಗಳಾದರೆ ಇದಕ್ಕಿಂತ ಹೆಚ್ಚಿನ ಕಾರಣಗಳು ಬೇಕೆ?

ವಲಸೆ ಕಾರ್ಮಿಕರ ದಾರುಣ ಅವಸ್ಥೆ

ಗುಜರಾತಿನ ವಲಸೆ ಕಾರ್ಮಿಕರದ್ದು ಅತ್ಯಂತ ದಾರುಣ ಅವಸ್ಥೆ. ಇದನ್ನು ಅರ್ಥ ಮಾಡಿಕೊಳ್ಳದೆ ಗುಜರಾತನ್ನು ಅರ್ಥಮಾಡಿಕೊಳ್ಳು ಸಾಧ್ಯವಿಲ್ಲ. ವಲಸೆ ಕಾರ್ಮಿಕರು ಬಹುತೇಕರು ಬೇರೆ ರಾಜ್ಯಗಳಿಂದ ಬಂದವರು. ಲಾಕ್‌ಡೌನ್ ಘೋಷಣೆಯಾದ ನಂತರ ಶೇ 92 ರಷ್ಟು ಕಾರ್ಮಿಕರಿಗೆ ದುಡಿತಕ್ಕೆ ಸಂಬಳ ದೊರೆಯಲಿಲ್ಲ. ಅನ್ನ ನೀರಿಲ್ಲದ ಪರಿಸ್ಥಿತಿಯಿಂದ ಬದುಕಿ ಉಳಿಯಲು ಅವರು ನೂರಾರು ಮೈಲಿಗಳಷ್ಟು ನಡೆದರು. ಬೀದಿಗಿಳಿದು ಹೋರಾಡಿದರು. ಸೂರತ್ ನಗರದಲ್ಲಿ ಅತಿ ದೊಡ್ಡ ಹೋರಾಟ ನಡೆಯಿತು. ಅಚ್ಯುತ್ ಯಾಗ್ನಿಕ್ ಎಂಬ ಸಮಾಜವಿಜ್ಞಾನಿಯ ಪ್ರಕಾರ ಕೋವಿಡ್‌ನಂದಲ್ಲದಿದ್ದರೆ ಅವರು ಉಪವಾಸದಿಂದ ಸಾಯುತ್ತಿದ್ದರು. ಸುಮಾರು 20 ಲಕ್ಷ ಜನ ಹೀಗೆ ಸಾಯುತ್ತಿದ್ದರು. ಈ ಹೋರಾಟವನ್ನು ಪೊಲೀಸರಿಂದ ದಮನಸಲಾಯಿತು. ಕೆಲವರು ಹೋರಾಟದಲ್ಲಿ ಸತ್ತರು. ಸರ್ಕಾರ ಈ ಕಾರ್ಮಿಕರನ್ನು ತಮ್ಮ ಊರುಗಳಿಗೆ ಕಳುಹಿಸುವ ನಾಟಕವಾಡಿತು. ಅವರಿಂದ ಹಣ ವಸೂಲಿ ಮಾಡಲೂ ನೋಡಿತು. ಗುಜರಾತಿನ ಹೈಕೋರ್ಟ್ ಮಧ್ಯ ಪ್ರವೇಶಿಸಿ ಸ್ಪಷ್ಟ ನಿರ್ದೇಶನ ನೀಡಿತು. ಕಾರ್ಮಿಕರು ನಗರದ ಅಭ್ಯುದಯಕ್ಕೆ ಅದ್ಭುತ ಕೊಡುಗೆ ನೀಡಿರುವಾಗ ಅವರಿಗೆ ಸರ್ಕಾರ ಸಹಾಯ ಮಾಡಬೇಕೆಂದಿತು ಕೋರ್ಟ್.

ಮುಂದಿನ ದಾರಿ:

ಕೋವಿಡ್ ಮಾರಿ ದೊಡ್ಡ ಪ್ರಮಾಣದಲ್ಲಿ ಹರಡುತ್ತಿರುವಾಗ ಜನರ ಜೀವನ ತಲ್ಲಣಕ್ಕೆ ಸಿಲುಕಿದೆ. ನರುದ್ಯೋಗ ಮತ್ತು ಹಸಿವು ಇನ್ನಿಲ್ಲದಂತೆ ಅವರನ್ನು ಕಾಡುತ್ತಿದೆ. ಬದುಕುವುದೇ ಅತೀ ದೊಡ್ಡ ಸವಾಲು. ಜನರ ಬದುಕನ್ನು ಉಳಿಸಲು ಪ್ರತಿಯೊಬ್ಬರಿಗೂ ತಿಂಗಳಿಗೆ ಕನಿಷ್ಠ 7500 ರೂಪಾಯಿಗಳನ್ನು ನೀಡಬೇಕು. ಹಾಗೆಯೇ ಆಹಾರ ಧಾನ್ಯಗಳನ್ನು ನೀಡಬೇಕು. ನರುದ್ಯೋಗ ಮತ್ತು ಹಸಿವಿನಂದ ಯಾರೂ ಸಾಯದಂತೆ ನೋಡಿಕೊಳ್ಳಬೇಕು. ಮನರೆಗಾದಡಿ ಕೆಲಸ ನೀಡಬೇಕು. ನಗರ ಪ್ರದೇಶಗಳಿಗೂ ಉದ್ಯೋಗ ಖಾತರಿ ಯೋಜನೆ ವಿಸ್ತರಿಸಬೇಕು. ಕೋವಿಡ್ ಪೀಡಿತ ದೇಶಗಳು ಒಂದಾದ ಮೇಲೆ ಒಂದರಂತೆ ಇಂತಹ ಹಲವು ಕ್ರಮಗಳನ್ನು ಕೈಗೊಳ್ಳುತ್ತಿರುವಾಗ ನಾವು ಕನಿಷ್ಠ ಅವರನ್ನು ಅನುಸರಿಸಬೇಕು. ನಮ್ಮ ದೇಶಬಾಂಧವರನ್ನು ಇಂತಹ ಕಷ್ಟಕ್ಕೆ ದೂಡಿರುವ ಸರ್ಕಾರ ಅವರ ಕಷ್ಟ ಪರಿಹಾರಕ್ಕೆ ಇಷ್ಟನ್ನಾದರೂ ಮಾಡಲೇಬೇಕು.

ಕೊವಿಡ್–19 ಉದ್ಯೋಗ ಬಿಕ್ಕಟ್ಟಿಗೆ ಪೂರ್ಣ ಉದ್ಯೋಗವೇ ಸಂಜೀವಿನಿ



ಹಲವಾರು ವರ್ಷಗಳಿಂದಲೂ ನವ ಉದಾರವಾದವು ಕಾರ್ಮಿಕ ವರ್ಗದ ಮೇಲೆ ನಡೆಸಿದ ದಾಳಿಗಳ ಜೊತೆಗೆ ಕೋವಿಡ್–19ರ ಹೊಡೆತವೂ ಸೇರಿಕೊಂಡ ಪರಿಣಾಮವಾಗಿ ನಿರುದ್ಯೋಗ ಮತ್ತು ಅಸಮಾನತೆಗಳು ಹೆಚ್ಚಿವೆ. ಈ ಪರಿಸ್ಥಿತಿಯು ಮೂವತ್ತರ ದಶಕದಲ್ಲಿ ಉಂಟಾಗಿದ್ದ ಮಹಾ ಆರ್ಥಿಕ ಕುಸಿತ (Great Depression)ದೊಂದಿಗೆ ಹೋಲುತ್ತದೆ. ಅದನ್ನು ನಿಭಾಯಿಸಲು 'ನ್ಯೂಡೀಲ್' (New Deal) ಎಂಬುದು ಮೂಡಿ ಬಂತು. ಇಂದಿನ ನಿರುದ್ಯೋಗವನ್ನು ನಿವಾರಿಸಲು ಕೂಡ ವಿಶ್ವಕ್ಕೆ ಮತ್ತೆ ಹೊಸದೊಂದು 'ಹೊಸ ವ್ಯವಹಾರ' ಅಗತ್ಯವಿದೆ ಎನ್ನುತ್ತಾರೆ ಪ್ರೊ. ಪೊಲಿನ್.

ಸ್ವಿಟ್ಜರ್ಲೆಂಡ್‌ನ ಲಿನ್ ಫ್ರಿಸ್ ಜಾಗತಿಕ ಆರ್ಥಿಕ ಸುದ್ದಿಗಳ ಬಗ್ಗೆ ವೀಡಿಯೊ ತಯಾರಿಸುವ ಒಬ್ಬ ಸ್ವತಂತ್ರ ನಿರ್ಮಾಪಕಿ. ಪ್ರೊ. ರಾಬರ್ಟ್ ಪೊಲಿನ್ ಅಮೇರಿಕಾದ ಒಬ್ಬ ಅರ್ಥಶಾಸ್ತ್ರ ಪ್ರಾಧ್ಯಾಪಕ ಮತ್ತು ಲೇಖಕ. ಪ್ರೊ. ಪೊಲಿನ್– ಲಿನ್ ಫ್ರಿಸ್ ಸಂದರ್ಶನವನ್ನು ನ್ಯೂಸ್ ಕ್ಲಿಕ್ ಪ್ರಕಟಿಸಿದೆ. ಅದರ ಸಂಕ್ಷಿಪ್ತ ರೂಪದ ಮೊದಲ ಭಾಗವನ್ನು ಇಲ್ಲಿ ಕೊಡಲಾಗಿದೆ.

ಸಂಗ್ರಹ–ಅನುವಾದ: ಕೆ.ಎಂ.ನಾಗರಾಜ್

ಲಿನ್ ಫ್ರಿಸ್: ಕೋವಿಡ್–19ರ ಬಿಕ್ಕಟ್ಟಿನೊಂದಿಗೆ ನಿರುದ್ಯೋಗವು **Great Depression** ಸಂದರ್ಭದಲ್ಲಿ ಕಂಡ ಕೆಳ ಮಟ್ಟವನ್ನು ತಲುಪುತ್ತಿದೆ. ನಿಮ್ಮ ¼ಬ್ಯಾಕ್ ಟು ಫುಲ್ ಎಂಪ್ಲಾಯ್‌ಮೆಂಟ್¼ ಪುಸ್ತಕದಲ್ಲಿ ಕಾರ್ಲ್ ಮಾರ್ಕ್ಸ್, ಜಾನ್ ಮೇನಾರ್ಡ್ ಕೀನ್ಸ್, ಮೈಕೆಲ್ ಕಲೇಟ್‌ಸ್ಕಿ ಮತ್ತು ಮಿಲ್ಟನ್ ಫ್ರೀಡ್ ಮನ್ ಇವರುಗಳು ನಿರುದ್ಯೋಗದ ಬಗ್ಗೆ ಮಾಡಿರುವ ವ್ಯಾಖ್ಯಾನ–ಅವಲೋಕನಗಳ ಬಗ್ಗೆ ಗಮನಹರಿಸಿದ್ದೀರಿ. ಅದರ ಬಗ್ಗೆ ಒಂದಿಷ್ಟು ವಿವರಿಸಿ.

ಪೊಲಿನ್: ಕಾರ್ಲ್ ಮಾರ್ಕ್ಸ್ ಸಮಾಜವಾದದ ಮಹಾನ್ ಚಿಂತಕ. ಮಾರ್ಕ್ಸ್ ತನ್ನ 90% ಸಮಯವನ್ನು ಬಂಡವಾಳವಾದದ ಸ್ವರೂಪದ ಬಗ್ಗೆ ಬರೆಯಲು ವ್ಯಯಿಸಿದ್ದಾರೆ. ಬಂಡವಾಳಶಾಹಿಯು ಬಂಡವಾಳಶಾಹಿಯಾಗಿಯೇ ಕಾರ್ಯ ನಿರ್ವಹಿಸಲು ಅದಕ್ಕೆ ರಾಶಿ ರಾಶಿಗಟ್ಟಲೆ ನಿರುದ್ಯೋಗದ ಅಗತ್ಯವಿದೆ ಎಂಬುದು ಅವರ ಮೂಲಭೂತ ಒಳನೋಟಗಳಲ್ಲಿ ಒಂದು. ಮನುಷ್ಯರ ಯೋಗಕ್ಷೇಮದ ದೃಷ್ಟಿಯಿಂದ ಬಂಡವಾಳಶಾಹಿಗೆ ರಾಶಿ ರಾಶಿಗಟ್ಟಲೆ ನಿರುದ್ಯೋಗದ ಅಗತ್ಯವಿದೆ ಎಂದಲ್ಲ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ರಾಶಿ ರಾಶಿಗಟ್ಟಲೆ ನಿರುದ್ಯೋಗ ಇಲ್ಲದಿದ್ದರೆ ಅದು ಒಂದು ಕಾರ್ಯ ನಿರತ ಬಂಡವಾಳಶಾಹಿ ವ್ಯವಸ್ಥೆಯಾಗಿ ಉಳಿಯದು.

ಮಾರ್ಕ್ಸ್ ಅವರ ವಾದದಲ್ಲಿ ಯಾವ ಮುಚ್ಚುಮರೆಯೂ ಇಲ್ಲ. ಅವರು ಹೇಳಿದ್ದು: ಪೂರ್ಣ ಉದ್ಯೋಗದ ಪರಿಸ್ಥಿತಿ ಇರುವಂತಹ ಬಂಡವಾಳಶಾಹಿಯಲ್ಲಿ, ಕಾರ್ಮಿಕರಿಗೆ ಹೆಚ್ಚು ಹೆಚ್ಚು ಚೌಕಾಶಿ ಮಾಡುವ ಶಕ್ತಿ ಇರುತ್ತದೆ. ಯಾಕೆ? ಏಕೆಂದರೆ, ಅವರಿಗೆ ತಾವು ಮಾಡುವ ಕೆಲಸ ಇಷ್ಟವಿಲ್ಲದಿದ್ದರೆ, ಅದನ್ನು ಬಿಟ್ಟು ಇನ್ನೊಂದು ಕೆಲಸಕ್ಕೆ ಸೇರಬಹುದು. ಎಲ್ಲರಿಗೂ ಉದ್ಯೋಗ ದೊರೆಯುವುದರಿಂದ ಕೆಲಸಗಾರರು ಉದ್ಯೋಗದ ಬಗ್ಗೆ ಚಿಂತಿಸುವ ಅವಶ್ಯಕತೆಯಿಲ್ಲ. ಆದ್ದರಿಂದ, ಮಾರ್ಕ್ಸ್ ಹೇಳಿದ್ದೇನೆಂದರೆ: ರಾಶಿ ರಾಶಿಗಟ್ಟಲೆ ನಿರುದ್ಯೋಗಿಗಳು ಕಾರ್ಖಾನೆಯ ಗೇಟಿನ ಹೊರಗೆ, ಕಚೇರಿಗಳ ಹೊರಗೆ, ಕಾಯುತ್ತಿರುವಾಗ ಅಥವಾ ನಿರುದ್ಯೋಗಿಗಳ ಒಂದು ಮೀಸಲು ಸೈನ್ಯವೇ ಉದ್ಯೋಗಕ್ಕಾಗಿ ಕಾಯುತ್ತಿರುವಾಗ, ಬಂಡವಾಳಶಾಹಿಗಳಿಗೆ ಚೌಕಾಶಿಯ ಅಧಿಕಾರದ ಮೂಲಕ ಅವರ ಕೂಲಿಯನ್ನು ಕಡಿಮೆ ಮಾಡಲು ಸಾಧ್ಯವಾಗುತ್ತದೆ. ಕಾರ್ಮಿಕರಿಗೆ ಬಿಗಿಯಾಗಿ ಚೌಕಾಸಿ ಮಾಡುವಷ್ಟು ಶಕ್ತಿ ಇದ್ದರೆ, ಅವರು ತಮ್ಮ ಕೂಲಿಯನ್ನು ಸಾಕಷ್ಟು ಹೆಚ್ಚಿಸಿಕೊಳ್ಳುತ್ತಾರೆ. ಆಗ, ಬಂಡವಾಳಶಾಹಿಗಳ ಲಾಭಗಳು ಹಿಂಡಿ ಹಿಪ್ಪೆಯಾಗುತ್ತವೆ. ಈ ಕಾರಣದಿಂದಾಗಿಯೇ ಮಾರ್ಕ್ಸ್, ರಾಶಿ ರಾಶಿ ನಿರುದ್ಯೋಗವು ಬಂಡವಾಳಶಾಹಿಯ ಕಾರ್ಯಾಚರಣೆಯಲ್ಲಿ ಅಂತರ್ಗತವಾಗಿದೆ ಎಂದಿದ್ದರು.

ನಿರುದ್ಯೋಗದ ಬಗ್ಗೆ ವ್ಯಾಖ್ಯಾನ ಮಾಡಿದ ಎರಡನೆಯ ಮಹಾನ್ ಸಿದ್ಧಾಂತಿ ಎಂದರೆ, ಜಾನ್ ಮೇನಾರ್ಡ್ ಕೀನ್ಸ್. 1930ರ ದಶಕದಲ್ಲಿ ಸಂಭವಿಸಿದ ಮಹಾ ಆರ್ಥಿಕ ಕುಸಿತದ ಸಂದರ್ಭದಲ್ಲಿ, ಅತ್ಯಂತ ಹೆಚ್ಚಿನ ಪ್ರಮಾಣದ ನಿರುದ್ಯೋಗವನ್ನು ಹೊಂದಿರುವುದು (20%–25%) ಒಂದು ಅತಿ ದೊಡ್ಡ ತಪ್ಪು ನೀತಿ ಎಂಬ ಅಭಿಪ್ರಾಯವನ್ನು ಮತ್ತು ಇಂತಹ ಬೃಹತ್ ಪ್ರಮಾಣದ ನಿರುದ್ಯೋಗವಿಲ್ಲದೆ ಬಂಡವಾಳಶಾಹಿಯ ಕಾರ್ಯಾಚರಣೆ ಸಾಧ್ಯ ಎಂಬ ಚಿಂತನೆಯನ್ನು ಕೀನ್ಸ್ ಹೊಂದಿದ್ದರು.

ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸುವ ಸಲುವಾಗಿ ಸರ್ಕಾರವು ಹೆಚ್ಚು ಹೆಚ್ಚು ಹಣ ಖರ್ಚು ಮಾಡಬೇಕು. ಆರ್ಥಿಕ ಚಟುವಟಿಕೆಗಳು ಹೆಚ್ಚುವ ಕಾರಣದಿಂದ ಉದ್ಯಮಗಳು ಹೆಚ್ಚು ಹೆಚ್ಚು ಹೂಡಿಕೆ ಮಾಡುತ್ತವೆ. ಜನರೂ ಸಹ ಹೆಚ್ಚು ಹೆಚ್ಚು ಹಣ ಖರ್ಚು ಮಾಡುತ್ತಾರೆ. ಈ ರೀತಿಯಲ್ಲಿ ಆರ್ಥಿಕ ಚಟುವಟಿಕೆಗಳು ಉನ್ನತ ಮಟ್ಟದಲ್ಲಿ ನಡೆಯುವುದರಿಂದ ಜನರಿಗೆ ಉದ್ಯೋಗಗಳು ದೊರಕುತ್ತವೆ. ಆದ್ದರಿಂದ, ತಾಂತ್ರಿಕ ದೃಷ್ಟಿಯಲ್ಲಿ, ಬಂಡವಾಳಶಾಹಿ ಅರ್ಥವ್ಯವಸ್ಥೆಯು ಪೂರ್ಣ ಉದ್ಯೋಗದ ಮಟ್ಟದಲ್ಲಿ ಕಾರ್ಯನಿರ್ವಹಿಸಲು ಮತ್ತು ಬಯಸಿದಷ್ಟು ಕಾಲವೂ ಅದನ್ನು ಹಾಗೆಯೇ ಉಳಿಸಿಕೊಳ್ಳಲು ಸಾಧ್ಯವಿದೆ ಎಂಬುದು ಕೀನ್ಸ್ ನೀತಿಯ ಸಾರಾಂಶ.

ನಿರುದ್ಯೋಗದ ಬಗ್ಗೆ ವ್ಯಾಖ್ಯಾನ ಮಾಡಿದ ಮತ್ತೊಬ್ಬರೆಂದರೆ, ಮೈಕೆಲ್ ಕಲೇಟ್‌ಸ್ಕಿ. ಅತ್ಯಂತ ಪ್ರಭಾವಶಾಲಿ ಅರ್ಥಶಾಸ್ತ್ರಜ್ಞರಾದ ಮಾರ್ಕ್ಸ್ ಮತ್ತು ಕೀನ್ಸ್ ಅವರಿಗೆ ಹೋಲಿಸಿದರೆ, ಕಲೇಸ್ಕಿ ಪ್ರಸಿದ್ಧರೇನಲ್ಲ. ಆದರೆ, ಕಲೆಟ್‌ಸ್ಕಿ ಅವರ ಒಳನೋಟಗಳು ತೀಕ್ಷ್ಣವಾಗಿದ್ದವು. ನಿರುದ್ಯೋಗದ ಬಗ್ಗೆ ಮಾರ್ಕ್ಸ್ ಮತ್ತು ಕೀನ್ಸ್ ಇಬ್ಬರೂ ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿ ಸಾಕಷ್ಟು ಸತ್ಯವಿದೆ ಎಂದು ಕಲೇಟ್‌ಸ್ಕಿ ಹೇಳಿದರು. ಮಾರ್ಕ್ಸ್ ಮತ್ತು ಕೀನ್ಸ್ ಇಬ್ಬರ ಅಭಿಪ್ರಾಯಗಳನ್ನೂ ಅವರು ಸಮನ್ವಯಗೊಳಿಸಿದರು.

ಕಲೇಟ್‌ಸ್ಕಿ ಹೇಳುತ್ತಾರೆ: ನೀತಿ ಸಾಧನಗಳು ಮತ್ತು ಬುದ್ಧಿವಂತರನ್ನು ನಾವು ಸರ್ಕಾರದಲ್ಲಿ ಹೊಂದಿದ್ದೇವೆ ಎಂದು ಕೀನ್ಸ್ ಹೇಳಿರುವುದು ಸರಿಯಾಗಿಯೇ ಇದೆ. ಅವರು ಅರ್ಥವ್ಯವಸ್ಥೆಯಲ್ಲಿ ಒಟ್ಟಾರೆ ಚಟುವಟಿಕೆಗಳ ಮಟ್ಟವನ್ನು ಹೆಚ್ಚಿಸುವ ಮೂಲಕ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪೂರ್ಣ ಉದ್ಯೋಗದ ಸ್ಥಿತಿಯನ್ನು ತಲುಪಬಹುದು ಎಂದು ಕೀನ್ಸ್ ಹೇಳಿದ್ದು ತಾಂತ್ರಿಕವಾಗಿ ಸರಿ.

ಮಾರ್ಕ್ಸ್ ಹೇಳಿದ್ದೂ ಕೂಡ ಸರಿಯಾಗಿದೆ. ಅವರು ಹೇಳಿದ್ದು, ಪೂರ್ಣ ಪ್ರಮಾಣದ ಉದ್ಯೋಗದ ಸ್ಥಿತಿಯನ್ನು ತಲುಪಲು ಬೇಕಾಗುವ ತಾಂತ್ರಿಕ ಅವಶ್ಯಕತೆಗಳ ಬಗ್ಗೆ ಅಲ್ಲ. ಅವರು ಹೇಳಿದ್ದು, ಪೂರ್ಣ ಪ್ರಮಾಣದ ಉದ್ಯೋಗಕ್ಕಾಗಿ ಬೇಕಾಗುವ ರಾಜಕೀಯ ತಯಾರಿ/ಅಗತ್ಯಗಳ ಬಗ್ಗೆ. (ವಾಸ್ತವವಾಗಿ, ಕಲೇಟ್‌ಸ್ಕಿಯ ಪ್ರಸಿದ್ಧ ಲೇಖನದ ಹೆಸರೇ 'ಪೂರ್ಣ ಉದ್ಯೋಗದ ರಾಜಕೀಯ ಆಯಾಮಗಳು')

ಕೀನ್ಸ್ ಹೇಳಿದ ಮಾರ್ಗವನ್ನು ಅನುಸರಿಸಿ ನಾವು ಪೂರ್ಣ ಉದ್ಯೋಗದ ಗುರಿಯನ್ನು ಮುಟ್ಟಬಹುದು. ಆದರೆ, ಪೂರ್ಣ ಪ್ರಮಾಣದ ಉದ್ಯೋಗಗಳ ಪರಿಸ್ಥಿತಿಯಲ್ಲಿ ಕಾರ್ಮಿಕರು ತಮ್ಮ ಕೂಲಿ/ವೇತನ ಹೆಚ್ಚಿಸಿಕೊಳ್ಳಲು ಚೌಕಾಶಿ ಮಾಡುತ್ತಾರೆ. ಅದರಿಂದಾಗಿ ಬಂಡವಾಳಶಾಹಿಗಳಿಗೆ ಬೇಕಾದಷ್ಟು ಮಟ್ಟಿನ ಲಾಭಗಳು ಸಿಗುವುದಿಲ್ಲ. ಇದು, ಬಂಡವಾಳಶಾಹಿ ವ್ಯವಸ್ಥೆಯ ಕಾರ್ಯಸಾಧ್ಯತೆಯನ್ನು ದುರ್ಬಲಗೊಳಿಸುತ್ತದೆ. ಈ ಕಾರಣದಿಂದ, ಕಲೇಟ್‌ಸ್ಕಿ, ಮಾರ್ಕ್ಸ್ ಮತ್ತು ಕೀನ್ಸ್ ರ ಅಭಿಪ್ರಾಯಗಳನ್ನು ಅದ್ಭುತವಾಗಿ ಸಮನ್ವಯಗೊಳಿಸಿದರು.

ಮತ್ತೊಬ್ಬ ನಿರುದ್ಯೋಗದ ವ್ಯಾಖ್ಯಾನಕಾರ ಮಿಲ್ಟನ್ ಫ್ರೀಡ್‌ಮನ್ ಬಲಪಂಥೀಯ ನವ ಉದಾರವಾದಿ ಸಂಪ್ರದಾಯದ ಹಿನ್ನೆಲೆಯವರು. ಆದರೆ, ಒಂದು ವಿಚಿತ್ರರೀತಿಯಲ್ಲಿ, ಫ್ರೀಡ್‌ಮನ್ ತೀರ್ಮಾನವೂ ಮಾರ್ಕ್ಸ್‌ಗಿಂತ ಭಿನ್ನವಲ್ಲ. ನವ ಉದಾರವಾದವನ್ನು ವ್ಯಾಖ್ಯಾನಿಸಿದವನೇ ಫ್ರೀಡ್‌ಮನ್. ಅವರ ವಾದ ಏನೆಂದರೆ, ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಮಾರುಕಟ್ಟೆಗಳು ಸ್ಪರ್ಧಾತ್ಮಕವಾಗುತ್ತವೆ. ಗ್ರಾಹಕರನ್ನು ಸೆಳೆಯುವ ಪೈಪೋಟಿಯಲ್ಲಿ ಉದ್ಯಮಗಳೂ ಸ್ಪರ್ಧಾತ್ಮಕವಾಗುತ್ತವೆ. ಜನರು ಖರೀದಿಸಲು ಬಯಸುವ ಉತ್ಪನ್ನಗಳನ್ನು ತಯಾರಿಸಲು ಉದ್ಯಮಗಳು ಸ್ಪರ್ಧಾತ್ಮಕವಾಗುತ್ತವೆ. ಹಾಗಾಗಿ, ಯಾವುದೇ ಉದ್ಯಮವು ಕಾರ್ಮಿಕರನ್ನು ನೇಮಿಸಿಕೊಳ್ಳುವಾಗ ಅವರಿಗೆ ತಕ್ಕ ಸಂಬಳ ಕೊಡಬೇಕಾಗುತ್ತದೆ. ಚೌಕಾಸಿಯು ಎಲ್ಲರಿಗೂ ಅವರವರ ಯೋಗ್ಯತೆಗೆ ತಕ್ಕಂತೆ ಸಿಗುವಂತೆ ಮಾಡುವಲ್ಲಿ ಪರಿಣಮಿಸುತ್ತದೆ. ಅದನ್ನು ಗೌರವಿಸದಿದ್ದರೆ ಒಳ್ಳೆಯ ಉದ್ಯೋಗಿಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಹೆಚ್ಚು ಹಣ ನೀಡಿ ಉತ್ತಮ ಉದ್ಯೋಗಿಗಳನ್ನು ಇತರ ಉದ್ಯಮಗಳು ನೇಮಿಸಿಕೊಳ್ಳುತ್ತವೆ. ಹಾಗಾಗಿ, ಕಡಿಮೆ ಸಂಬಳ ಕೊಟ್ಟು ಸ್ಪರ್ಧೆ ಮಾಡಲು ಸಾಧ್ಯವಿಲ್ಲ.

ಆದ್ದರಿಂದ, ಮುಕ್ತ ಮಾರುಕಟ್ಟೆಯನ್ನು ಅದರ ಪಾಡಿಗೆ ಅದು ಕಾರ್ಯನಿರ್ವಹಿಸಲು ಬಿಟ್ಟರೆ, ಕೆಲಸ ಬಯಸುವ ಪ್ರತಿಯೊಬ್ಬರಿಗೂ ಉದ್ಯೋಗ ಸಿಗುತ್ತದೆ. ಅವರು ಉದ್ಯಮಗಳು/ ಬಂಡವಾಳಗಾರರೊಂದಿಗೆ ವೈಯಕ್ತಿಕವಾಗಿ ಚೌಕಾಶಿ ಮಾಡುತ್ತಾರೆ. ಕೆಲಸಗಾರರಿಗೆ ತಕ್ಕ ಸಂಬಳ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ಅವರು ಬೇರೆ ಯಾವುದಾದರೂ ಸ್ಥಳದಲ್ಲಿ ಕೆಲಸ ಮಾಡುತ್ತಾರೆ. ಆದ್ದರಿಂದ, ಬಂಡವಾಳಶಾಹಿಯಲ್ಲಿ ಉದ್ಯೋಗಗಳು ಪೂರ್ಣ ಪ್ರಮಾಣದಲ್ಲಿ ಇರಲು ಸಾಧ್ಯವಿದೆ.

ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಪೂರ್ಣ ಉದ್ಯೋಗದ ಸ್ಥಿತಿ ಇಲ್ಲ ಎಂಬುದನ್ನು ಫ್ರೀಡ್‌ಮನ್ ಒಪ್ಪಿಕೊಳ್ಳುತ್ತಾರೆ. ಚೌಕಾಶಿ ಮಾಡಲು ಕಾರ್ಮಿಕರು ಹೊಂದಿರುವ ಶಕ್ತಿಯೇ ನಿರುದ್ಯೋಗಕ್ಕೆ ಕಾರಣವೆನ್ನುತ್ತಾರೆ. ಕನಿಷ್ಟ ವೇತನ ಕಾಯಿದೆಯನ್ನು ಉದಾಹರಿಸುತ್ತಾರೆ. ಒಂದು ಗಂಟೆಗೆ ಕನಿಷ್ಟ ವೇತನವು 15 ಡಾಲರ್ ಎಂದು ಕಾನೂನು ನಿಗದಿ ಮಾಡುತ್ತದೆ. ವ್ಯಾಪಾರಿಗಳು ಹೇಳುತ್ತಾರೆ: ಈ ಕಾರ್ಮಿಕರು ಮಾಡುವ ಕೆಲಸಕ್ಕೆ 15 ಡಾಲರ್ ಅಲ್ಲ. ಹೆಚ್ಚೆಂದರೆ 10 ಡಾಲರ್ ಕೊಡಬಹುದು. ಆದರೆ ಕಾನೂನು ಪ್ರಕಾರ ಅವರಿಗೆ 15 ಡಾಲರ್ ಕೊಡಲೇಬೇಕಾಗುತ್ತದೆ. ಅವರಿಗೆ 15 ಡಾಲರ್ ಕೊಟ್ಟರೆ, ವ್ಯಾಪಾರಿಗಳು ಹಣ ಮಾಡಲು ಸಾಧ್ಯವಿಲ್ಲ. ಈ ಕಾರಣದಿಂದಾಗಿ ಕಾರ್ಮಿಕರು ನಿರುದ್ಯೋಗಿಗಳಾಗುತ್ತಾರೆ ಎನ್ನುತ್ತಾರೆ ಫ್ರೀಡ್‌ಮನ್.

ಫ್ರೀಡ್‌ಮನ್ ಕಥೆಯಲ್ಲಿ ನಿರುದ್ಯೋಗಕ್ಕೆ ಕಾರಣವಾಗುವ ಅಂಶ ಯಾವುದು? ಸರ್ಕಾರದ ಹಸ್ತಕ್ಷೇಪ. ಬಹುಶಃ ಸರ್ಕಾರವು ಕಾರ್ಮಿಕರಿಗೆ ಸಹಾಯ ಮಾಡಲು ಪ್ರಯತ್ನಿಸುತ್ತದೆ. ಆದರೆ, ಅದರಿಂದ ಕಾರ್ಮಿಕರಿಗೆ ಪ್ರಯೋಜನವಿಲ್ಲ. ಏಕೆಂದರೆ, ಒಬ್ಬ ಕಾರ್ಮಿಕನು ಗಂಟೆಗೆ 10 ಡಾಲರ್ ಕೂಲಿಗೆ ಕೆಲಸ ಮಾಡಲು ನಾನು ತಯಾರಿದ್ದೇನೆ ಎನ್ನುತ್ತಾನೆ. ಅದನ್ನು ಮಾಡಲು ಸಾಧ್ಯವಿಲ್ಲ ಎಂದು ಕಾನೂನು ಹೇಳುತ್ತದೆ. ಆದ್ದರಿಂದ, ಗಂಟೆಗೆ 10 ಡಾಲರ್ ಕೂಲಿಗೆ ಕೆಲಸ ಮಾಡಲು ಎಲ್ಲರೂ ಸಿದ್ಧರಿದ್ದರೂ ಸಹ ಅವರಿಗೆ ಉದ್ಯೋಗ ಸಿಗುವುದಿಲ್ಲ. ಏಕೆಂದರೆ, ವ್ಯಾಪಾರಿಗಳು ಅವರಿಗೆ ಕಾನೂನು ಹೇಳುವಂತೆ 15 ಡಾಲರ್ ಕೂಲಿ ಕೊಡಲು ಬಯಸುವುದಿಲ್ಲ. ಇದನ್ನೇ ಕಾರ್ಮಿಕ ಮಾರುಕಟ್ಟೆಯ ಹಠಮಾರಿತನ ಎಂದು ಫ್ರೀಡ್‌ಮನ್ ಕರೆಯುತ್ತಾರೆ. (ಮುಂದುವರೆಯುವುದು)

ಮುಂದಿನ ವಾರ....

* **ಕೀನ್ಸ್ ಅವರನ್ನು ಬೃಹದರ್ಥಶಾಸ್ತ್ರ (Macroeconomics)ದ ಪಿತಾಮಹ ಎಂದು ಕರೆಯಲಾಗಿದೆ. ಆ ಸಮಯದಲ್ಲಿ ಬೃಹದರ್ಥಶಾಸ್ತ್ರದ ಉದ್ದೇಶವೇನಿತ್ತು? 1970ರ ದಶಕದ ಕೊನೆಯ ಭಾಗದ ನಂತರ ಅದರ ಉದ್ದೇಶವು ನಾಟಕೀಯವಾಗಿ ಬದಲಾದದ್ದು ಹೇಗೆ?.**
* **1990ರ ದಶಕದಲ್ಲಿ, ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ನವಉದಾರವಾದಿ ಆರ್ಥಿಕ ನೀತಿಗಳು ನೆಲೆಸಿದ ಬಗೆಯನ್ನು ಹೇಗೆ ವಿವರಿಸುವುದು?**

https://www.newsclick.in/revert-full-employment-overcome-neoliberalism-and-covid-19-jobs-crisis



ದೇಶದ ಬಹುಮೂಲ್ಯ ಸಂಪತ್ತನ್ನು ಮೋದಿ ಸರಕಾರ ಮಾರಾಟಕ್ಕಿಟ್ಟಿದೆ–ಸಿಐಟಿಯು

ಪುಟ 2 ರಿಂದ

ಇದು ಅರ್ಥಹೀನ. ಏಕೆಂದರೆ ಹೆಚ್ಚು ಆದಾಯ ತರುವ ರೂಟ್‌ಗಳನ್ನು ಅತಿವೇಗದ ರೈಲುಗಳಿಗಾಗಿ ಖಾಸಗಿಯವರಿಗೆ ಕೊಡಲಾಗುತ್ತಿದೆ. ಇದರಿಂದ ಸುಮಾರು ಅದೇ ಪ್ರಮಾಣದಲ್ಲಿ ಭಾರತೀಯ ರೈಲ್ವೆಯ ಆದಾಯಕ್ಕೆ ಹೊಡೆತ ಬೀಳುತ್ತದೆ. ಭಾರತೀಯ ರೈಲ್ವೆಯ ಆಭರಣಗಳಂತಿರುವ ಅದರ ಉತ್ಪಾದನಾ ಘಟಕಗಳು, ವರ್ಕ್‌ಶಾಪ್‌ಗಳು, ನಿರ್ವಹಣಾ ಘಟಕಗಳು ಮುಂತಾದವುಗಳ ಖಾಸಗೀಕರಣದಿಂದ ಆಗುವ ಉದ್ಯೋಗನಷ್ಟಗಳು ಖಾಸಗಿ ನಿರ್ವಾಹಕರು ತರುವ ಉದ್ಯೋಗಾವಕಾಶಗಳನ್ನು ಮೀರಿಸುತ್ತವೆ. ಹೊಸದಾಗಿ ನಿರ್ಮಾಣಗೊಳ್ಳುವ ಉದ್ಯೋಗಗಳು ಅನಿಶ್ಚಿತ ಸ್ವರೂಪದವುಗಳು, ಘನತೆ ನೀಡುವ ಸಂಬಳ ಮತ್ತು ಸಾಮಾಜಿಕ ಭದ್ರತೆಯ ಖಾಯಂ ಉದ್ಯೋಗಗಳಲ್ಲ.

ಆದ್ದರಿಂದ ಲಾಕ್‌ಡೌನಿನ ಪ್ರಯೋಜನ ಪಡೆದುಕೊಂಡು ಖಾಸಗೀಕರಣವನ್ನು ತ್ವರಿತಗೊಳಿಸುವ ಬಿಜೆಪಿ ಸರಕಾರದ ಈ ಜನ–ವಿರೋಧಿ, ರಾಷ್ಟ್ರ–ವಿರೋಧಿ ನಡೆಗೆ ಬಲಿಷ್ಟ ಪ್ರತಿರೋಧವನ್ನು, ಧಿಕ್ಕಾರವನ್ನು ಕಟ್ಟಲು ಪ್ರಮುಖ ರೈಲ್ವೆ ನೌಕರರ ಸಂಘಟನೆಗಳು ಮುತುವರ್ಜಿ ವಹಿಸಬೇಕು ಎಂದು ಸಿಐಟಿಯು ಕರೆ ನೀಡಿದೆ.

ಅದಾಗಲೇ ಕಲ್ಲಿದ್ದಲು ಕಾರ್ಮಿಕರು ಇಂತಹ ಪ್ರತಿರೋಧ ಮತ್ತು ಧಿಕ್ಕಾರಕ್ಕೆ ದಾರಿ ತೋರಿಸಿದ್ದಾರೆ, ಕಲ್ಲಿದ್ದಲು ಖಾಸಗೀಕರಣದ ವಿರುದ್ಧ ಜೂನ್ 2ರಿಂದ ಮೂರು ದಿನಗಳ ದೇಶವ್ಯಾಪಿ ಮುಷ್ಕರದಲ್ಲಿ ಬೃಹತ್ ಪ್ರಮಾಣದಲ್ಲಿ ಭಾಗವಹಿಸುತ್ತಿದ್ದಾರೆ. ರಕ್ಷಣಾ ವಲಯದ ನೌಕರರು ಕೂಡ ಖಾಸಗೀಕರಣವನ್ನು ಪ್ರತಿರೋಧಿಸಲು, ಧಿಕ್ಕರಿಸಲು ಸಿದ್ಧರಾಗುತ್ತಿದ್ದಾರೆ. ಈ ಕುರಿತು ನಡೆದ ಮತದಾನದಲ್ಲಿ 99.9ಶೇ. ನೌಕರರು ಮುಷ್ಕರ ನಡೆಸಬೇಕೆಂದು ಹೇಳಿದ್ದಾರೆ.

ಸಮಸ್ತ ಕಾರ್ಮಿಕ ಆಂದೋಲನ ಮತ್ತು ಕಾರ್ಮಿಕ ವರ್ಗ ಹಾಗೂ ಜನತೆ ಭಾರತೀಯ ರೈಲ್ವೆಯನ್ನು ಖಾಸಗೀಕರಿಸುವ, ಮಾರಿ ತಿನ್ನುವ, ಆ ಮೂಲಕ ದೇಶಿ–ವಿದೇಶಿ ಕಾರ್ಪೊರೇಟ್‌ಗಳ ಲಾಭದ ಹಸಿವನ್ನು ಹಿಂಗಿಸಲು ಮುಂದಾಗಿರುವ ನಡೆಯನ್ನು ಪ್ರತಿರೋಧಿಸಲು ಒಟ್ಟುಗೂಡಬೇಕು ಎಂದು ಸಿಐಟಿಯು ಕರೆ ನೀಡಿದೆ.

ಪೋಲಿಸ್ ಕಾರ್ಯಾಚರಣೆ ಮತ್ತು ಹೋರಾಟದ ನಿಲುಗಡೆ

ಪುಟ 11 ರಿಂದ

ನಿಜಾಮರ ವಿರುದ್ಧದ ವಿಮೋಚನಾ ಚಳುವಳಿಯಾಗಿ ಬೆಳೆಸಿ ನಡೆಸಲಾದ ತೆಲಂಗಾಣ ಸಶಸ್ತ್ರ ಹೋರಾಟವು ಯಾವಾಗ ಭಾರತೀಯ ಸೇನೆಯು ಮಧ್ಯಪ್ರವೇಶ ಮಾಡಿತೋ ಆಗ ಅದು ವಿಮೋಚನಾ ಹೋರಾಟವಾಗಿ ಉಳಿಯಲಿಲ್ಲ ಮತ್ತು ಹೈದರಾಬಾದ್ ಸಂಸ್ಥಾನವು ಭಾರತೀಯ ಪ್ರಭುತ್ವದ ಭಾಗವಾಗಿ ಹೋಯಿತು. ರೈತರ ಕೈಯಲ್ಲಿದ್ದ ಜಮೀನುಗಳನ್ನು ರಕ್ಷಿಸಲು ನಡೆಸಿದ ರೈತರ ಪಕ್ಷಪಾತಿ ಸಶಸ್ತ್ರ ಹೋರಾಟವಾಗಿ ಪರಿಣಮಿಸಿತು, ಅಂದರೆ ಅದು ಅಪೂರ್ಣವಾದ ಪಕ್ಷಪಾತಿ ಹೋರಾಟವಾಯಿತು. ಅದನ್ನು ಒಂದು ಜಮೀನುಗಳಿಗಾಗಿ ನಡೆಸುವ ಪಕ್ಷಪಾತಿ ಹೋರಾಟವಾಗಿ ಮಾಡುವ ಬದಲು ಕಾಂಗ್ರೆಸ್ ವಿರುದ್ಧದ ವಿಮೋಚನಾ ಸಮರ ಎಂಬ ತಪ್ಪಾದ ಮಾರ್ಗದರ್ಶನ ನೀಡಲಾಗಿತ್ತು.

ಆದರೆ, ಹೊಸ ಕಾಂಗ್ರೆಸ್ ಸರ್ಕಾರವು ದೇಶದೆಲ್ಲೆಡೆಯ ಜನರಿಂದ ದೂರವಾಗಿರಲಿಲ್ಲ. ಸೆಪ್ಟೆಂಬರ್ 1948ರಲ್ಲಿ ಸೇನೆಯು ಮಧ್ಯಪ್ರವೇಶ ಮಾಡುವ ಮುಂಚೆಯಾಗಲೀ ಅಥವಾ ಅಕ್ಟೋಬರ್ 1951ರವರೆಗೆ ಸತತ ಮೂರು ವರ್ಷಗಳ ಕಾಲ ನಡೆದ ತೆಲಂಗಾಣ ಸಶಸ್ತ್ರ ಪ್ರತಿರೋಧದ ಸಂದರ್ಭದಲ್ಲಾಗಲೀ ತೆಲಂಗಾಣ ಹೋರಾಟಕ್ಕೆ ಬೆಂಬಲವಾಗಿ ಕಾರ್ಮಿಕ ವರ್ಗದ ಸಹಾನುಭೂತಿ ಹೋರಾಟ ಅಥವಾ ಮುಷ್ಕರ ನಡೆಯಲಿಲ್ಲ.

ತೆಲಂಗಾಣ ಸಶಸ್ತ್ರ ಪಕ್ಷಪಾತಿ ಪ್ರತಿರೋಧವನ್ನು ಮುಂದುವರಿಸಲಾಗಲಿಲ್ಲ ಮತ್ತು ಅದನ್ನು ಹಿಂಪಡೆಯುವ ಸಮಯ ಬಂದಿದೆ ಎಂದು ಅವತ್ತಿನ ಸನ್ನಿವೇಶದಲ್ಲಿ ನಿರ್ಧಾರ ಮಾಡಲಾಯಿತು. ಈ ತೀರ್ಮಾನ ಕೈಗೊಳ್ಳಲು ಕಾರಣವಾದ ಅಂಶಗಳು: ಮೊಟ್ಟ ಮೊದಲನೆಯದು, ಹೋರಾಡುತ್ತಿದ್ದ ಗೆರಿಲ್ಲಾಗಳ ಬಗ್ಗೆ ಅನುಕಂಪವಿದ್ದಾಗ್ಯೂ, ತೆಲಂಗಾಣ ಚಳುವಳಿಯ ಸುಭದ್ರ ಕೋಟೆಯಲ್ಲೇ ಜನರ ಪಾಲ್ಗೊಳ್ಳುವಿಕೆ ಕಡಿಮೆಯಾಗಿತ್ತು.

ಎರಡನೆಯದು, ಮಿಲಿಟರಿ ಮತ್ತು ಪೋಲಿಸ್ ಪಾಳೆಯದ ಜಾಲವು ಹೆಚ್ಚಾಗುತ್ತಿದ್ದ ಮತ್ತು ಜನರ ಪಾಲ್ಗೊಳ್ಳುವಿಕೆ ಕಡಿಮೆಯಾಗುತ್ತಿದ್ದ ಸನ್ನಿವೇಶದಲ್ಲಿ ಗೆರಿಲ್ಲಾ ತಂಡಗಳು, ಶತ್ರುವಿನ ಸಶಸ್ತ್ರ ಸೈನ್ಯದ ದಾಳಿಗಳ ಮುಂದೆ ತಮ್ಮ ಕಾರ್ಯಾಚರಣೆಯಲ್ಲಿ ಕ್ರಮೇಣವಾಗಿ ಕುಗ್ಗಿಹೋಗುತ್ತಿದ್ದರು. ಎಲ್ಲಾ ಪ್ರದೇಶಗಳಲ್ಲಿಯೂ, ಸಶಸ್ತ್ರ ಸೇನೆಯ ವಿರುದ್ಧ ಸಂಖ್ಯೆಯಲ್ಲೂ ಕ್ರಮೇಣವಾಗಿ ಕರಗುತ್ತಿದ್ದರು. ತಂಡಗಳ ಕಾರ್ಯಾಚರಣೆಗಳು ಹೆಚ್ಚಾಗಿ ವೈರಿಗಳ ವ್ಯಕ್ತಿಗತ ಏಜಂಟರುಗಳು ಮತ್ತು ವ್ಯಕ್ತಿಗತ ಜಮೀನ್ದಾರರ ವಿರುದ್ಧ ಆಗುತ್ತಿದ್ದವು. ಸಶಸ್ತ್ರ ಹೋರಾಟವನ್ನು ಮುಂದುವರಿಸಿದ್ದಿದ್ದರೆ, ಅದು ವ್ಯಕ್ತಿಗತ ಭಯೋತ್ಪಾದನೆಯತ್ತ ಸಾಗುವ ಎಲ್ಲಾ ಅಪಾಯಗಳು ಇದ್ದವು.

ಮೂರನೆಯದು, ಸಾಗುವಳಿ ಮಾಡಿದ ಬರಡು ಭೂಮಿಯು ಹೆಚ್ಚಿನ ಭಾಗವು ರೈತರ ವಶದಲ್ಲಿರುವಾಗಲೇ, ವಶಪಡಿಸಿಕೊಂಡಿದ್ದ ಹೆಚ್ಚುವರಿ ಭೂಮಿಯ ಬಹಳಷ್ಟನ್ನು ಅವರು ಕಳೆದುಕೊಂಡಿದ್ದರು. ಹಲವಾರು ಪ್ರಕರಣಗಳಲ್ಲಿ ಅದು ಬಹಳ ಚಿಕ್ಕದು ಹಾಗೂ ನಾಮ ಮಾತ್ರವಷ್ಟೆ ಆಗಿದ್ದಾಗ್ಯೂ, ಅವರ ವಶದಲ್ಲಿರುವ ಜಮೀನಿಗೂ, ಗೇಣಿ ನೀಡುವಂತೆ ಬಲವಂತ ಮಾಡಲಾಗುತ್ತಿತ್ತು. ಸಶಸ್ತ್ರ ಪ್ರತಿರೋಧದಿಂದ ಇವುಗಳನ್ನು ಹಿಂದಕ್ಕೆ ಪಡೆಯಲು ಅಥವಾ ಕಾಪಾಡಿಕೊಳ್ಳಲು ಸ್ವಲ್ಪವೂ ಆಗಲಿಲ್ಲ.

ನಾಲ್ಕನೆಯದು, ದೇಶದೆಲ್ಲೆಡೆ ಆಳುವ ವರ್ಗಗಳು ತಮ್ಮ ಸ್ಥಾನವನ್ನು ಬಲಪಡಿಸಿಕೊಂಡರು ಮತ್ತು ದೇಶದಲ್ಲಿ ಎಲ್ಲಿಯೂ ಕೂಡ ತೆಲಂಗಾಣ ಹೋರಾಟದ ಪರವಾಗಿ ಪ್ರಧಾನವಾದ ಸಹಾನುಭೂತಿ ಕಾರ್ಯಾಚರಣೆಯಾಗಲೀ ಮತ್ತು ಆಂದೋಲನಗಳಾಗಲೀ ನಡೆಯಲಿಲ್ಲ.

ಐದನೆಯದು, ಚಳುವಳಿಯನ್ನು ಮುಂದಕ್ಕೆ ಕೊಂಡೊಯ್ಯುವುದರ ಬಗ್ಗೆ ನಾಯಕತ್ವದಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡವು.

ಆರನೆಯದು, ಹೋರಾಟದ ಕಣದಲ್ಲೇ, ಗೆರಿಲ್ಲಾ ನಾಯಕರ ನಡುವೆಯೇ, ಭಿನ್ನಾಭಿಪ್ರಾಯಗಳು ಬೆಳೆಯಲು ಪ್ರಾರಂಭವಾದವು ಮತ್ತು ತಂಡಗಳಿಂದಲೇ ಮತ್ತು ಕೇಂದ್ರ ಸಂಘಟಕರಿಂದಲೇ ಕಾದಾಟ ಬಿಟ್ಟು ಓಡಿಹೋಗುವುದು ಶುರುವಾಯಿತು. ಇದು ಗಂಭೀರ ಎಚ್ಚರಿಕೆಯ ಗಂಟೆಯಾಯಿತು.

ಕೊನೆಯದು, ಅಪೂರ್ಣವಾದ ಪಕ್ಷಪಾತಿ ಹೋರಾಟ ಮತ್ತು ವಿಮೋಚನಾ ಹೋರಾಟದ ಭಾಗವಾದ ಪಕ್ಷಪಾತಿ ಸಮರದ ನಡುವಿನ ವ್ಯತ್ಯಾಸವನ್ನು ಅರಿಯುವಲ್ಲಿ ದೊರೆತ ಸ್ಪಷ್ಟತೆಯು, ಮುಂದಿನ ತಂತ್ರಗಾರಿಕೆಯನ್ನು ತೀರ್ಮಾನಿಸುವ ಕಾರ್ಯವನ್ನು ಸಲೀಸು ಮಾಡಿತು.

ಹೊಸ ಗ್ರಹಿಕೆಯನ್ನು ವಿವರಿಸಲು ಮತ್ತು ತೆಲಂಗಾಣ ಹೋರಾಟಗಾರರ ಭದ್ರತೆಗೆ ಕನಿಷ್ಠ ಭರವಸೆ ಮತ್ತು ರೈತರ ವಶದಲ್ಲೇ ಇರುವ ಜಮೀನನ್ನು ಅವರಿಗೇ ಬಿಟ್ಟುಕೊಡುವ ಭರವಸೆಯನ್ನು ಸರ್ಕಾರದಿಂದ ಪಡೆಯುವ ತನಕ ಹೋರಾಟವನ್ನು ಮುಂದುವರಿಸಲು ಸಮರ್ಥರಿದ್ದಾರೆಯೇ ಎಂಬುದನ್ನು ತಂಡಗಳಿಂದಲೇ ತಿಳಿದುಕೊಳ್ಳಲು ತೆಲಂಗಾಣ ಚಳುವಳಿಯ ನಾಯಕತ್ವದಲ್ಲಿದ್ದ ಮುಖಂಡರು ಕಾಡು ಮೇಡುಗಳಲ್ಲಿ ಸುತ್ತಾಡಿದರು.

ಅಮರಾಬಾದ್ ಪ್ರಾದೇಶಿಕ ಕಮ್ಯುನಿಸ್ಟರ ಮತ್ತು ಗೆರಿಲ್ಲಾಗಳ ಸಮ್ಮೇಳನವು ಅಂಗೀಕರಿಸಿದ ನಿರ್ಣಯವು ಹಿಮ್ಮೆಟ್ಟುವ ತಂತ್ರವನ್ನು ವಿವರಿಸಿತು ಮತ್ತು ಹೋರಾಟದ ಪರಂಪರೆಯನ್ನು ಮುಂದೆ ಕೊಂಡೊಯ್ಯಲು ಪ್ರತಿಜ್ಞೆ ಮಾಡಿತು. "ಚಳುವಳಿಯು ಅತ್ಯಂತ ಹುರುಪಿನಿಂದ ಮುನ್ನಡೆಯುತ್ತಿರುವಾಗ ಯಾವ ರೀತಿಯಲ್ಲಿ ಮತ್ತು ಯಾವ ಕೌಶಲ್ಯದೊಂದಿಗೆ ಮುನ್ನುಗ್ಗುತ್ತೇವೆಯೋ, ಹಾಗೆಯೇ ಯಾವಾಗ ಪ್ರತಿಕೂಲ ಪರಿಸ್ಥಿತಿಯು ಹಿಂದೆ ಸರಿಯಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆಯೋ ಆಗ ನಾವೇ ಮುಂದಾಗಿ ಅಗತ್ಯವಾದ ಕ್ರಮಗಳನ್ನು ಅಳವಡಿಸಿಕೊಂಡು ಧೈರ್ಯದಿಂದ ಹಿಂದೆ ಸರಿಯಬೇಕು. ಹಿಂದೆ ಸರಿಯಬೇಕಾಗಿ ಬಂದ ಸ್ಥಿತಿಯಿಂದಾಗಿ ನಾವು ಧೃತಿಗೆಡಬೇಕಾದ ಅಗತ್ಯವಿಲ್ಲ. ನಮ್ಮ ಚಳುವಳಿಯ ಅನುಭವಗಳ ಆಧಾರದಲ್ಲಿ, ನಮಗೆ ಜನರೊಂದಿಗೆ ಇರುವ ಆಳವಾದ ಬೇರೂರಿದ ಬಾಂಧವ್ಯದ ಆಧಾರದಲ್ಲಿ, ನಮ್ಮ ಹೊಸ ಕಾರ್ಯಕ್ರಮ ಹಾಗೂ ಹೊಸ ರಣತಂತ್ರದ ಆಧಾರದಲ್ಲಿ ರಾಷ್ಟ್ರೀಯ ಐಕ್ಯತೆ ಹಾಗೂ ಸ್ವಾತಂತ್ರ್ಯವನ್ನು ಗಳಿಸುವುದರ ಮೂಲಕ, ನಾವು ತೆಲಂಗಾಣ ಚಳುವಳಿಯ ದೌರ್ಬಲ್ಯಗಳನ್ನು ತೊಡೆದುಹಾಕುತ್ತೇವೆ ಮತ್ತು ತೆಲಂಗಾಣ ಜನರ ಹೋರಾಟವನ್ನು ಇನ್ನೂ ಬಲಿಷ್ಠವಾಗಿ ಕಟ್ಟುತ್ತೇವೆಂಬ ಅದಮ್ಯ ವಿಶ್ವಾಸ ನಮಗಿದೆ. ಭಾರತದಲ್ಲಿ ನಮ್ಮ ಭಾಗದ ಜನತಾ ಪ್ರಜಾಪ್ರಭುತ್ವ ಚಳುವಳಿಯನ್ನು ಕೊಂಡೊಯ್ಯುತ್ತೇವೆ ಎಂದು ನಾವು ಪ್ರತಿಜ್ಞೆ ಮಾಡುತ್ತೇವೆ." ಎಂದು ಆ ನಿರ್ಣಯ ಹೇಳಿತು.

ತೆಲಂಗಾಣ ಜನರ ಸಶಸ್ತ್ರ ಹೋರಾಟವನ್ನು ಹಿಂಪಡೆಯುವ ನಿರ್ಧಾರವನ್ನು ಅಕ್ಟೋಬರ್ 21, 1951ರಂದು ಪ್ರಕಟಿಸಲಾಯಿತು.

ಅಂಚೆ ಮತದಾನ ಕ್ರಮಕ್ಕೆ ಏಕೆ ಈ ತರಾತುರಿ?– ಚುನಾವಣಾ ಆಯುಕ್ತರಿಗೆ ಯೆಚುರಿ ಪತ್ರ

ಪುಟ 2 ರಿಂದ

ತರುವಲ್ಲಿ ಒಮ್ಮತವನ್ನು ಬೆಸೆಯುವಲ್ಲಿ ರಾಜಕೀಯ ಪಕ್ಷಗಳನ್ನು ತಪ್ಪದೇ ತೊಡಗಿಸಿಕೊಳ್ಳಲಾಗುತ್ತಿತ್ತು. 'ಮಾದರಿ ಚುನಾವಣಾ ಸಂಹಿತೆ' (ಎಂಸಿಸಿ) ಒಂದು ಪ್ರಮುಖ ಚುನಾವಣಾ ಸುಧಾರಣೆಯಾಗಿದ್ದು, ಇದನ್ನು ಎಲ್ಲ ಬಣ್ಣಗಳ ರಾಜಕೀಯ ಪಕ್ಷಗಳ ನಡುವೆ ಒಂದು ಒಮ್ಮತವನ್ನು ಮೂಡಿಸುವ ಮೂಲಕ ರೂಪಿಸಲಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇದಕ್ಕೆ ಕಾನೂನು ಅಧಿಕಾರ ಇಲ್ಲದಿದ್ದರೂ ಇದನ್ನು ಎಂದೂ ಪ್ರಶ್ನಿಸಲಾಗಿಲ್ಲ. ಈ ಕ್ರಮ ಚುನಾವಣಾ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಗಟ್ಟಿಗೊಳಿಸಿ ವ್ಯಾಪಕ ಪ್ರಶಂಸೆಯನ್ನು ಗಳಿಸಿದೆ.

ಈ ಹಿಂದಿನ ಇಂತಹ ಎಲ್ಲ ಆಚರಣೆಗಳಿಗೆ ವ್ಯತಿರಿಕ್ತವಾಗಿ, ಆಯೋಗ ಚುನಾವಣಾ ನಿಯಮಗಳಲ್ಲಿ ಅಕ್ಟೋಬರ್ 2019ರ ಮತ್ತು ಜೂನ್ 19, 2020ರ ಬದಲಾವಣೆಗಳನ್ನು ತರುವ ಮೊದಲು ರಾಜಕೀಯ ಪಕ್ಷಗಳೊಡನೆ ಯಾವುದೇ ಸಮಾಲೋಚನೆಯನ್ನು ನಡೆಸಿಲ್ಲ. ಈ ವಿಷಯದಲ್ಲಿ ಚುನಾವಣಾ ಆಯೋಗ ವಿಪರೀತ ತರಾತುರಿಯನ್ನು ಪ್ರದರ್ಶಿಸುತ್ತಿರುವುದು ನವಂಬರ್ 2020ರಲ್ಲಿ ನಡೆಯಬೇಕಾಗಿರುವ ಬಿಹಾರ ವಿಧಾನಸಭಾ ಚುನಾವಣೆಗಳಿಂದಾಗಿ ಎಂದೇ ಮಾಧ್ಯಮ ವರದಿಗಳಿಂದ ನಾವು ಭಾವಿಸಬೇಕಾಗುತ್ತದೆ ಎಂದು ಯೆಚುರಿಯವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ನಮ್ಮ ಚುನಾವಣಾ ವ್ಯವಸ್ಥೆ ಮತದಾರರ ದೈಹಿಕವಾಗಿ ದೃಢೀಕರಣ ನಡೆಸುವುದು ಸಮಗ್ರತೆಯ ಬುನಾದಿ ಎಂದೇ ಸದಾ ಪರಿಗಣಿಸಿದೆ. ನಿಯಮಗಳಲ್ಲಿ ಈ ಎರಡು ತಿದ್ದುಪಡಿಗಳಿಂದಾಗಿ ದೊಡ್ಡ ಸಂಖ್ಯೆಯ ಮತದಾರರು ಈ ದೃಢೀಕರಣ ಚೌಕಟ್ಟಿನಿಂದ ಹೊರ ಹೋಗುತ್ತಾರೆ. ಇದುವರೆಗೆ ಬಹಳ ಕಡಿಮೆ ಸಂಖ್ಯೆಯಲ್ಲಿರುವ ಚುನಾವಣಾ ಕರ್ತವ್ಯದ ಸಿಬ್ಬಂದಿ ಮತ್ತಿತರರು ಮಾತ್ರ ಅಂಚೆ ಮತದಾನವನ್ನು ಬಳಸುತ್ತಿದ್ದಾಗಲೂ ಇದರ ದುರುಪಯೋಗದ, ವಂಚನೆಯ ಉದಾಹರಣೆಗಳಿರುವಾಗ ಈ ಸಂಖ್ಯೆ ವಿಪರೀತವಾಗಿ ಹೆಚ್ಚುವುದು ಬಹಳ ಮಹತ್ವ ಪಡೆಯುತ್ತದೆ.

ಈ ರೀತಿ ಬಹುಸಂಖ್ಯೆಯಲ್ಲಿ ಮತದಾರರ ದೃಢೀಕರಣದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಬಹುದಾದ ಹೊಸ ಮತದಾನದ ಆಚರಣೆಗಳನ್ನು ಆರಂಭಿಸುವ ಮೊದಲು ಈ ಕುರಿತು ರಾಜಕೀಯ ಪಕ್ಷಗಳ ನಡುವೆ ಒಂದು ಒಮ್ಮತ ಮೂಡಿಸುವುದು ಅಗತ್ಯ. ಏಕೆಂದರೆ ಈ ರೀತಿ ಅಂಚೆ ಮತದಾನ ಸಂಘಟಿಸುವಲ್ಲಿ ಆಡಳಿತದಲ್ಲಿ ಇರುವವರಿಗೆ ಹೆಚ್ಚಿನ ಪ್ರಯೋಜನ ಸಿಗುತ್ತದೆ, ಅದು ಈ ಇಡೀ ಪ್ರಕ್ರಿಯೆಯ ಪಾರದರ್ಶಕತೆ ಮತ್ತು ಸಮಗ್ರತೆಯ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತದೆ.

ಈಗಾಗಲೇ ಅಪಾರದರ್ಶಕವಾದ ಚುನಾವಣಾ ಬಾಂಡ್ ಪ್ರಶ್ನೆ ಇನ್ನೂ ಸುಪ್ರಿಂ ಕೋರ್ಟ್ ಎದುರಲ್ಲಿದೆ. ಇದು ಚುನಾವಣಾ ಆದಾಯ/ವೆಚ್ಚಗಳ ಉಸ್ತುವಾರಿ ನಡೆಸುವಲ್ಲಿ ಒಂದು ದೊಡ್ಡ ಸವಾಲೊಡ್ಡಿದೆ ಎಂದು ಸ್ವತಃ ಚುನಾವಣಾ ಆಯೋಗವೇ ಒಪ್ಪಿಕೊಂಡಿದೆ. ಈಗ ಈ ಅಂಚೆ ಮತದಾನ ಆಳುವ ಪಕ್ಷದ ಪರವಾಗಿ ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದ್ವೆಂಬ ಸಂಗತಿಯನ್ನು ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತರುತ್ತ ಯೆಚುರಿಯವರು, "ಇದರಿಂದಾಗಿ ಚುನಾವಣಾ ಆಯೋಗ ಈ ಬದಲಾವಣೆಗಳನ್ನು ರಾಜಕೀಯ ಪಕ್ಷಗಳೊಂದಿಗೆ ಸರಿಯಾದ ಮತ್ತು ಪಾರದರ್ಶಕ ಸಮಾಲೋಚನೆ ಇಲ್ಲದೆ ಜಾರಿಗೊಳಿಸಲು ಏಕಪಕ್ಷೀಯವಾಗಿ ಮುಂದುವರೆಯಬಾರದು ಎಂದು ನಿಸ್ಸಂದಿಗ್ಧವಾಗಿ ಹೇಳ ಬಯಸುತ್ತೇವೆ" ಎಂದು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಈ ಮೂಲಕ ಎಲ್ಲ ರಾಜಕೀಯ ಪಕ್ಷಗಳಿಗೂ ಸಮಾನ ಅವಕಾಶ ಲಭ್ಯಗೊಳಿಸುವ ಚುನಾವಣಾ ಆಯೋಗದ ಅತ್ಯುತ್ತಮ ಪರಂಪರೆಗಳನ್ನು ಎತ್ತಿ ಹಿಡಿದಂತಾಗುತ್ತದೆ, ಈ ಪರಂಪರೆ ಇನ್ನೂ ಮುಕ್ತ ಮತ್ತು ನ್ಯಾಯಯುತ ಮತದಾನದ ಒಂದು ಬುನಾದಿ ಆಗಿಯೇ ಉಳಿದಿದೆ ಎಂದು ಅವರು ನೆನಪಿಸುತ್ತ ತಮ್ಮ ಈ ಪತ್ರವನ್ನು ಮುಖ್ಯ ಚುನಾವಣಾ ಆಯುಕ್ತರು ಸಕಾರಾತ್ಮಕವಾಗಿ ಪರಿಶೀಲಿಸುತ್ತಾರೆ ಎಂದು ಆಶಿಸಿದ್ದಾರೆ.

ಚುನಾವಣಾ ಆಯೋಗ ಒಮ್ಮತ ರೂಪಿಸುವ ಆರೋಗ್ಯಕರ ಪರಂಪರೆಗೆ ಬದ್ಧವಾಗಬೇಕು
ಆಯೊಗದ ಪ್ರತಿಕ್ರಿಯೆಗೆ ಸಿಪಿಐ(ಎಂ) ಪುನರುಚ್ಚಾರ

ಚುನಾವಣಾ ಅಯೋಗ ಅಂಚೆ ಮತದಾನ ಕ್ರಮವನ್ನು ರಾಜಕೀಯ ಪಕ್ಷಗಳೊಡನೆ ಚರ್ಚಿಸಿದೆ ಎಂದು ಹೇಳಿಕೆ ನೀಡಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ಚುನಾವಣಾ ಆಯೋಗ ರಾಜಕೀಯ ಪಕ್ಷಗಳೊಡನೆ ಸಮಾಲೋಚನೆ ನಡೆಸುವ ತನ್ನ ಎಂದಿನ ಆಚರಣೆಯನ್ನು ಪಾಲಿಸದೆ ಚುನಾವಣಾ ವಿಧಾನಗಳಲ್ಲಿ ಬದಲಾವಣೆಗಳನ್ನು ತರುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರ ಪತ್ರಕ್ಕೆ ಪ್ರತಿಕ್ರಿಯಿಸುತ್ತ ನೀಡಿರುವ ಹೇಳಿಕೆ. ಈ ಕುರಿತು ಉಪ ಚುನಾವಣಾ ಆಯುಕ್ತ ಶ್ರೀ ಚಂದ್ರ ಭೂಷಣ ಕುಮಾರ್ ಅವರು ಸಿಪಿಐ(ಎಂ) ಕೇಂದ್ರ ಸಮಿತಿಗೂ ಪತ್ರ ಬರೆದಿದ್ದಾರೆ. ಈ ಪತ್ರಕ್ಕೆ ಪ್ರತ್ಯುತ್ತರ ನೀಡುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ನೀಲೋತ್ಪಲ ಬಸು ಚುನಾವಣಾ ಆಯೋಗ ಒಮ್ಮತ ರೂಪಿಸುವ ತನ್ನ ಆರೋಗ್ಯಕರ ಪರಂಪರೆಗೆ ಬದ್ಧವಾಗಬೇಕು ಎಂದು ಪುನರುಚ್ಚರಿಸಿದ್ದಾರೆ.

ಬಸುರವರು ಚುನಾವಣಾ ಆಯೋಗದ ಪ್ರತಿಕ್ರಿಯೆಯಲ್ಲಿನ ನಾಲ್ಕು ಅಂಶಗಳ ಬಗ್ಗೆ ತಮ್ಮ ಪ್ರತ್ಯುತ್ತರದಲ್ಲಿ ಪ್ರಸ್ತಾಪಿಸಿದ್ದಾರೆ.

1. ಯೆಚುರಿಯವರ ಪತ್ರ ಚುನಾವಣಾ ಆಯೋಗಕ್ಕೆ ತಲುಪುವ ಮೊದಲೇ ಮಾಧ್ಯಮಗಳಿಗೆ ಲಭ್ಯಗೊಳಿಸಲಗಿದೆ ಎಂಬ ಉಪ ಚುನಾವಣಾ ಆಯುಕ್ತರ ಮಾತು ಸರಿಯಲ್ಲ. ಆಯೋಗಕ್ಕೆ ಪತ್ರವನ್ನು ತಲುಪಿಸಿ ಅದಕ್ಕೆ ಸ್ವೀಕೃತಿಯ ಮೊಹರು ಬಿದ್ದ ಮೇಲೆಯೇ ಅದನ್ನು ಮಾಧ್ಯಮಗಳಿಗೆ ಲಭ್ಯಗೊಳಿಸಲಾಗಿದೆ. ಇದು ಕ್ರಮಬದ್ಧವಾಗಿಯೇ ಇದೆ.

2. ಯೆಚುರಿಯವರ ಪತ್ರದಲ್ಲಿ ಅಂಚೆ ಮತದಾನವನ್ನು ವಿಸ್ತರಿಸಲು ಸಂವಿಧಾನದ ಕಲಮು 324ನ್ನು ಬಳಸಲಾಗಿದೆ ಎಂದೇನೂ ಸಿಪಿಐ(ಎಂ) ಹೇಳಿಲ್ಲ, ಬದಲಿಗೆ, ಈ ಕಲಮಿನ ಅಡಿಯಲ್ಲಿ ಅಧಿಕಾರವಿದ್ದರೂ ಅಯೋಗ ತನ್ನ ಅಧಿಕಾರವನ್ನು ಏಕಪಕ್ಷೀಯವಾಗಿ ಬಳಸುವುದಿಲ್ಲ ಎಂದು ಸದಾ ಒತ್ತು ನೀಡಿ ಹೇಳುತ್ತಿತ್ತು, ಈ ಮೂಲಕ ಆಯೋಗ ಕಳೆದ ಏಳು ದಶಕಗಳಲ್ಲಿ ಸ್ಥಾಪಿಸಿರುವ ಉತ್ತಮ ಪರಂಪರೆಯನ್ನು ಪ್ರಶಂಸಿಸುತ್ತ, ಅದನ್ನು ಈ ವಿಷಯದಲ್ಲಿ ಅನುಸರಿಸಲಾಗಿಲ್ಲ ಎಂದಷ್ಟೇ ಸಿಪಿಐ(ಎಂ) ಹೇಳಿತ್ತು.

3. ಬಿಹಾರದ ಮುಖ್ಯ ಚುನಾವಣಾ ಅಧಿಕಾರಿ ಒಂದು ಸಭೆ ಕರೆದಿದ್ದರು ಎಂಬುದು ಸಿಪಿಐ(ಎಂ)ಗೆ ಗೊತ್ತಿತ್ತು. ನಿಜ, ಅದರಲ್ಲಿ ಎತ್ತಿದ ಹಲವು ಪ್ರಶ್ನೆಗಳಲ್ಲಿ ಅಂಚೆ ಮತದಾನದ ವಿಸ್ತರಣೆಯೂ ಒಂದಾಗಿತ್ತು. ಆದರೆ ಆ ಸಭೆಯನ್ನು ಕರೆದಿದ್ದು ಈ ವಿಷಯದ ಬಗ್ಗೆ ರಾಜಕೀಯ ಪಕ್ಷಗಳ ಅಭಿಪ್ರಾಯವನ್ನು ಕೇಳಲು ಅಲ್ಲ, ಬದಲಿಗೆ ಆಯೋಗದ ಒಂದು ನಿರ್ಧಾರದ ಮಾಹಿತಿ ನೀಡಲು ಮಾತ್ರ. ಅದೇನೇ ಇರಲಿ, ಇದು ಇಡೀ ದೇಶಕ್ಕೆ ಸಂಬಂಧಪಟ್ಟ ವಿಚಾರವಾದ್ದರಿಂದ ಒಂದು ರಾಜ್ಯದ ಚುನಾವಣಾ ಅಧಿಕಾರಿ ಕರೆದ ಸಭೆ ರಾಷ್ಟ್ರೀಯ ಮಟ್ಟದ ಸಮಾಲೋಚನೆಗೆ ಬದಲಿಯಾಗಲು ಸಾಧ್ಯವಿಲ್ಲ.

4. ಮಾರ್ಚ್ 24, 2020ರ ಮಧ್ಯರಾತ್ರಿಯಿಂದ ಅಂಚೆ ಮತದಾನದ ವಿಸ್ತರಣೆಗೆ ಮಾರ್ಗದರ್ಶಕ ಸೂತ್ರಗಳನ್ನು ಹೊರಡಿಸಲಾಗಿದೆ ಎಂದು ಚುನಾವಣಾ ಆಯೋಗದ ಪತ್ರ ಹೇಳುತ್ತದೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಎತ್ತಿರುವುದು ಈ ಅಂಶವನ್ನೇ. ಅವನ್ನು ಹೊರಡಿಸುವ ಮೊದಲು ರಾಜಕೀಯ ಪಕ್ಷಗಳೊಡನೆ ಒಂದು ರಾಷ್ಟ್ರೀಯ ಮಟ್ಟದ ಸಮಾಲೋಚನೆ ಖಂಡಿತಾ ಸಾಧ್ಯವಿತ್ತು, ಅದಕ್ಕೆ ಸೂಕ್ತ ಡಿಜಿಟಲ್ ತಂತ್ರಜ್ಞಾನವನ್ನು ಬಳಸಬಹುದಾಗಿತ್ತು. ಕಳೆದ ಏಳು ದಶಕಗಳಲ್ಲಿ ಈ ರೀತಿಯ ಸಮಾಲೋಚನೆ ಸಾಮಾನ್ಯ ಆಚರಣೆಯಾಗಿತ್ತು.

ಆದ್ದರಿಂದ, ಆಯೋಗ ಸ್ವತಂತ್ರ ಭಾರತದ ಏಳು ದಶಕಗಳಲ್ಲಿ ತಾನೇ ವಿಕಾಸಗೊಳಿಸಿರುವ ಉತ್ತಮ ಆಚರಣೆಯನ್ನು ಪಾಲಿಸಬೇಕು ಮತ್ತು ಚುನಾವಣೆಗಳನ್ನು ನಡೆಸುವ ವಿಧಾನಗಳಲ್ಲಿ ಯಾವುದೇ ಬದಲಾವಣೆಯನ್ನು ತರುವ ಮೊದಲು ರಾಜಕೀಯ ಪಕ್ಷಗಳ ನಡುವೆ ಒಮ್ಮತವನ್ನು ಬೆಸೆಯುವ ಆರೋಗ್ಯಕರ ಪರಂಪರೆಯನ್ನು ಎತ್ತಿ ಹಿಡಿಯಬೇಕು ಎಂಬುದೇ ಸಿಪಿಐ(ಎಂ)ನ ಆಕಾಂಕ್ಷೆ ಎಂದು ನೀಲೋತ್ಪಲ ಬಸುರವರು ಚುನಾವಣಾ ಆಯೋಗದ ಉಪ ಆಯುಕ್ತರಿಗೆ ಬರೆದಿರುವ ಪ್ರತ್ಯುತ್ತರದಲ್ಲಿ ಹೇಳಿದ್ದಾರೆ.

ಇಸ್ರೇಲಿ ಅಕ್ರಮ ಭೂಸ್ವಾಧೀನದ ವಿರುದ್ಧ ವ್ಯಾಪಕ ಪ್ರತಿಭಟನೆ

ಜಗದ ಸುತ್ತ

ನಾಗರಾಜ ನಂಜುಂಡಯ್ಯ



ಪ್ಯಾಲೆಸ್ತೈನ್ ಜನ ಸಮುದಾಯ ವಾಸಿಸುತ್ತಿರುವ ಪಶ್ಚಿಮ ದಂಡೆ, ಪೂರ್ವ ಜೆರುಸಲೆಮ್ ಮತ್ತು ಗಾಜಾ ಪಟ್ಟಿಯ– ಮೂರು ಪ್ಯಾಲೇಸ್ಟಿನಿಯನ್ ಪ್ರದೇಶಗಳ ಭೂಮಿಯನ್ನು ಅಕ್ರಮವಾಗಿ ಮತ್ತಷ್ಟು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಇಸ್ರೇಲ್ ಮುಂದುವರಿಸಿದೆ. ಇದು ಮಾನವ ಹಕ್ಕುಗಳ ಉಲಂಘನೆ ಎಂದು ವರದಿಯಲ್ಲಿ ವಿಶ್ವಸಂಸ್ಥೆ ಹೇಳಿದೆ. ಇಸ್ರೇಲ್ ನ ಈ ಅತಿಕ್ರಮಣವನ್ನು ಖಂಡಿಸಿ, ಯುಎಸ್, ಯುಕೆ, ಕೆನಡಾ ಜರ್ಮನಿ ಮತ್ತು ಸ್ಪೇನ್ ಮುಂತಾದ ದೇಶಗಳು ಸೇರಿದಂತೆ ವಿಶ್ವದಾದ್ಯಂತ ಜುಲೈ 1ರಂದು ಪ್ರತಿಭಟನೆಗಳನ್ನು ಆಯೋಜಿಸಿ, ಪ್ಯಾಲೇಸ್ಟಿನಿಯನ್ ಜನರಿಗೆ ಸೌಹಾರ್ದ ಬೆಂಬಲವನ್ನು ವ್ಯಕ್ತ ಪಡಿಸಲಾಗಿದೆ.

ಜೂನ್ 18 ಮತ್ತು 24 ರಂದು ವಿಶ್ವಸಂಸ್ಥೆಯ "ಮಾನವೀಯ ವ್ಯವಹಾರಗಳ ಸಮನ್ವಯ ಕಚೇರಿ"ಯು ಬಿಡುಗಡೆ ಮಾಡಿದ ಎರಡು ವರದಿಗಳ ಪ್ರಕಾರ, ಇಸ್ರೇಲ್ ಆಕ್ರಮಿತ ಪ್ಯಾಲೆಸ್ತೈನ್ ಪ್ರಾಂತ್ಯಗಳಲ್ಲಿ, ಇಸ್ರೇಲ್ ನ ಪ್ರಧಾನಿ ನ್ಯೇತನ್ಯಾಹು ರವರ ವಿವಾದಾತ್ಮಕ 'ಸ್ವಾಧೀನ ಯೋಜನೆ' ಮತ್ತು ಟ್ರಂಪ್ ನ 'ಶತಮಾನದ ಒಪ್ಪಂದ'ದ (ಈ ಒಪ್ಪಂದವನ್ನು ಮಧ್ಯ ಪ್ರಾಚ್ಯ ಶಾಂತಿ ಯೋಜನೆ ಎನ್ನಲಾಗಿದೆ.) ಅಡಿಯಲ್ಲಿ ಪ್ಯಾಲೆಸ್ತೈನ್ ಜನ ಸಮುದಾಯ ವಾಸಿಸುತ್ತಿರುವ ಪಶ್ಚಿಮ ದಂಡೆ, ಪೂರ್ವ ಜೆರುಸಲೆಮ್ ಮತ್ತು ಗಾಜಾ ಪಟ್ಟಿಯ– ಮೂರು ಪ್ಯಾಲೇಸ್ಟಿನಿಯನ್ ಪ್ರದೇಶಗಳ ಭೂಮಿಯನ್ನು ಅಕ್ರಮವಾಗಿ ಮತ್ತಷ್ಟು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಇಸ್ರೇಲ್ ಮುಂದುವರಿಸಿದೆ. ಇದು ಮಾನವ ಹಕ್ಕುಗಳ ಉಲಂಘನೆ ಎಂದು ವರದಿಯಲ್ಲಿ ವಿಶ್ವಸಂಸ್ಥೆ ಹೇಳಿದೆ. ಟ್ರಂಪ್ ನ 'ಶತಮಾನದ ಒಪ್ಪಂದ' ಸ್ವತಂತ್ರ ಪ್ಯಾಲೆಸ್ಟೈನ್ ಪ್ರಭುತ್ವ ರಚನೆ/ಮಾನ್ಯತೆಯ ಷರತ್ತಾಗಿ ಶೇ.30ರಷ್ಟು ಈಗ ಪ್ಯಾಲೆಸ್ಟೈನ್ ನಲ್ಲಿರುವ 'ಅಕ್ರಮ ಪ್ಯಾಲೆಸ್ಟೈನ್' ಪ್ರದೇಶಗಳನ್ನು ಇಸ್ರೇಲಿಗೆ ಒಪ್ಪಿಸಬೇಕು. ಇದನ್ನು ಪ್ಯಾಲೆಸ್ಟೈನ್ ಪ್ರಭುತ್ವ ಮಾತ್ರವಲ್ಲ, ಕೆಲವೇ ಬೆರಳೆಣಿಕೆಯ ದೇಶಗಳನ್ನು ಬಿಟ್ಟು ಹೆಚ್ಚು ಕಡಿಮೆ ಇಡೀ ಜಗತ್ತು ಅದು ತಾರತಮ್ಯದ ಏಕಪಕ್ಷೀಯ ಒಪ್ಪಂದ ಎಂದು ಖಂಡಿಸಿದೆ.

ಇಸ್ರೇಲಿ ಪ್ರಧಾನಿ ನ್ಯೇತನ್ಯಾಹು ಜುಲೈ 1ರಂದು ಸ್ವಘೋಷಿತ 'ಸ್ವಾಧೀನ ಯೋಜನೆ'ಯನ್ನು ಜಾರಿ ಮಾಡಲು ಆರಂಭಿಸುವುದದಾಗಿ ಘೋಷಿಸಿದ್ದರು. ಆದರೆ ಆಳುವ ಹೊಸ ಸಮ್ಮಿಶ್ರ ಕೂಟ ಮತ್ತು ಸರಕಾರದಲ್ಲಿ ಭಿನ್ನಾಭಿಪ್ರಾಯಗಳಿಂದಾಗಿ ಜಾರಿಯ ಆರಂಭ ಮುಂದೆ ಹೋಗಿದೆ.

ಇಸ್ರೇಲ್ ನ ಈ ಅತಿಕ್ರಮಣವನ್ನು ಖಂಡಿಸಿ, ಯುಎಸ್, ಯುಕೆ, ಕೆನಡಾ ಜರ್ಮನಿ ಮತ್ತು ಸ್ಪೇನ್ ಮುಂತಾದ ದೇಶಗಳು ಸೇರಿದಂತೆ ವಿಶ್ವದಾದ್ಯಂತ ಜುಲೈ 1ರಂದು ಪ್ರತಿಭಟನೆಗಳನ್ನು ಆಯೋಜಿಸಿ, ಪ್ಯಾಲೇಸ್ಟಿನಿಯನ್ ಜನರಿಗೆ ಸೌಹಾರ್ದ ಬೆಂಬಲವನ್ನು ವ್ಯಕ್ತ ಪಡಿಸಲಾಗಿದೆ.

ವಿಶ್ವಸಂಸ್ಥೆಯ ಎರಡು ವರದಿಗಳು

ಈ ಎರಡು ವರದಿಗಳು ಕ್ರಮವಾಗಿ ಮೇ 2020 ಮತ್ತು ಜೂನ್ 2020 ರ ಮೊದಲ 15 ದಿನಗಳ ಅವಧಿಯಲ್ಲಿ, ಇಸ್ರೇಲ್ ಸರ್ಕಾರ, ಸಶಸ್ತ್ರ ಪಡೆಗಳು ಮತ್ತು ಗುಪ್ತಚರ ಸೇವೆಗಳು ಒಟ್ಟಾಗಿ ಸೇರಿಕೊಂಡು, ನಡೆಸಿರುವ ಅಕ್ರಮ ಸ್ವಾಧೀನ ಪ್ರಕ್ರಿಯೆಯ ಭಾಗವಾಗಿ ಕೈಗೊಂಡ ಮಾನವ ಹಕ್ಕುಗಳ ಉಲ್ಲಂಘನೆಯ ಕೃತ್ಯಗಳ ಕುರಿತು ವರದಿಗಳು. ಮೂರು ಆಕ್ರಮಿತ ಪ್ರದೇಶಗಳಲ್ಲಿ ಪ್ಯಾಲೇಸ್ಟಿನಿಯನ್ ಜನರನ್ನು ವಶಪಡಿಸಿಕೊಂಡು ದಬ್ಬಾಳಿಕೆ ನಡೆಸಲು ಮಾಡಿದ ಕೃತ್ಯಗಳ ದತ್ತಾಂಶವನ್ನು ವರದಿಯಲ್ಲಿ ಸಂಗ್ರಹಿಸಲಾಗಿದೆ. ಎಲ್ಲಾ ಅಕ್ರಮ ವಸಾಹತುಗಳು ಮತ್ತು ಜೋರ್ಡನ್ ಕಣಿವೆ ಸೇರಿದಂತೆ ಅಕ್ರಮಿತ ಪಶ್ಚಿಮ ದಂಡೆಯ ಹೆಚ್ಚಿನ ಭಾಗಗಳು ಈ ವಿವಾದಾತ್ಮಕ ಕಾರ್ಯಯೋಜನೆಯ ಗುರಿಯಾಗಿದೆ.

ಇದೊಂದು ವಿವಾದಾತ್ಮಕವಾದ ಏಕಪಕ್ಷೀಯ ಯೋಜನೆಯಾಗಿದೆ. 2016 ರಿಂದಲೇ ಅಕ್ರಮವಾಗಿ ನಿರ್ಮಿಸಿದ್ದ ವಸಾಹತುಗಳನ್ನು ಎಲ್ಲಾ ಪ್ರದೇಶಗಳ ಮೇಲೆ ಇಸ್ರೇಲಿ ಸಾರ್ವಭೌಮತ್ವವನ್ನು ವಿಸ್ತರಿಸಲು ವಿನ್ಯಾಸಗೊಳಿಸಲಾದ ಪೂರ್ವ ನಿಯೋಜಿತ ಯೋಜನೆಯಾಗಿದೆ. ಇಸ್ರೇಲ್, ಅಂತರಾಷ್ಟ್ರೀಯ ಕಾನೂನನ್ನು ಉಲಂಘಿಸುವ ಕ್ರಮಕ್ಕೆ ಮುಂದಾದರೆ, ಮುಂದಿನ ಯಾವುದೇ ಮಾತುಕತೆಗಳಲ್ಲಿ, ಎರಡು ಪ್ರತ್ಯೇಕ ಪ್ರಭುತ್ವಗಳಿಗೆ ಪರಿಹಾರ ಕೊಡುವಾಗ, ಇಸ್ರೇಲ್ ಸ್ವಾಧೀನ ಪಡಿಸಿಕೊಂಡ ಪ್ರದೇಶಗಳನ್ನು ಪರಿಗಣಿಸುವುದಿಲ್ಲ. ಹಾಗಾಗಿ, ಸ್ವತಂತ್ರ ಪ್ಯಾಲೇಸ್ಟಿನಿಯನ್ ಪ್ರಭುತ್ವ ಸ್ಥಾಪನೆಯು ಇದರಿಂದಾಗಿ ಅಸಾಧ್ಯವಾಗುತ್ತದೆ ಎಂದು ಪ್ಯಾಲೇಸ್ಟಿನಿಯನ್ನರು ಪ್ರತಿಪಾದಿಸುತ್ತಾರೆ.

ವಿಶ್ವಸಂಸ್ಥೆಯ ಮೊದಲ ವರದಿಯಂತೆ, ಇಸ್ರೇಲ್ ಈಗಾಗಲೇ ಪ್ಯಾಲೆಸ್ತೈನ್ನಿನ ಇತರೆ ಭಾಗಗಳಲ್ಲಿ ತನ್ನ ಸ್ವಾಧೀನ ಪಡಿಸುಕೊಳ್ಳುವಿಕೆಯ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ಹಾಗೆಯೇ ಪ್ಯಾಲೇಸ್ಟೈನಿಯನ್ ಜನರ ವಿರುದ್ಧ ಇಸ್ರೇಲ್ ವರ್ಣಭೇದ ನೀತಿಯನ್ನು ಅನುಸರಿಸುತ್ತಾ ಬಂದಿದೆ. ಪ್ಯಾಲೆಸ್ತೈನ್ನಿಯರ ಸ್ಥಳಾಂತರ ಮತ್ತು ಅವರ ವಸತಿ ಕಟ್ಟಡಗಳು ಮತ್ತು ಇತರೆ ರಚನೆಗಳನ್ನು ಉರುಳಿಸಿದೆ. ಮೇ ತಿಂಗಳಲ್ಲಿ ಪಶ್ಚಿಮ ದಂಡೆಯಲ್ಲಿರುವ 50 ಪ್ಯಾಲೇಸ್ಟಿನಿಯನ್ ಒಡೆತನದ ಕಟ್ಟಡಗಳನ್ನು ಇಸ್ರೇಲ್ ಅಧಿಕಾರಿಗಳು ಕೆಡವಿ ಮುಟ್ಟುಗೋಲು ಹಾಕಿಕೊಂಡರು. ಇದರಿಂದಾಗಿ, 28 ಪ್ಯಾಲೇಸ್ಟಿನಿಯನ್ನರು ಆಂತರಿಕವಾಗಿ ಸ್ಥಳಾಂತರಗೊಂಡರು. ಆನಂತರ, ಇದರ ಪರಿಣಾಮ 220 ಜನರು ಜೀವನೋಪಾಯವನ್ನೇ ಮಾತ್ರವಲ್ಲದೆ, ಮೂಲಭೂತ ಅಗತ್ಯ ಸೇವೆಗಳಿಂದ ವಂಚಿತರಾದರು. ಇಂತಹ ಅತಿಕ್ರಮಗಳು ಇಸ್ರೇಲ್ ಆಕ್ರಮಣದಲ್ಲಿ ಈಗಾಗಲೇ ಹದಗೆಟ್ಟಿರುವ ಪ್ಯಾಲೇಸ್ಟಿನಿಯನ್ ಜನರ ಜೀವನದ ಗುಣಮಟ್ಟವನ್ನು ಮತ್ತಷ್ಟು ಹದೆಗೆಡಿಸಿದೆ. ಇದು ಮಾನವ ಹಕ್ಕುಗಳ ಉಲಂಘನೆ ಎಂದು ವರದಿ ಪ್ರಸ್ತಾಪಿಸಿದೆ.

ಈ ಅವಧಿಯಲ್ಲಿ, ಪ್ಯಾಲೇಸ್ಟಿನಿಯನ್ನರ ಕಟ್ಟಡಗಳಲ್ಲಿ 17 ಕಟ್ಟಡ ಗಳನ್ನು ಮೇ 27 ರ ಒಂದೇ ದಿನ ಕೆಡವಿ ಉರುಳಿಸಿ ವಶಪಡಿಸಿಕೊಳ್ಳಲಾಗಿದೆ. 2020 ರ ಮಾಸಿಕ ಸರಾಸರಿಗೆ ಹೋಲಿಸಿದರೆ, ಮೇ ತಿಂಗಳಲ್ಲಿ ಪ್ಯಾಲೇಸ್ಟಿನಿಯನ್ ಕಟ್ಟಡಗಳನ್ನು ಉರುಳಿಸುವ ಚಟುವಟಿಕೆಗಳಲ್ಲಿ, ಶೇ.20ರಷ್ಟು ಹೆಚ್ಚಳವಾಗಿದೆ ಎಂದು ವರದಿಯು ದಾಖಲೆ ಮಾಡಿದೆ.

ಅಂತರಾಷ್ಟ್ರೀಯ ಕಾನೂನು, ಮಾನವೀಯ ಕಾಳಜಿಯ ವಿಷಯಗಳು ಮತ್ತು ಆಕ್ರಮಿತ ಜನಸಂಖ್ಯೆಯ ಧಾರ್ಮಿಕ ಸೂಕ್ಷ್ಮ ತೆಗಳ ಬಗ್ಗೆ ಇಸ್ರೇಲ್ ಹೊಂದಿರುವ ಸಂಪೂರ್ಣ ನಿರ್ಲಕ್ಷ್ಯವನ್ನು ಇದು ತೋರಿಸುತ್ತದೆ. ಕೋವಿಡ್–19 ಬಿಕ್ಕಟ್ಟಿನ ಹೊರತಾಗಿಯೂ ಮತ್ತು ಮುಸ್ಲಿಂ ಪವಿತ್ರ ರಂಜಾನ್ ತಿಂಗಳಲ್ಲೇ ತನ್ನ ಉರುಳಿಸುವಿಕೆಯ ಚಟುವಟಿಕೆಗಳನ್ನು ಹೆಚ್ಚಿಸಿರುವುದು ಖಂಡನೀಯ ಎಂದಿದೆ ವರದಿ. ರಂಜಾನ್ ಅವಧಿಯಲ್ಲಿ 42 ಕಟ್ಟಡ ಗಳನ್ನು ನೆಲಸಮ ಮಾಡಿದೆ. ಇದು 2019 ರಲ್ಲಿ ಇದೇ ಅವಧಿಯಲ್ಲಿ ನೆಲಸಮ ಅಥವಾ ವಶಪಡಿಸಿಕೊಂಡ ಶೇ.13 ಕ್ಕಿಂತ ಹೆಚ್ಚು ಎನ್ನಲಾಗಿದೆ.

ಈ ವರದಿ ಹಲವು 'ಸ್ವ–ಧ್ವಂಸ'ದ ಪ್ರಕರಣಗಳ ಕುರಿತು ಹೇಳಿದೆ. ಇದು ಇಸ್ರೇಲಿ ಪಡೆಗಳಿಂದ ಪ್ಯಾಲೆಸ್ಟೈನಿಯನ್ನರ ವಸತಿಗಳ ವಿರುದ್ಧ ಕಾನೂನು ಬಾಹಿರತೆಯ ನೋಟೀಸು, ಧ್ವಂಸ ಮತ್ತು 'ಧ್ವಂಸದ ಖರ್ಚಿನ ದಂಡ' ವಸೂಲಿಯ ಅಮಾನವೀಯ ಕೃತ್ಯಗಳಿಂದ ಪೀಡಿತವಾದ ಪ್ಯಾಲೆಸ್ಟೈನಿಯನ್ನರ ಪ್ರತಿಕ್ರಿಯೆ. ಇದು 'ಧ್ವಂಸದ ಖರ್ಚಿನ ದಂಡ'ದಿಂದ ತಪ್ಪಿಸಿಕೊಳ್ಳಲು ಮತ್ತು ಮನೆಯ ಸಾಮಾನುಗಳು ಇಸ್ರೇಲಿ ಧ್ವಂಸದಲ್ಲಿ ನಷ್ಟವಾಗದಂತೆ ಮತ್ತು ಮುಂದೆ ಬಳಸಲಾಗುವಂತೆ ಉಳಿಸಿಕೊಳ್ಳುವ ಹತಾಶ ಪ್ರಯತ್ನ ಎಂದಿದೆ ವರದಿ.

ಜೂನ್ 2 ರಿಂದ 15 ರ ನಡುವೆ ನಡೆದ ಕೃತ್ಯಗಳನ್ನು ಎರಡನೇ ವರದಿಯು ಪ್ರಸ್ತುತ ಪಡಿಸಿದೆ. ಉರುಳಿಸುವಿಕೆ, ನೆಲಸಮ ಅಥವಾ ವಶ ಪಡಿಸಿಕೊಳ್ಳುವಿಕೆ ಕ್ರಮಗಳು ಮತ್ತಷ್ಟು ಹೆಚ್ಚಾಗಿದೆ ಎಂದು ಈ ವರದಿ ಹೇಳುತ್ತದೆ. ಈ ರೀತಿಯ ಅಪರಾದಗಳ ಮಿತಿಮೀರುವಿಕೆಗೆ ಕಾರಣವೆಂದರೆ, ಡೊನಾಲ್ಡ್ ಟ್ರಂಪ್ ಅವರ ಮೂಲಕ ಯುಎಸ್ ಬೆಂಬಲವು ಇಸ್ರೇಲ್ ಆಡಳಿತಕ್ಕೆ ಧೈರ್ಯ ತುಂಬಿರುವುದು ಹಾಗೂ ಅಂತರಾಷ್ಟ್ರೀಯ ಸಮುದಾಯದ ನಿಷ್ಕ್ರಿಯತೆಯು ಇದಕ್ಕೆ ಕಾರಣವೆನ್ನಲಾಗಿದೆ.

ಜೂನ್ ತಿಂಗಳಲ್ಲಿ 15 ದಿನಗಳ ಅವಧಿಯಲ್ಲಿ ಇಸ್ರೇಲ್ 70 ಪ್ಯಾಲೇಸ್ಟಿನಿಯನ್ ಕಟ್ಟಡಗಳನ್ನು ಧ್ವಂಸ ಮಾಡಿದೆ. ಇದು 2020ರಲ್ಲಿ ಸರಾಸರಿ ಧ್ವಂಸಗಳ ಎರಡುವರೆ ಪಟ್ಟು. 90 ಜನರನ್ನು ಸ್ಥಳಾಂತರ ಮಾಡಿದ ಪರಿಣಾಮ, 280 ಜನರ ಜೀವನೋಪಾಯ ತೊಂದರೆಗೆ ಸಿಲುಕಿದೆ. ವಸಾಹತು ವಿಸ್ತರಣೆ ಮತ್ತು ಪ್ಯಾಲಿಸ್ತೈನ್ ಮೇಲಿನ ನಿರ್ಬಂಧಗಳ ವಿರುದ್ಧ, ಪಶ್ಚಿಮ ದಂಡೆಯಲ್ಲಿ ನಡೆದ ಪ್ರತಿಭಟನೆಯಲ್ಲಿ 9 ಮಕ್ಕಳು ಸೇರಿದಂತೆ 25 ಪ್ಯಾಲೇಸ್ಟಿನಿಯನ್ ಜನರನ್ನು ಇಸ್ರೇಲ್ ಭದ್ರತಾ ಪಡೆಗಳು ಹಿಂಸೆಗೈದು ಗಾಯಗೊಳಿಸಿದ್ದಾರೆ. ಆಕ್ರಮಿತ ಪಶ್ಚಿಮ ದಂಡೆ ಮತ್ತು ಪೂರ್ವ ಜೆರುಸೆಲಮ್ ನಲ್ಲಿ ಇಸ್ರೇಲ್ ಪಡೆಗಳು ನಡೆಸಿದ 120 ದಾಳಿಗಳಲ್ಲಿ 190 ಪ್ಯಾಲೇಸ್ಟಿನಿಯನ್ ರನ್ನು ಅಪಹರಿಸಲಾಗಿದೆ.


2006 ರಿಂದ ಗಾಜಾ ಪಟ್ಟಿಯ ಭೂಮಿ, ವಾಯು ಮತ್ತು ಸಮುದ್ರದ ದಿಗ್ಬಂಧನದ ಅಡಿಯಲ್ಲಿ ಪ್ಯಾಲೇಸ್ಟಿನಿಯನ್ ರ ಮೇಲೆ ದಾಳಿಗಳು ತೀವ್ರಗೊಂಡಿವೆ. ಕಳೆದ ಎರಡು ವಾರಗಳಿಂದ, ಕನಿಷ್ಟ 35 ಬಾರಿ ನೇರ ಬೆಂಕಿಯಿಂದ ದಾಳಿ ನಡೆಸಲಾಗಿದೆ. ಪ್ಯಾಲೇಸ್ಟಿನಿಯನ್ ಸುರಂಗಗಳನ್ನು ಹುಡುಕುವ ಮತ್ತು ನೆಲಸಮ ಮಾಡುವ ನೆಪದಲ್ಲಿ ಗಾಜಾ ಗಡಿಯ ಬಳಿ ಹಿಂಸಾತ್ಮಕ ಮತ್ತು ಅಕ್ರಮ ಭೂ–ನೆಲಸಮ ಕಾರ್ಯಾಚರಣೆ ನಡೆಸಲಾಗಿದೆ.

ಕೋವಿಡ್–19 ಮಹಾಮಾರಿ ರೋಗದ ಈ ಕಾಲದಲ್ಲೂ ಇಸ್ರೇಲ್, ಪ್ಯಾಲೆಸ್ತೈನ್ ಜನರ ಮೇಲಿನ ದಾಳಿಗಳು ಯುದ್ದ ಅಪರಾಧಗಳು ಹಾಗೂ ಮಾನವ ಹಕ್ಕುಗಳ ಉಲಂಘನೆ ಎಂದು ವರದಿ ಸ್ಪಷ್ಟಗೊಳಿಸಿದೆ.

ಪ್ಯಾಲೇಸ್ಟಿನಿಯನ್ ಪ್ರತಿಕ್ರಿಯೆ

ಇಸ್ರೇಲ್ ಸರಕಾರದ ನಡೆಯನ್ನು ಪ್ರತಿರೋಧಿಸಿ, ಆಕ್ರಮಿತ ಪ್ರದೇಶಗಳಲ್ಲಿ ಹಾಗೂ ವಿಶ್ವದ ಹಲವು ಕಡೆ ಪ್ರತಿಭಟನೆಗಳು ನಡೆದಿವೆ. ಜೂನ್ 30 ಮತ್ತು ಜುಲೈ 1 ರಂದು, ಗಾಜಾ ಮೂಲದ ಹಲವಾರು ಗುಂಪುಗಳು ಗಾಜಾ ನಗರದಲ್ಲಿ ಪ್ರತಿಭಟನೆಯನ್ನು ನಡೆಸಿದ್ದಾರೆ. ಇಸ್ರೇಲ್ ಆಕ್ರಮಿತ ಪ್ರದೇಶವನ್ನು ಸ್ವಾಧೀನ ಪಡಿಸಿಕೊಳ್ಳುವುದು ಅಂತರಾಷ್ಟ್ರೀಯ ಕಾನೂನು, ನಿರ್ಣಯಗಳು, ಸ್ವಾತಂತ್ರ್ಯ ಮತ್ತು ಸಮಾನತೆಗೆ ವಿಪತ್ತು ಎಂದು ಫತೆಹ್ ಪಕ್ಷ ತಿಳಿಸಿದೆ.

ಅಮೆರಿಕದ ಬರ್ನಿ ಸ್ಯಾಂಡರ್ಸ್, ಬ್ರಿಟನ್ನಿನ ಜೆರೆಮಿ ಕಾರ್ಬಿನ್ ರಂತಹ, ಅನೇಕ ಸಂಸದರು, ಹಾಗೂ 'ಬ್ಲಾಕ್ ಲೈವ್ಸ್ ಮ್ಯಾಟರ್ಸ್' ಸಂಘಟನೆ ಪ್ಯಾಲೇಸ್ಟಿನಿಯನ್ ರಿಗೆ ತಮ್ಮ ಸೌಹಾರ್ದ ಬೆಂಬಲವನ್ನು ವ್ಯಕ್ತ ಪಡಿಸಿದ್ದಾರೆ. ಇಡೀ ಕಾರ್ಮಿಕ ಚಳುವಳಿಯು ಪ್ಯಾಲೇಸ್ಟಿನಿಯನ್ ಜನರ ಪರವಾಗಿ ಮಾತನಾಡಬೇಕಾದ ಸಮಯ ಇದಾಗಿದೆ ಎಂದು ಜೆರೆಮಿ ಕಾರ್ಬೈಡ್ ಹೇಳಿದ್ದಾರೆ. ಒಟ್ಟಾರೆಯಾಗಿ ಪ್ಯಾಲೇಸ್ಟಿನಿಯನ್ ಜನರ ಹೋರಾಟಕ್ಕಾಗಿ ಅಂತರಾಷ್ಟ್ರೀಯ ಸೌಹಾರ್ದತೆ ಸಿಕ್ಕಿರುವುದು ಇಸ್ರೇಲ್ ಮತ್ತು ಅಮೆರಿಕದ ಪ್ಯಾಲೇಸ್ಟಿನಿಯನ್ ಅತಿಕ್ರಮಣಕ್ಕೆ ಎಷ್ಟು ತಡೆಯೊಡ್ಡಬಹುದು ಎಂಬುದನ್ನು ಕಾದು ನೋಡಬೇಕು.



JANASHAKTHI KANNADA VARA PATRIKE JULY 6-12, 2020 Price: Rs. 10/- Date of Publication: 3 JULY 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ರಾಜ್ಯದಾದ್ಯಂತ ಜುಲೈ 3ರ ಅಖಿಲ ಭಾರತ ಪ್ರತಿಭಟನೆ

ಪುಟ 8 ರಿಂದ


ಧಾರವಾಡ



ದಕ್ಷಿಣ ಕನ್ನಡ



ದಾವಣಗೆರೆ



ಉಡುಪಿ



ರಾಯಚೂರು



ವಿಜಯಪುರ



ಗಂಗಾವತಿ



ಬೆಂಗಳೂರು




ಮೈಸೂರು


ರಾಮದುರ್ಗ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**